UNIVERSAL LIBRARY
OU_198151
UNIVERSAL LIBRARY

SAMAJ BOOK-DEPOT
DHARWAR.

# ಗೋಮುಖವ್ಯಾಘ್ರ

ಶ್ರೀಪತಿ
ತಾ. ರಾ. ನಾಗರಾಜ

ಸುದರ್ಶನ ಪ್ರಕಟನಾಲಯ
ಬೆಂಗಳೂರು ೨

೧೯೫೦

ಬೇಕು. ಅದೇ ಪ್ರಗತಿಶೀಲತೆ. ಈಗಿನ ಸಮಾಜಕ್ಕೆ ಬೇಕಾದುದು ಅಂಥ ಸಾಹಿತ್ಯವೇ.

"ಹಿರಿಯರೊಬ್ಬರಂದಂತೆ 'ನಮ್ಮ ಸಾಹಿತಿಯದು ಬರುಡುಜೀವ. ಧ್ಯೇಯವಾದಿಯಾದ ಆ ಜೀವಕ್ಕೆ ನೀರೆರದು, ತಂಪಾದ ನೆರಳೊದಗಿಸಿ ಚಿಗುರೊಡೆಯುವಂತೆ ಮಾಡಿ ಚೇತನ ತುಂಬುವ ಕಾರ್ಯ ಜನತೆಯದು. ಅದು ಸಾಕಷ್ಟು ಪ್ರಮಾಣದಲ್ಲಾಗುತ್ತಿದೆಯೆನ್ನಲು ಶಕ್ಯವಿಲ್ಲ. ಮುಂದಾದರೂ ಆಗಲೆಂದು ಹಾರೈಸಬೇಕಾಗಿದೆ. ಎರಡುವರ್ಷಗಳ ಹಿಂದೆ ಪ್ರಕಟವಾಗುವುದೆನ್ನಿಸಿಕೊಂಡ ಈ ಸಂಕಲನ ಬೇರೆ ಹೆಸರುಹೊತ್ತು; ದಿನ ದಿನವೂ ಬೆನ್ನುತಟ್ಟಿ ಒಂದಲ್ಲ, ಹತ್ತು ತರಹೆ ನೆರವು ನೀಡಿದ ಗೆಳೆಯರ ಉತ್ಸಾಹ ಫಲದಿಂದ ಈಗ ಬೆಳಕು ಕಂಡಿದೆ.

"ನಾಡಿನಜನತೆಗೆ ಶ್ರೇಷ್ಠದರ್ಜೆಯ ವಿಚಾರಸಾಹಿತ್ಯ ಒದಗಿಸುವ ಧ್ಯೇಯದಿಂದ ಎರಡುವರ್ಷಗಳ ಹಿಂದೆ 'ಸುದರ್ಶನ' ಮಾಸಿಕ ಹೊರಟಿತು. ಆರ್ಥಿಕಾಭಾವದಿಂದ ಅದು ಬಾಲ್ಯಾರಿಷ್ಟಕ್ಕೆ ತುತ್ತಾಯಿತಾದರೂ, ತನ್ನ ಅತ್ಯಲ್ಪ ಜೀವಿತದಲ್ಲಿ ಅಖಂಡ ಕರ್ನಾಟಕದ ಎಲ್ಲ ದಿಕ್ಕಿನಲ್ಲೂ 'ಉತ್ತಮ ಪತ್ರಿಕೆ' ಎನಿಸಿಕೊಂಡ ಅದರ ಬಗ್ಗೆ ನನಗೆ ಹೆಮ್ಮೆಯಿದೆ.

"ಈಗಲೀಗ ಒಳ್ಳೆಯ ಸಾಹಿತ್ಯವನ್ನು ಆಗಿಂದಾಗ ಜನತೆಯ ಕೈಲಿಡಲು ಅನುಕೂಲಿಸಲೆಂದು 'ಸುದರ್ಶನ ಪ್ರಕಟನಾಲಯ' ಆರಂಭವಾಗಿದೆ. ಅದೂ ಯಶಸ್ವಿಯಾದಾತೆಂದು ನನ್ನ ನಂಬಿಕೆ. ಹಾಗಾಗಬೇಕಾದರೆ ಹಿರಿಯರ ಹರಕೆ, ಕಿರಿಯರ ನೆರವು; ಜನತೆಯ ಸಹಕಾರ ಹಸ್ತಬೇಕು. ಅದು ದೊರಕೀತೆಂಬ ಭರವಸೆ ನನಗಿದೆ."

ತಾ|| ೧೫-೯-೫೦

ಶ್ರೀಪತಿ.

'ಸುದರ್ಶನ' ಬೆಂಗಳೂರು ೨.

ನಮ್ಮ

ಜನ್ಮದಾತರ

ಅಡಿದಾವರೆಗಳಲ್ಲಿ

ಅರ್ಪಿತ

ಜೈ ಹಿಂದ್,

ಇದೋ ಸುದರ್ಶನ ಪ್ರಕಟನಾಲಯದ ಪ್ರಥಮ ಪ್ರಕಟಣೆ 'ಗೋಮುಖವ್ಯಾಘ್ರ' ಕಥಾಸಂಕಲನ ನಿಮ್ಮ ಮುಂದಿದೆ.

ಸ್ವಲ್ಪ ನಿಲ್ಲಿ; ಆತುರವೇಕೆ? 'ದಾನಶೂರ' ಆಗಲೇ ಕಣ್ಣಿಗೆ ಬಿದ್ದಿರಬೇಕು; ನಮ್ಮ ಹಳ್ಳಿಗಳ ಸ್ಥಿತಿ ಹೀಗೇಕೆ ಎನ್ನುವಿರಾ? ೧೩ ನೇ ಪುಟದಲ್ಲಿನ 'ಸ್ವರಾಜ್ಯ ದರ್ಶನ' ಓದಿದರೆ ಉತ್ತರ ದೊರೆತೀತು. ಭಾರತದ ಜನದ ಮನ ಇಂದು ಹೇಗಿದೆ ಎನ್ನುವಿರಾ? ಹಾಗಾದರೆ ೨೧ ನೇ ಪುಟದಲ್ಲಿನ 'ಶೀರ್ಷ ರಾಜ್ಯದಲ್ಲಿ' ಮತ್ತು ೫೬ರಲ್ಲಿರುವ 'ಗೋಮುಖವ್ಯಾಘ್ರ' ಓದಿ.

ಇನ್ನೂ ಏನಿದೆ ಎಂದಿರಾ? ನೀವೇ ನೋಡಿಕೊಳ್ಳಿ. ಹೊತ್ತಾಯಿತು.

ಬರುತ್ತೇನೆ, ಮತ್ತೆ; ನಮಸ್ತೆ.

# ದಾನಶೂರ

ನಮ್ಮ ಸಮಾಜದಲ್ಲಿ ಲಕ್ಷ್ಮೀನಾರಣಯ್ಯನವರಂಥಹ ವ್ಯಕ್ತಿಗಳು ವಿಪುಲವಾಗಿದ್ದಾರೆ. ಅಂಥಹವರುಗಳ 'ಬಂಡ್ವಾಳವಿಲ್ಲದ ಬಡಾಯಿ' ಕೊನೆಗೊಳ್ಳುವುದರಿಂದಲೇ ನಿರ್ಮಲ ಸಮಾಜ ಸೃಷ್ಟಿಯಾದೀತು . . .

ಗಾಂಧೀ ಚೌಕದ ಸತ್ಯನಾರಾಯಣ ಸ್ಟೋರ್ಸ್‌ನ, ಜಗುಲಿ ಅಂದ್ರೆ, ನಮ್ಮೂರಿನ ಹತ್ತು ಮಂದಿ ಸಮಸ್ತರು ರಾತ್ರಿವೇಳೆ ಸೇರಿ ಆ ಮಾತು ಈ ಮಾತನ್ನ ಲೋಕಾಭಿರಾಮವಾಗಿ ಮಾತನಾಡುವ ಒಂದು ರಂಗಸ್ಥಳ ಅಂತಲೇ ಹೇಳಬೇಕು.

ರಾತ್ರಿ ೯ ಗಂಟೆ ಹೊಡಿಯಬೇಕು; ಮೂಲೆಮನೆ ಶಾಮಣ್ಣ, ಆಚೆಮನೆ ತಿಪ್ಪಾಭಟ್ಟರು, ಲಕ್ಷ್ಮೀನಿವಾಸದ ಸಾಹುಕಾರ್ ಲಕ್ಷ್ಮೀನಾರಾಯಣಯ್ಯನವರು, ಕೊನೆಗೆ ಕೃಷ್ಣವಿಲಾಸದ—ಕೃಷ್ಣಾಚಾರ್ರು, ಸ್ಟ್ಯಾಂಪ್ ವೆಂಡರ್ ಗೋವಿಂದಯ್ಯ, ಅವರು ಇವರೂಂತ ಒಂದು ಕ್ಯಾಟಲಾಗ್ ಬರೆಯೋದೇನ್ಬಂತು, ಊರಿನ ಗಣ್ಯರು ಎಲ್ಲರೂ ಊಟವನ್ನು ಮುಗಿಸಿ, ಕೆಲವರಾದರೂ ಎಲೆ ಅಡಿಕೆ ಜಗಿಯುತ್ತಾ ಅಲ್ಲಿ ಸೇರುತ್ತಿದ್ದರು. ಕೋಟೆಮನೆ ಗುಂಡಹನುಮಂತಭಟ್ಟರಂತೂ ಆಗತಾನೇ ಊಟಮಾಡಿ ತಮ್ಮ ಬ್ರಹ್ಮಾಂಡ ಸ್ವರೂಪಿಯಾದ ಉದರವನ್ನು ಕೈಗಳಿಂದ ನೀವಿಕೊಳ್ಳುತ್ತಾ ರಾಜಠೀವಿಯಿಂದ ಅತ್ತ ಸಾಗುತ್ತಿರುವ ದೃಶ್ಯ–ನೋಡುವವರ ಕುತೂಹಲವನ್ನು ಕೆರಳಿಸಿ, ಕಣ್ಮನಗಳಿಗೊಂದು ವ್ಯಾಯಾಮವನ್ನುಂಟುಮಾಡದೆ ಬಿಡುತ್ತಿರಲಿಲ್ಲ. ಊರಿನ

ಹೆತ್ತು ಮಂದಿ ಸಮಸ್ತರಲ್ಲಿ ನಾನೂ ಒಬ್ಬತಾನೆ ? ನಾನೂ ಆಗಾಗ, ಕೊನೆಗೆ ವಾರಕ್ಕೊಂದು ಬಾರಿಯಾದರೂ ಆ ಜಗುಲಿಯನ್ನು ಸಂದರ್ಶಿಸುತ್ತಿದ್ದೆ. ಮಾತುಗಳಿಗೇನು ರೇಷನ್ ಇದೆಯೇ ? ಮಾತನಾಡೋ ಅವಕಾಶಕ್ಕೆ ಅಭಾವ ವಿದ್ದರೆ ತಾನೇ ಕ್ಯೂ ನಿಲ್ಲಬೇಕೇನೋ ಅನ್ನೋ ಭಯ ಬಂದಾತು ? ಎದುರು ಮನೆ ಪಕ್ಕದ ಮನೆಯ ವಿಷಯಗಳಿಂದ ಮಾತುಕತೆಗಳು ಆರಂಭವಾಗಿ, ಊರಿನ ರಾಜಕೀಯವನ್ನೆಲ್ಲಾ ಹಾರಿಸಿ, ಸಂಸ್ಥಾನದಲ್ಲಿನ ವಿಶೇಷ ಪರಿಸ್ಥಿತಿಗಳನ್ನು ಪರಿಶೀಲಿಸಿ, ಮಂತ್ರಿಗಳನ್ನು ಕೆಣಕಿ, ನಂತರ ಬೊಂಬಾಯಿ, ಡೆಲ್ಲಿ, ಕಾಶ್ಮೀರ್, ಹೈದರಾಬಾದುಗಳಿಗೆ ಹಾರಿ, ರಾಷ್ಟ್ರ ನಾಯಕರು, ನೆಹ್ರೂ, ಬಾಪೂ, ಪಟೇಲ್, ನಿಜಾಮು, ಎಲ್ಲರ ಸುದ್ದಿಯನ್ನೂ ತಿರುವಿಹಾಕಿ, ಏನು ಕೇಡುಗಾಲ ಬಂತೋ ಕಲಿಯುಗಾಂತ್ಯಕಾಲ ಅಂತ ಗುಂಡ ಹನುಮಂತಭಟ್ಟರು ಭವಿಷ್ಯ ನುಡಿದು, ಆಚೆಮನೆ ತಿಪ್ಪಾಭಟ್ಟರು ಹೊತ್ತೆಷ್ಟಾಯ್ತು ಸಾಹುಕಾರ್ರೇ ? ಅಂತ ಲಕ್ಷ್ಮೀನಾರಣಯ್ಯನವರನ್ನು ಕೇಳಿ, ಅವರಾಗಲೇ ೧೨ ಆಯ್ತು ಅಂದ ಮೇಲೆ, ಅಷ್ಟೊತ್ತಾಗಿಹೋಯ್ತು................ಇನ್ನು ಹೋಗೋಣ ಅಂತ ಇಬ್ಬರಬಾಯಿಂದಲಾದರೂ ಹೊರಬಿದ್ದ ಮೇಲೆ, ಆಗತಾನೇ ಲಗ್ನವಾಗಿದ್ದು ಪತ್ನಿಯನ್ನು ಮನೆಗೆ ಕರೆದು ತಂದಿದ್ದ ಶಾಮಣ್ಣನ್ನ ಹೊತ್ತಾಯ್ತೇನೋ ? ಪಾಪ ! ಅಂತ ಹಂಗಿಸಿ ಅಂತೂ ೧೨-೩೦ ರೊಳಗಾಗಿ ಎಲ್ಲರೂ ಮನೆಗಳಿಗೆ ಹಿಂತಿರುಗುತ್ತಿದ್ದರು.

ಇದು ಪ್ರತಿದಿನದ ಕ್ರಮ.

ಅಂದು ಭಾನುವಾರ. ಆಗತಾನೇ ಊಟಮುಗಿಸಿ, ನಾನೂ ಅತ್ತಲೇ ಹೊರಟೆ. ನಾನು ಹೋಗುವ ವೇಳೆಗಾಗಲೇ ಎಲ್ಲರೂ ಸೇರಿಬಿಟ್ಟಿದ್ದರು. ನಾನೇ ಲೇಟ್ ಲತೀಫ್ ಆ ದಿನ !

ಸಾಹುಕಾರ್ ಲಕ್ಷ್ಮೀನಾರಾಯಣಯ್ಯನವರೇ ಮಾತನಾಡಿಸಿದರು. “ ನಿಮ್ಮನ್ನೇ ನೆನೆಸಿದ್ವು. ನೀವೂ ಬಂದಿರಿ. ನಿಮಗೆ ನೂರುವರ್ಷ ಆಯಸ್ಸು’ ಅಂದರು ದೇಶಾವರಿನಗೆ ಬೀರುತ್ತಲೇ.

‘ ಅಂತಹ ವಿಶೇಷವೇನು ಸಾಹುಕಾರ್ರೇ ? ’

“ ಮತ್ತೇನಿಲ್ಲ. ಈಗ ನಮ್ಮ ಕಮಿಟೀಲಿ........ಕಮಿಟಿ ಅಂದ್ರೆ ಚಪ್ಪೇನು ?..................ಕೃಷ್ಣಾವಿಲಾಸದ ಕೃಷ್ಣಾಚಾರ್ರು ಬಂಗಾಳ

ನಿರಾಶ್ರಿತರ ವಿಷಯ ಮಾತನಾಡಿದ್ರು........ಅಬ್ಬಾ ಸಾವಿರಾರು ಮಂದಿ ಬರ್ತ್ತಿದಾರಂತೆ........!"

"ಬರ್ತ್ತಿದಾರಂತೆ ಅನ್ನೋದೇನ್ಬಂತು, ಸಾಹುಕಾರ್ರೇ? ಬೆಂಗಳೂರಿಗೂ ಆಗಲೇ ಬಂದಿಳಿದ್ಬಿಟ್ಟಿದ್ದಾರೆ........ಪೇಪರುಗಳಲ್ಲಿ ನೋಡ್ತಿಲ್ವೇ? ಸಂಸ್ಥಾನಾದ್ಯಂತ ಬಂಗಾಳ ನಿರಾಶ್ರಿತರ ನಿಧಿಯನ್ನೆತ್ತುತ್ತಿದ್ದಾರೆ ಅನ್ನೋ ಸಮಾಚಾರವನ್ನ........"

ನಾನು ನಡುವೆ ಬಾಯಿಹಾಕಿದೆ.

"ಅದೇ ವಿಷಯ ನೋಡಿ, ಪಾಪ, ಎಲ್ಲಿಂದ ಬಂದಿರ್‍ತಾರೆ? ಮನೆಮಠ ಎಲ್ಲಾ ಬಿಟ್ಟು ಬಂದಿರ್‍ತಾರೆ. ಎಷ್ಟು ಕಷ್ಟವೋ ಏನೋ? ಅವರಿಗೆ ಸಹಾಯ ಮಾಡೋದು ಧರ್ಮಾನ್ನಿ. ನೋಡಿ ಮತ್ತೆ, ಕೃಷ್ಣಾಚಾರ್ರು ಈ ಸಂಗತಿ ನೆನಪುಮಾಡಿದಮೇಲೆ ನಮ್ಮೂರಲ್ಲೂ ಒಂದಷ್ಟು ನಿಧಿ ಶೇಖರಣೆ ಅಂತ ಮಾಡಬಾರದೇ?" ಅಂತ ನಾನು ಸೂಚಿಸ್ದೆ.

"ಅಗತ್ಯವಾಗಿ ಮಾಡಬಹುದು, ಕೊಡುವವರಿದ್ದರೆ! ಬಹಳ ಒಳ್ಳೆಯ ಕೆಲಸ. ಮನುಷ್ಯಮಾತ್ರನಾದವನು ಮಾಡಬೇಕಾದದ್ದು. ನಾಳೆ ನಾವು ಕಷ್ಟಕ್ಕೆ ಸಿಕ್ಕಿದಾಗ ಯಾರಾದರೂ ನಮಗೂ ಸಹಾಯಮಾಡಬೇಕಲ್ಲ"

ನಾನೂ ದನಿಗೂಡಿಸಿದೆ.

'ಇಷ್ಟಂದು ಜಾರಿಕೊಳ್ಳೋಣಾಂತ ಮಾಡಿದ್ರೇನೋ? ನೀವು ಸ್ವತಃ ನಿಂತು ಚಂದಾ ವಸೂಲ್ಮಾಡಬೇಕು. ನೀವು ಇಲ್ಲಾಂದ್ರೆ ಈ ಊರ್ನಲ್ಲಿ ಈ ಕೆಲಸ ಮಾಡೋ ಭೂಪತಿ ಯಾರಿನ್ನ?' ಸಾಹುಕಾರ್ರು ಹೇಳಿದರು.

'ಹೌದು. ಇವನ್ನ ಬಿಟ್ರೆ ಈ ಕೆಲಸಕ್ಕೆ ಲಾಯಕ್ಕಾದ ಆಸಾಮಿಗಳಾರೂ ಇಲ್ಲ ನಮ್ಮಕ್ಕೆ.' ಅಂತ ಗುಂಡಹನುಮಂತಭಟ್ಟರೂ ಬಾಯಿಹಾಕಿದರು, ಕೈಯಿಂದ ಹೊಟ್ಟೆ ನೀವಿಕೊಳ್ಳುತ್ತಲೇ.

ಕೆಲಸ ಮಾಡಬೇಕಾದುದೇ ಆಗಿದ್ದರೂ, ನಮ್ಮೂರಿನಂತಹ ಕುಗ್ರಾಮದಲ್ಲಿ ಚಂದಾ ವಸೂಲ್ಮಾಡುವ ಕೆಲಸದ ಕಷ್ಟದ ಅರಿವು ಈಗಾಗಲೇ ಹಲವಾರು ಸಾರಿ ಆ ಕೆಲಸಕ್ಕೆ ಕೈಹಾಕಿ–ನನಗೆ ಚನ್ನಾಗಿ ಆಗಿತ್ತು.

ಚಂದಾ ಹಣಕ್ಕೆಂದು ಹೋದಾಗ ಚಿತ್ರವಿಚಿತ್ರಗಳು ಸಂಭವಿಸುತ್ತವೆ.

ಹತ್ತಾರು ವರ್ಷಗಳಿಂದ ಹುಲಿ- ಹಸುಗಳಂತಿದ್ದ ಅಣ್ಣತಮ್ಮಂದಿರು ಒಂದಾಗಿ ಬಿಡುತ್ತಾರೆ. ಅಣ್ಣ ಕೊಟ್ಟಮೇಲೆ ನನ್ನದೇನು ? ಅನ್ನುತ್ತಾರೆ.

ತಂದೆಯಿದ್ದರೆ ಮಗ ಬರಲಿ ಎಂದೂ, ಮಗನಿದ್ದರೆ ತಂದೆ ಬರಲಿ ಎಂದೂ ಹೇಳುತ್ತಾರೆ.

ಇಬ್ಬರೂ ಇದ್ದಾಗ "ಕಾಲಕೆಟ್ಟುಹೋಯ್ತು. ಯಾವ ಬಾಬಿನಲ್ಲೂ ಈ ವರ್ಷ ಆದಾಯವೇ ಇಲ್ಲ" ಎಂದು ಪುರಾಣ ಆರಂಭಿಸುತ್ತಾರೆ.

'ಕೊಟ್ಟುಬಿಡ್ತೇನೆ ಆ ಕಡೆ ಹೋಗಿಬನ್ನಿ, ಮತ್ತೆ ಬನ್ನಿ; ಇಗೋ ಅಗೋ' ಅಂತ ಓಡಾಡಿಸಿ ಕೊನೆಗೆ ನುಸಿದುಕೊಳ್ತಾರೆ.

ನಮ್ಮದೇನು ಮಹಾ ? ದೊಡ್ಡವರಿದಾರಲ್ಲ ಅವರು ಹಾಕಲಿ, ಇವರು ಹಾಕಲಿ, ಅಂತಾರೆ. ಇನ್ನೂ ಎಷ್ಟೋ ವಿಧ. ಚಂದಾ ಎತ್ತಲು ಹೋಗಿ ಈ ಚಿತ್ರವಿಚಿತ್ರಗಳನ್ನು ಕಣ್ಣಾರೆ ಕಂಡು, ಆ ಅನುಭವ ಪಡೆಯಬೇಕು ಅಷ್ಟೆ. ಇದೆಲ್ಲವನ್ನೂ ಅರಿತಿದ್ದ ನಾನು ಅಷ್ಟು ಸುಲಭವಾಗಿ ಒಪ್ಪಲಿಲ್ಲ.

'ಬಿಡೀ ಸಾಹುಕಾರ್ರೇ, ಎಲ್ಲರೂ ಬಾಯಲ್ಲಿ ಹಾಗೆ ಹೀಗೆ ಅಂತ ಬಂಡ್ವಾಳ ವಿಲ್ಲದ ಬಡಾಯಿ ಹೇಳ್ತಾರೆ. ಚಂದಾ ಸುದ್ದಿ ಬಂದಾಗ ಮರೆಯಾಗಿ ಹೋಗ್ತಾರೆ. ಈ ತಂಟೆಯೇ ಬೇಕಿಲ್ಲ. ಕೇಂದ್ರ ನಿಧಿ ಸಮಿತಿಗೆ ನನಗೆ ದೇವರು ಕೊಟ್ಟಿದ್ದನ್ನು ಕಳಿಸಿಬಿಡ್ತೇನೆ ?' ಎಂದೆ ನಾನು ಭಾರವಾದ ಮನಸ್ಸಿನಿಂದಲೇ.

"ಹಾಗಂದರೆ ಆಗುತ್ಯೇ ? ನೀವು ಸಮಾಜ ಸೇವಕರು. ಕಹಿ- ಸಿಹಿಗಳ ನ್ನುಣ್ಣಲೇಬೇಕು. ನೀವೇ ಬೇಸರಪಟ್ಕೊಂಡ್ರೆ........ಒಳ್ಳೇ ಕೆಲಸ, ನಾಳೆಯೇ ಆರಂಭಿಸಿಬಿಡಿ. ಇದೊಂದ್ಸಾರಿ ನೋಡಿ" ಎಂದು ಸಾಹುಕಾರರು ಒತ್ತಾಯ ಪಡಿಸಿದರು.

"ನಾನೂ ನಿನ್ನ ಜೊತೇಲೇ ಬರ್‍ತೀನೊ" ಅಂತ ಹೇಳಿದ ಆ ಸ್ಟಾಂಪೆಂಡರ್, ಗೋವಿಂದಯ್ಯ.

ವಿಧಿಯಿಲ್ಲದೆ ಮನಸ್ಸಿಲ್ಲದ ಮನಸ್ಸಿನಿಂದಲೇ "ಏನೇನ್ಮಾಡ್ತೀರೋ ಮಾಡಿ" ಅಂತ ಒಪ್ಪಿಗೆ ಕೊಟ್ಟೆ.

ಮಾರನೆದಿನವೇ ಚಂದಾಪಟ್ಟಿ ಹಿಡಿದು ಊರಿನಲ್ಲೆಲ್ಲಾ ಗಸ್ತು ಹೊಡೆಯ ಲಾರಂಭಿಸಿದೆ. ಮತ್ತೆ ಅದೇ ಮೊದಲಿನ ಅನುಭವವೇ. ನಾಯಿಬಾಲ ನೇರವಾಗುವುದೂ ಉಂಟೇನು ?

ಆದರೂ ಎಲ್ಲರಿಂದಲೂ ಅವರವರ ಯೋಗ್ಯತಾನುಸಾರ ಬಿಡದೆ ಬಲಾತ್ಕರಿಸಿ ಚಂದಾ ಹಾಕಿಸಿದೆ. ಹಾಕಿಸಿದ್ದೇ ಅಲ್ಲ; ವಸೂಲ್ಮಾಡಿದೆ.

ಒಬ್ಬಿಬ್ಬರಂತೂ "ನಿಮ್ಮ ಕೆಲಸ ಬಹಳ ಒಳ್ಳೆಯದು" ಅಂತ ನಾವು ಕೇಳುವುದಕ್ಕಿಂತ ಮೊದಲೇ ಶಕ್ತಿಮೀರಿ ಕೊಟ್ಟರು.

ಹೆಚ್ಚುಕಡಿಮೆ ಎಲ್ಲವನ್ನೂ ತೀರಿಸಿಕೊಂಡು 'ಲಕ್ಷ್ಮೀ ನಿವಾಸಕ್ಕೆ' ನಾನೊಬ್ಬನೇ ಹೊರಟೆ.

ಸುಮಾರು ೧ ಗಂಟೆ ಸಮಯ. ಲಕ್ಷ್ಮೀನಾರಣಯ್ಯನವರು ಆಗತಾನೇ ಊಟ ಮುಗಿಸಿ ಎಲೆಅಡಿಕೆ ಜಗಿಯುತ್ತಿದ್ದರು. ನನ್ನ ಮುಖ ಕಂಡೊಡನೆ ಒಳಕ್ಕೆ ಆದರದಿಂದ ಕರೆದೊಯ್ದರು.

"ತೆಗೆದುಕೊಳ್ಳಿ" ಎಂದು ಬಲಾತ್ಕಾರದಿಂದ ಎಲೆ ಅಡಿಕೆ ಕೊಟ್ಟರು.

'ಏನು ಸಮಾಚಾರ, ಇಷ್ಟುದೂರ ಬಂದಿರಲ್ಲಾ ?'

"ಅಂತಹುದೇನೂ ಇಲ್ಲ. ನಿನ್ನೆ ರಾತ್ರಿ ತಾವು ಸೂಚಿಸಿದ್ದಿರಲ್ಲಾ ? ಬಂಗಾಳ ನಿರಾಶ್ರಿತರ ನಿಧಿ ಕೂಡಿಸೋಣ ಅಂತ."

"ಹೌದು ಎಲ್ಲಿಯವರೆಗಾಯಿತು ?"

"ಹೆಚ್ಚುಕಡಿಮೆ ಎಲ್ಲಾ ಮುಗಿಯಿತು ಇನ್ನು ಉಳಿದಿರುವುದು ತಮ್ಮದೇ"

"ನನ್ನದೇನುಮಹಾ? ಲೆಕ್ಕಕ್ಕಿಲ್ಲ ಬುಕ್ಕಕ್ಕಿಲ್ಲ! ಅದಿರಲಿ, ಎಷ್ಟಾಯಿತು ಒಟ್ಟು ಮೊಬಲಗು ?

"ನೂರ ಐವತ್ತೈದೂ ಚಿಲ್ಲರೆ"

"ಪರವಾಇಲ್ಲ !"

"ಇನ್ನೂರಕ್ಕಾದರೂ ತಾವು ಭರ್ತಿಮಾಡಿಬಿಡಬೇಕು"

"ಅವಸರವೇನು? ನಿಜವಾಗಿ ಹೇಳಿ. ನಾನು ಒತ್ತಾಯ ಮಾಡ್ದೆ ಇದ್ದಿದ್ರೆ ನೀವು ಈ ಕೆಲಸ ಮಾಡ್ತಾಇದ್ರೇನು ?"

'ಖಂಡಿತ ಇಲ್ಲ ಇಷ್ಟೆಲ್ಲಾ ಆದದ್ದೂ ನಿಮ್ಮಿಂದಲೇ ನೀವು ಐವತ್ತೂ ಚಿಲ್ಲರೆ ಕೊಡೋದಿರಲಿ. ಈ ಇನ್ನೂರನ್ನು ತಾವೇ ಕೊಟ್ಟಹಾಗಾಯ್ತು.'

'ಅದರಲ್ಲೇನೂ ಸಂಶಯವಿಲ್ಲತಾನೇ ?'

'ಉಂಟೇ'

" ಸರಿ ಹೋಗಿ ! "

' ಇದೇನು ಸಾಹುಕಾರ್ರೇ ! ನೀವೇ ಎಷ್ಟೋ ಹೇಳಿದ್ರಿ.....ಅದೆಲ್ಲಾ ಬಂಡ್ವಾಳವಿಲ್ಲದ ಬಡಾಯೇನೇ ?' ನಾನು ಹಂಗಿಸಿದೆ.

' ಆಗಬೇಕಾಗಿದ್ದದ್ದು ನಿಧಿ. ಆಗಿಹೋಯಿತು. ಅದೂ ನಮ್ಮಿಂದಲೇ ಅಂತ ನೀವೇ ಹೇಳಿದ್ರಿ ! ಇನ್ನೇನಾಗಬೇಕು? ನನ್ನಿಂದಾಗೋದನ್ನ ಮಾಡಿ ಬಿಟ್ಟಿ ! '

" ಉಂಟೇ ಸಾಹುಕಾರ್ರಿ ! "

" ಬೇರೆ ಮಾತೇ ಬೇಡ. ನನಗೂ ಕೆಲಸ ಇದೆ. ಬರ್ತೇನೆ. ನಮಸ್ಕಾರ....... "

ನಾನು ಮತ್ತೆ ಬಾಯಿಬಿಡುವಷ್ಟರಲ್ಲಿ ಸಾಹುಕಾರರು ಎಲೆಅಡಿಕೆ ತಟ್ಟೆಯನ್ನು ತೆಗೆದುಕೊಂಡು ಒಳಕ್ಕೆ ಹೊರಟೇಬಿಟ್ಟರು.

ನಾನು ಪೆಚ್ಚಾದೆ. " ಎಂತಹ ಘಾಟಿ ?" ಅನ್ನಿಸಿತು. ಮಾಡುವುದೇನು ? ಮಂಕನಂತೆ ಲಕ್ಷ್ಮೀನಿವಾಸದಿಂದ ಹೊರಬಿದ್ದೆ. ದಾರಿಯುದ್ದಕ್ಕೂ ಯಾರೋ ನನ್ನ ಕಿವಿಗಳಲ್ಲಿ ಹೇಳುವಂತಿತ್ತು—' ದಾನಶೂರ !' ಎಂತ.

---

# ಅಂತರಂಗ ಬಹಿರಂಗ

ನಿತ್ಯದ ಜನಜೀವನದಲ್ಲಿ ಹೇಳುವುದೊಂದಾ ಮಾಡುವುದೊಂದು ಹೆಚ್ಚುತ್ತಿದೆ. ಪುರಾಣ ಹೇಳುವವರೇ ಬದನೇಕಾಯಿ ತಿನ್ನಲಾರಂಭಿಸಿರುವಾಗ ಸುಖಮಯ ಸಮಾಜ ಎಲ್ಲಿಂದ ಹೇಗೆ ತಾನೇ ಬಂದಾತು? ದೇಶದ ಬಡ ಜನತೆಯಲ್ಲಿ ಕ್ರಾಂತಿ ಕಿಡಿಗಳು ಭೀಕರರೂಪ ತಾಳದಿದ್ದಾವು?

ಪ್ರಾತಃಕಾಲ ೯ ಗಂಟೆಯ ಸಮಯ. ತಂಪಾದ ಗಾಳಿ ಬೀಸುತ್ತಲಿತ್ತು. ಲಾಲ್‌ಬಾಗ್ ರಸ್ತೆಯ ಕೊನೆಯಲ್ಲಿನ ವಿಶಾಲ ಸೌಧ. 'ಪ್ರಜಾವೀರ' ಪತ್ರಿಕೆಯ ದೊಡ್ಡ ಬೋರ್ಡು ಎದ್ದು ಕಾಣುತ್ತಲಿದೆ, ಅತ್ತ ದೃಷ್ಟಿ ಬೀರುವವರಿಗೆಲ್ಲ.

ಕಛೇರಿಯ ಆಳು ಮಾದ, ಆಗ ತಾನೇ ಕಸವನ್ನೆಲ್ಲ ಹೊಡೆದು ಮೇಜು ಕುರ್ಚಿಗಳನ್ನೆಲ್ಲ ಒರೆಸಿ, ತನ್ನ ಆಗಿನ ಕೆಲಸವನ್ನು ಮುಗಿಸಿ, ಬಾಗಿಲ ಬಳಿ ನಿಂತಿದ್ದಾನೆ. ಇನ್ನೂ ಸಂಪಾದಕರು ಬಂದಿರಲಿಲ್ಲ. ಮಾದನ ಮುಖದಲ್ಲಿ ದೈನ್ಯತೆ ಮೂಡಿದೆ. ತಲೆ ಕೂದಲು ಕೆದರಿದೆ. ಮುಖ ಮ್ಲಾನವಾಗಿದೆ. ಉಟ್ಟಿದ್ದೊಂದು ಧೋತ್ರ ಮೊಣಕಾಲ ಮೇಲಕ್ಕೆ. ಅದೂ, ಎಷ್ಟೋ ದಿನಗಳಿಂದ ಒಗೆಯದೆ ಕೆಂಬಣ್ಣಕ್ಕೆ ತಿರುಗಿದೆ. ಒಂದು ಬನೀನು, ಅದರ ಮೇಲೊಂದು ಕೋಟು ಹಾಕಿದ್ದಾನೆ. ಹೌದು. ಎರಡನ್ನು ಹಾಕಿಕೊಂಡಿದ್ದರೂ ಮೈಯ ಬಹುಭಾಗ ಕಾಣಿಸುತ್ತಿದೆ. ಕಾರಣ? ಶತಛಿದ್ರಮಯ ಆ ಬಟ್ಟೆಗಳು.

ನನ್ನ ಲೇಖನಗಳ ಬಗ್ಗೆ ಸಂಪಾದಕರೊಡನೆ ಮಾತನಾಡುವ ಆವಶ್ಯಕತೆಯಿದ್ದುದರಿಂದ ನಾನು ಅಂದು 'ಪ್ರಜಾವೀರ' ಕಛೇರಿಗೆ ಹೋಗಿದ್ದೆ.

ನನ್ನ ದೃಷ್ಟಿಯನ್ನು ಸೆಳೆದ ಮೊಟ್ಟಮೊದಲನೆಯ ವ್ಯಕ್ತಿ ಮಾದ.

‘ ಸಂಪಾದಕರಿದ್ದಾರೇನಪ್ಪ ?’

‘ ಸ್ವಾಮಿಯವರ, ಬುದ್ಧಿ....’

‘ ಹುಂ ’

‘ ಇನ್ನೂ ಬಂದಿಲ್ಲ ಬುದ್ಧಿ....’

‘ ಇನ್ನೂ ಎಷ್ಟೊತ್ತಾಗುತ್ತೆ ?’

‘ ಇನ್ನೇನು ಬರೋ ಹೊತ್ತೇ ಆಗದೇರಿ....‘ ಒಳಗೆ ಕೂತ್ಕೊಳ್ಳಿ.... ಬಂದ್ಬಿಡ್ತಾರೆ....’ ಸರಿ. ನಾನು ಒಳಗೆ ಹೋಗಿ ಕುಳಿತೆ. ಬೇರೆ ಯಾರೂ ಇರಲಿಲ್ಲ. ಮಾದನ ಚಿಂತಾಜನಕ ಮುಖವನ್ನು ಕಂಡು ‘ ಏನಯ್ಯಾ ಬಹಳ ಯೋಚನೆಮಾಡ್ತಾ ಇರೋ ಹಾಗಿದೆಯಲ್ಲಾ ?’ ಎಂದು ಕೇಳಿದೆ ನಾನು.

‘ ಮನೇಲಿ ಮಗ ಕಾಯಿಲೆ ಬುದ್ಧಿ. ಹೆಂಗಸರಾರೂ ಇಲ್ಲ....’

‘ ಹೆಂಡತಿ ಇಲ್ವೇ ?’ ಸರ್ರನೆ ಹೊರಬಿತ್ತು ನನ್ನ ಬಾಯಿಂದ.

‘ ಹೆಂಡತಿ ?’ ಮಾದ ಸ್ವಲ್ಪ ಹೊತ್ತು ಸುಮ್ಮನಿದ್ದ. ಅವನ ಕಣ್ಣಿನಲ್ಲಿ ಎರಡು ಹನಿ ನೀರು ಕಾಣಿಸಿಕೊಂಡವು.

‘ ಎರಡು ವರ್ಷದ ಕೆಳಗೆ ಅವಳೂ ಕಾಯಿಲೆ ಬಿದ್ದಿದ್ಳು ಬುದ್ಧೀ.... ಈ ಹಾಳು ಕೆಲಸಕ್ಕೆ ಸೇರಿಕೊಂಡು....ಅವಳು ಸಾಯೋಕಾಲದಾಗೂ ಅವಳ ಪಕ್ಕದಲ್ಲಿರಲಾಗಲಿಲ್ಲ....ನಮ್ಮ ಸಾಮಿಗಳು ಬಹಳ ಖೈಡು....ಒಂದು ದಿನ, ತಪ್ಪಿಸಿಕೊಳ್ಳೋಕೂ ಬಿಡೋಲ್ಲ....ಮಾತನಾಡಿದರೆ, ವಜಾ....ಅಂತಾರೆ.... !’

‘ ಅಷ್ಟು ಕಠಿಣ ಮನುಷ್ಯರೇ ಅವರು ? ಈ ಕೆಲಸವಲ್ಲದಿದ್ದರೆ ಇನ್ಯಾವ ಕೆಲಸಾನೂ ಇಲ್ವೇ ?’

‘ ಬಡವರನ್ನ ಯಾರು ಕೇಳ್ತಾರೆ ಸಾಮೀ....ಇದನ್ನು ಬಿಟ್ಟು ಹೋದರೆ, ಇದಕ್ಕೂ ಕಲ್ಲು ಬೀಳುತ್ತದೆ....ಬೇರೆ ಕೆಲಸಾನೂ ಸಿಕ್ಕೋದಿಲ್ಲ....ಒಟ್ನಲ್ಲಿ ಬಡವರ ಬಾಳೇ ಹಿಂಗೆ ಸಾಮೀ....ಮನೇಲಿ ಮಗ ಒಬ್ನೇ ಸಾಯ್ತಾ ಬಿದ್ದಿದಾನೆ....ಅವನ್ನ ನೋಡ್ಕೊಳ್ಳೋಕೂ ದೇವರು ಹಣೇಲಿ ಬರ್ದಿಲ್ಲ....ಔಷಧಕ್ಕೆ ಹಣವೆಲ್ಲಿ ? ಸಾಮಿಗಳು ಬಂದರೆ ಅವರನ್ನು ಕೇಳಿಕೊಂಡು ಹೋಗಬೇಕು.... ಇನ್ನೂ ಏನಂತಾರೋ... ’

ನಾನು ಮಾರುತ್ತರ ಕೊಡಲಿಲ್ಲ. ಬಡವರ ಬಾಳೇ ಇಷ್ಟೆ ? ಇವರುದ್ಧಾರ ಆಗುವುದು ಬರಿಯ ಕನಸೇನೇ ? ಇವರ ಮೋಕ್ಷಕ್ಕೆ ದಾರಿಯೇ ಇಲ್ಲವೇ ?

ಎಂತಹ ವಿಚಿತ್ರ ಪ್ರಪಂಚ ಇದು? ಎಂಬೆಲ್ಲ ಯೋಚನಾ ಲಹರಿಗಳು ಮನೋರಂಗವನ್ನಾಕ್ರಮಿಸಿದವು........

೯-೩೦ ಆಯಿತು. ಅಷ್ಟರಲ್ಲಿ ಸಂಪಾದಕರು ದಯಮಾಡಿಸಿಯೇ ಬಿಟ್ಟರು. 'ನಮಸ್ಕಾರ' ಅಂದೆ. ಸರಿ. ಬದಲು 'ನಮಸ್ಕಾರ' ಬಂದಿತು.

'ಏನಿಷ್ಟು ದೂರ; ಅಪರೂಪ ದರ್ಶನ?'

ಸಂಪಾದಕರು ನಗುತ್ತಲೇ ಕೇಳಿದರು.

'ಅದೇ ಆ ಲೇಖನಗಳ ಬಗ್ಗೆ ಮಾತಾಡೋಣ ಅಂತ ಬಂದಿದ್ದೆ........ ಇರಲಿ. ಅಲ್ನೋಡಿ. ನಿಮ್ಮ ಜವಾನ ಕಾದಿದಾನೆ........'

'ಬೆಳಗಾದರೆ ಅವನ ಪುರಾಣ ಇದ್ದೇ ಇರುತ್ತೆ. ......ಏನೋ ಮಾದ ಈವೊತ್ತು?' ಅತ್ತ ತಿರುಗಿದರು ಸಂಪಾದಕರು.

'ಸ್ವಾಮೀ. ಹೈದ ಹಾಸಿಗೇಲವನ್ರಿ. ಈವೊತ್ತೊಂದು ದಿನ ರಜ ಕೊಟ್ಬುಡಿ ಬುದ್ಧಿ. ಒಸಿ ಗಂಜಿ ಗಿಂಜಿ ಕಾಸಿ ಹಾಕ್ತೇನೆ........'

'ಈ ಕಳ್ಳಾಟಗಳೆಲ್ಲಾ ನನಗೆ ಗೊತ್ತಿದೆ ಕಣೋ. ಅದೆಲ್ಲಾ ಆಗೋದಿಲ್ಲ. ನಿನ್ನ ಜವಾನ ಚಾಕರಿ ನಾನು ಮಾಡಬೇಕೇನು?'

ಧ್ವನಿ ಗಡುಸಾಗಿತ್ತು.

'ಸ್ವಾಮೀ... ನೀವು ಹಾಂಗಂದ್ರೆ ಹ್ಯಾಗರಿ....ಸಾಯೋ ಹಂಗವ್ನ್ರಿ. ಇನ್ಮೇಲೆ ಯಾವೊತ್ತೂ ರಜ ಬೇಡ. ಈವೊತ್ತೊಂದು ದಿನ ರಜ ಕೊಡಬೇಕು ಸಾಮೀ........'

'ಮತ್ತದೇ. ಹೇಳಿದ್ದೇ ಹೇಳೋ ಕಿಸಬಾಯಿದಾಸ ಅಂತ! ಆಗೋ ದಿಲ್ಲಾಂದ್ಮೇಲೆ ಆಗೋಲ್ಲ........ಒಂದೇ ಮಾತು!'

'ಸಾಮೀ........'

ಹೃದಯವಿದ್ರಾವಕವಾದ ಮಾದನ ಕೂಗು ಹೊರಟಿತು. ಬೇರಾವ ಶಬ್ದಗಳೂ ಅವನ ಬಾಯಿಂದ ಹೊರಬೀಳಲಿಲ್ಲ.

'ಹೋಗು–ಕೆಲಸ ನೋಡ್ಕೋ........'

ಮಾದ ಮಾತನಾಡಲಿಲ್ಲ.

ಸಂಪಾದಕರು ಮತ್ತೆ ನನ್ನ ಕಡೆ ತಿರುಗಿದರು. 'ಎಲ್ಲಾ ಮೋಸಗಾರರು. ಆಟ ಆಡ್ತಾರೆ. ಇವರಿಗೆಲ್ಲಾ ಸದರಕೊಟ್ರೇ........' ಎಂದರು.

ನನ್ನ ಲೇಖನಗಳ ಬಗ್ಗೆ ಮಾತನಾಡಿದುದು ಮುಗಿಯಿತು. ಸುಮಾರು ೧೦-೩೦ರ ವೇಳೆಗೆ ' ಪ್ರಜಾವೀರ ' ಕಛೇರಿಯಿಂದ ಹೊರಬಿದ್ದೆ.

ಬಾಗಿಲ ಬಳಿ ಮೊಣಕಾಲ ಮೇಲೆ ತಲೆಯಿಟ್ಟುಕೊಂಡು ಯೋಚನಾಕ್ರಾಂತನಾಗಿದ್ದ ಮಾದ–ಕಾಣಿಸಿದ.

ಮಾತನಾಡಿಸುವ – ಎನಿಸಿತು. ಆದರೆ ಅದು ಹುಣ್ಣಿನ ಮೇಲೆ ಬರೆಯಾದೀತೇನೋ ಎಂದುಕೊಂಡು ಹಾಗೆಯೇ ಹೊರಟುಹೋದೆ. ಇದೂ ಒಂದು ಬಾಳೇ, ಎನ್ನಿಸದಿರಲಿಲ್ಲ ನನಗೆ.

ಇನ್ನೂ ಈ ನೆನಪು ನನ್ನ ಸ್ಮೃತಿಫಲಕದಿಂದ ಜಾರಿರಲಿಲ್ಲ. ಈ ಘಟನೆಯಾಗಿ ನಾಲ್ಕಾರು ದಿನಗಳಾಗಿದ್ದವು.

ಅಂದು ಸಂಜೆ ಮತ್ತೆ ಅದೇ ಪ್ರಜಾವೀರ ಕಛೇರಿಗೆ ಹೋಗಿದ್ದೆ. ಮಾದ ಕಾಣಲಿಲ್ಲ. ' ಇಲ್ಲಿದ್ದ ಜವಾನ ಏನಾದ ? ' ಎಂದು ಕೇಳಿದೆ. ಸಂಪಾದಕರು ಕೇಳಿಯೂ ಕೇಳದಂತಿದ್ದರು. ನಾನು ಎರಡನೆಯ ಬಾರಿಯೂ ಕೇಳಿದೆ. ' ಮೊನ್ನೆ ಬಂದಿದ್ದ. ಅವನ ಮಗನೇನೋ ತೀರಿ ಹೋದನಂತೆ. ಮತ್ತೆ ಬರಲಿಲ್ಲ. ಈ ದಿನ ನೇಣು ಹಾಕಿಕೊಂಡು ಸತ್ತಿದಾನೆ, ಎಂದು ಈಗತಾನೇ ಯಾರೋ ಬಂದು ತಿಳಿಸಿದರು ' ಎಂದರು. ಅವರ ದನಿಯಲ್ಲಿ ಸಹಾನುಭೂತಿ ಲೇಶವೂ ಇರಲಿಲ್ಲ.

ಹಾಯ್! ಎಂತಹ ಬಾಳು ಮಾದನದು ? ಹೊಟ್ಟೆಯ ಮಗ, ಅದೂ ತಾಯಿಲ್ಲದ ತಬ್ಬಲಿ ಮರಣಶಯ್ಯೆಯಲ್ಲಿರುವಾಗಲೂ ಊಳಿಗದಿಂದ ಪಾರಾಗಿ ಕೊನೆಯ ಗುಟುಕು ನೀರನ್ನು ಕುಡಿಸಲಾರ. ಸ್ವಾತಂತ್ರ ಬಂತೇ ? ಯಾರಿಗೆ ? ಎಂತಹ ಪಾರತಂತ್ರ್ಯ ಜೀವಿ ಅವನು ? ಅವನಂತಹ ಬಾಳಬೇಗೆಯಲ್ಲಿ ನೊಂದು, ಬೆಂದುಹೋಗುತ್ತಿರುವವರೆಷ್ಟು ಮಂದಿ ? ಸಮಾಜ ಸುಧಾರಕರೆಂದು ' ಮೈಕ್ ' ಗಳ ಬಳಿ ನಿಂತು ಕಿರಚನಾತ್ಮಕ ಕಾರ್ಯಮಾಡುವವರ ದೃಷ್ಟಿಗೆ ಬೀಳರೇ ಮಾದನಂತಹ ಬಡಪಾಯಿಗಳು ?

ಮಗನೂ ಹೋದಮೇಲೆ ಅವನಿಗಿನ್ನಾರು ತಾನೇ ಉಳಿದಿದ್ದರು, ಈ ಲೋಕದಲ್ಲಿ. ಎಂತಲೇ ಅವನೂ ಅವರನ್ನಾರಿಸುತ್ತ ಆ ಲೋಕಕ್ಕೆ ತೆರಳಿದನೇನೋ ?.. .....

ಅಂದು ನಾನು ಸಂಪಾದಕರೊಡನೆ ಸರಿಯಾಗಿ ಮಾತನಾಡಲೂ ಇಲ್ಲ-

ಅದೇ ತಾನೇ ಹೊರಬಿದ್ದಿದ್ದ 'ಪ್ರಜಾವೀರ' ಸಾಪ್ತಾಹಿಕವನ್ನು ಕೈಯ್ಯಲ್ಲಿ ಹಿಡಿದು ಹೊರಬಿದ್ದೆ. ಮನೆ ಸೇರಿದೆ. ಊಟ ಮುಗಿಸಿದೆ. ಊಟವೂ ಹಿಡಿಸಲಿಲ್ಲ ..

ಏಕೋ ಏನೋ ಮಾದನಿಗಾಗಿ ನನ್ನ ಜೀವ ಮಿಡಿಯುತ್ತಲಿತ್ತು. ಬಡವರ ಬಾಳೀ ಹೀಗೆಯೇ? ಎಂಬ ಸಮಸ್ಯೆ ನನ್ನನ್ನು ಗಳಿಗೆ, ಗಳಿಗೆಗೂ ಕೆಣಕುತ್ತಲಿತ್ತು.

....ಆ ವಾರದ 'ಪ್ರಜಾವೀರ' ಹೊರತೆಗೆದೆ. ಮೊದಲು ನನ್ನ ಕಣ್ಣಿಗೆ ಬಿದ್ದುದು ದಪ್ಪ ದಪ್ಪ ಅಕ್ಷರಗಳಲ್ಲಿ ಅಚ್ಚಾಗಿದ್ದ ಸಂಪಾದಕೀಯ.

'ಕೂಲಿಗಾರರ, ಬಡವರ ಸ್ಥಿತಿ ಸುಧಾರಿಸಬೇಕು' ಎಂಬ ಶಿರೋನಾಮೆಯಡಿ ಸದೀರ್ಘ ಲೇಖನವೊಂದಿತ್ತು.

ಕೂಲಿಗಾರರಿಂದ ನಿಯಮಿತ ವೇಳೆಗಳಲ್ಲಿ ಮಾತ್ರ ಕೆಲಸಮಾಡಿಸಬೇಕು. ಇಡೀ ಹಗಲು ಹನ್ನೆರಡು ಘಂಟೆಯೂ ಅವರಿಂದ ಕೆಲಸ ತೆಗೆಯಬಾರದು. ಅವರಿಗೆ ಆಗಾಗ ಪೂರ್ತಾ ಸಂಬಳದ ಮೇಲೆ ರಜೆ ಪಡೆಯುವ ಹಕ್ಕಿರಬೇಕು. ಬೋನಸ್ ಹಂಚುವ ವ್ಯವಸ್ಥೆ ಆಗಬೇಕು. ಅವರ ಸಂಬಳ ಹೆಚ್ಚಬೇಕು. ಯಾವುದೇ ಸಂಸ್ಥೆಯ ಆದಾಯದಲ್ಲಿ ಕೊನೆಯ ಪಕ್ಷ ಅರ್ಧದಷ್ಟಾದರೂ ಅದು ಕೂಲಿಗಾರರಿಗೆ-ಕೆಲಸಗಾರರಿಗೆ ಸೇರಬೇಕು. ಅವರ ಹಿತಚಿಂತನೆಯ ದೃಷ್ಟಿಯಿಂದ ಈ ಎಲ್ಲ ಕೆಲಸಗಳು ಅತ್ಯಗತ್ಯವಾಗಿ ಆಗಲೇಬೇಕು. ಕೂಲಿಗಾರರ ಬೇಡಿಕೆಗಳಿಗೆ ಮನ್ನಣೆ ಸಲ್ಲಬೇಕು. ಇಲ್ಲವಾದಲ್ಲಿ ಕೂಲಿಗಾರರು ಕ್ರಾಂತಿ ಪಥವನ್ನು ಹಿಡಿದಾರು. ಬಂಡವಾಳಗಾರರು ಈಗಲೇ ಎಚ್ಚೆತ್ತುಕೊಳ್ಳಬೇಕು .. ಎಂಬೆಲ್ಲ ಉದಾತ್ತ ಧ್ಯೇಯಗಳಿಂದ ಪ್ರತಿಪಾದಿಸಲ್ಪಟ್ಟ ಆ ಲೇಖನ ಉತ್ತಮವಾದುದೇ ಆಗಿತ್ತು.

ಓದೋದುತ್ತ ನನಗೆ ಮಾದನ ನೆನಪು ಮತ್ತೆ ಮತ್ತೆ ಬಂದಿತು. ಅಂತಹ ಸಂಪಾದಕೀಯವನ್ನು ಬರೆದ ಸಂಪಾದಕರೇ, ತಮ್ಮ ಪತ್ರಿಕಾಲಯದ ಜವಾನನ ಬಗ್ಗೆ ತೋರುವ ಧೋರಣೆಯೇನು? ಎಂಬ ಪ್ರಶ್ನೆ ನನ್ನಲ್ಲುದಿಸದಿರಲಿಲ್ಲ.

ಹೇಳುವುದೊಂದು ಮಾಡುವುದೊಂದೇ? ....ನನ್ನ ಮನಸ್ಸೆಂದಿತು....

ಇದೇ 'ಅಂತರಂಗ-ಬಹಿರಂಗ!'

# ಸ್ವರಾಜ್ಯ ದರ್ಶನ

ಭಾರತರಾಷ್ಟ್ರ ನೆಲಸಿರುವುದು ಶತಸಹಸ್ರ ಸಂಖ್ಯೆಯ ಹಳ್ಳಿಗಳಲ್ಲಿ. ಗೌಡ–ಶ್ಯಾನುಭೋಗರು ಹಳ್ಳಿಯ ಆಧಾರಸ್ತಂಭಗಳು. ಅವೇ ಟೊಳ್ಳಾಗಿಬಿಟ್ಟರೆ ಹಳ್ಳಿಗಳು ಉಳಿವುದೆಂತು? ಹಳ್ಳಿಗಳ ದೇಶ ಭವ್ಯಭವಿಷ್ಯ ಕಾಣುವುದು ಕನಸಾಗದೆ ಬೇರೇನಾದೀತು?

'ಸ್ವಾಮೀ ನರಸಿಂಹ ಶಾಸ್ತ್ರಿಗಳೇ........'

'...........'

'ಶಾಸ್ತ್ರಿಗಳೇ. ..'

'ಯಾರದು? ಬಂದೇ....' ಎನ್ನುತ್ತಾ ನರಸಿಂಹಶಾಸ್ತ್ರಿಗಳು ಹೊರಗಡೆ ಬಂದರು.

'ಬನ್ನಿ ನರಹರಿರಾಯರೇ, ಒಳಕ್ಕೆ ಬನ್ನಿ....ಏನು ಇಷ್ಟು ಅಪರೂಪ ದರ್ಶನವಾಗ್ತೋಯ್ತಲ್ಲ....ಒಳಕ್ಕೆ ಬನ್ನೀಂದ್ರೆ....' ಶಾಸ್ತ್ರಿಗಳು ತಮ್ಮ ಚಿರ ಪರಿಚಿತವಾದ ದೇಶಾವರಿ ನಗೆಯೊಂದಿಗೆ ರಾಯರನ್ನು ಒಳಕ್ಕೆ ಕರೆದೊಯ್ದರು.

ಲೋಕಾಭಿರಾಮವಾಗಿ ಆ ಮಾತು ಈ ಮಾತು ನಡೆದನಂತರ ರಾಯರು ತಾವು ಬಂದ ಕಾರ್ಯದ ಬಗ್ಗೆ ಪ್ರಸ್ತಾಪಮಾಡಿದರು.

'ನಿಮ್ಮ 'ಕಾಶೀನಾಯ್ಕನ ತೋಪಿ' ನಲ್ಲಿ ಒಂದ್ಮರ ಒಣಗಿ, ಈಗಲೋ ಆಗಲೋ ಬೀಳೋ ಹಾಗಿದೆ. ನಮಗೆ ಸ್ವಲ್ಪ ಸೌದೆ ಬೇಕಾಗಿದೆ. ನಿಮ್ಮ ನ್ನೊಂದ್ಮಾತು ಕೇಳಿ ಅದರಲ್ಲೊಂದು ರೆಂಬೆ ಒಡಸಿಕೊಳ್ಳೋಣಾಂತ....,

'...........'

'ಏನು ಶಾಸ್ತ್ರಿಗಳೇ ಏನೋ ದೀರ್ಘಾಲೋಚನೆ ಮಾಡ್ತಿರೋ ಹಾಗಿದೆಯಲ್ಲ ?'

'ಏನೂ ಇಲ್ಲ....ಆದರೆ'

'ಆದರೆ ಏನೂಂತೀರಿ ?'

'ನೋಡಿ, ಒಂದು ಕೊಂಬೆ ತೆಗೆದುಕೊಂಡರೆ ನನ್ನ ಗಂಟೇನೂ ಹೋಗೋದಿಲ್ಲ....ಆದರೆ....'

'ಅದೇನು ಆದರೆ, ಆದರೆ ಅಂತ ಹೇಳ್ತೀರಿ ಶಾಸ್ತ್ರಿಗಳೇ. ಸ್ವಲ್ಪ ಸ್ಪಷ್ಟ ವಾಗಿ ಬಿಡಿಸಿ ಹೇಳಬಾರದೇ ?'

'ಇನ್ನೇನೂ ಇಲ್ಲ, ನಮ್ಮ ಹಿರಿಯರು ತೋಪಿನ ಮರಗಳು ಧರ್ಮ ಕಾರ್ಯಕ್ಕೆ ಮಾತ್ರ ವಿನಿಯೋಗವಾಗಬೇಕೂಂತ ಬರೆದಿಟ್ಟಿದ್ದಾರೆ. ಸ್ವತಃ ನಾನು ಕೂಡ ತೋಪಿನ ಯಾವ ಪದಾರ್ಥವನ್ನೂ, ಒಂದೆಲೆಯನ್ನೂ ಸಹ ನನ್ನ ಮನೆಗಾಗಿ ಉಪಯೋಗಿಸಿಕೊಂಡವನಲ್ಲ....ಧರ್ಮಕಾರ್ಯದ್ದೂಂದ್ಮೇಲೆ ಹೇಗೆ ಕೊಡೋದೂಂತ ಸ್ವಲ್ಪ ಅನುಮಾನ....ಅಷ್ಟೆ'

'ಧರ್ಮಕಾರ್ಯ ಯಾವುದು ? ಧರ್ಮಕಾರ್ಯ ಅಲ್ಲದ್ದಾವುದು ? ನನಗೆ ಮರ ಕೊಟ್ಟು ಸಹಾಯಮಾಡೋದೂ ಧರ್ಮಕಾರ್ಯಾನೇ ತಾನೇ ಶಾಸ್ತ್ರಿಗಳೇ ?' 'ನಿಜ....ಆದರೂ'

'ಮತ್ತೆ ಅದೇರಾಗ ತೆಗೀತೀರಲ್ಲ'

'ಏನು ಮಾಡ್ಲಿ ? ಮನಸ್ಸೊಪ್ಪೋಲ್ಲ; ಸ್ವಲ್ಪ ಯೋಚಿಸಿ ಹೇಳ್ತೀನೆ....'

ನರಹರಿರಾಯರು ತಮ್ಮ ಚಾತುರ್ಯವೇನೂ ಸಾಗದುದನ್ನು ಕಂಡು ಬಂದ ದಾರಿಗೆ ಸುಂಕವಿಲ್ಲವೆಂದುಕೊಂಡು ಹಿಂತಿರುಗಿದರು. ಹಿಂತಿರುಗುತ್ತಲೇ ಶಾಸ್ತ್ರಿಗಳಿಗೆ ನನ್ನ 'ಕೈ' ತೋರಿಸದಿದ್ದರೆ ನನ್ನ ಹೆಸರು ನರಹರಿರಾಯನೇ ಅಲ್ಲ. ಎಂದು ತಮ್ಮ ಬಿಳಿಯ ಮೀಸೆಯನ್ನು ಹುರಿಮಾಡಿಕೊಳ್ಳದಿರಲಿಲ್ಲ ರಾಯರು !

o o o

ಶಾನುಭೋಗ್ ನರಹರಿರಾಯರೂಂದ್ರೆ ನಮ್ಮ ಊರಿಗೇ ಏಕೆ, ನಮ್ಮೂರು ಸುತ್ತ ೧೦–೧೫ ಮೈಲಿಯಲ್ಲಿನ ಹಳ್ಳಿಪಳ್ಳಿಗಳಲ್ಲಿಯೂ ಖ್ಯಾತಿ

ಪಡೆದಿದ್ದ ವ್ಯಕ್ತಿಗಳು. ಅವರ ಶಾನುಭೋಗಿಕೆಯು ವೈಭವವೇ ಅಂತಹುದು. ಕೇವಲ ಅವರೊಬ್ಬರೇ ಹಾಗೆ ಪ್ರಸಿದ್ಧರೆಂತಲೂ ಅಲ್ಲ; ಅವರ ವಂಶವೇ ಅಂತಹದು. ಊರಿಗೇ ರಾಜ, ಮಂತ್ರಿಗಳಿದ್ದ ಹಾಗೆ ಗೌಡ, ಶಾನುಭೋಗರೂ ನರಹರಿರಾಯರ ತಂದೆಯವರೂ ತುಂಬಾ ಪ್ರಸಿದ್ಧರಾಗಿದ್ದರು.

ಊರುಮುಂದೆ ರೈಲುಮಾರ್ಗ ಹಾಕಲು ಸರ್ವೆ ನಡೆದಾಗ ಅವರೂ, ಗೌಡರೂ ಕಲೆತು ರೈಲುಮಾರ್ಗ ಊರುಮುಂದೆ ಬಂದಲ್ಲಿ ಊರಿಗೆ ಹಾನಿ ಯೆಂದು ಯೋಚಿಸಿದರು. ಗೌಡ, ಶಾನುಭೋಗರು ಕಲೆತಮೇಲೆ ಕೇಳುವು ದಿನ್ನೇನು? ಊರಲ್ಲೆಲ್ಲಾ ಚಂದಾ ಎತ್ತಿ ಆ ಹಳೆಯ ಕಾಲದಲ್ಲೇ ಸಾವಿರ ರೂಪಾಯಿ ಸೇರಿಸಿ ಗೌಡ ಶ್ಯಾನುಭೋಗರಿಬ್ಬರೂ ಎಂಜನೀಯರ್ ಸಾಹೇಬರ ದರ್ಶನಮಾಡಿ, ನಜರೊಪ್ಪಿಸಿ "ಸ್ವಾಮೀ ಎರಡು ಕೆರೇ ಮಧ್ಯೆ ನಮ್ಮೂರು ಜನ ಅಷ್ಟೋ ಇಷ್ಟೋ ಬೆಳೆದುಕೊಂಡು ಹಾಯಾಗಿದ್ದಾರೆ. ರೈಲುದಾರಿ ಊರ ಮುಂದೆ ಆದರೆ ಊರಿಗೆ ದಂಡುಬರುತ್ತೆ. ಊರಿನ ಸುಖ 'ನಾಯಿಮುಟ್ಟಿದ ಗಡಿಗೆ' ಹಾಗಾಗುತ್ತೆ. ದಯವಿಟ್ಟು ಕೆರೆ ಆಚೆ ೧-೨ ಮೈಲಿದೂರದಲ್ಲಿ ರೈಲು ದಾರಿ ಹಾಕಿಸಿ ನಮ್ಮನ್ನುದ್ಧಾರಮಾಡಬೇಕು !", ಎಂದು ಬಿನ್ನವಿಸಿಕೊಂಡರು. ಶ್ಯಾನುಭೋಗರ ವಾಕ್ಚಾತುರ್ಯದ ಫಲವಾಗಿ ರೈಲುದಾರಿ ಊರಾಚೆ ಆಯಿತು. ಈಗ ಆ ರೈಲುದಾರಿಯನ್ನು ಊರ ಬಳಿ ತರಿಸಬೇಕೂಂತ ಊರಿನವರೆಲ್ಲ ಅಖಂಡ ಚಳುವಳಿ ಮಾಡುತ್ತಿದ್ದಾರೆ !

ನರಹರಿರಾಯರ ಹಿರಿಯರಕಾಲದಲ್ಲಿ ನಮ್ಮೂರಿನ ವೈಚಿತ್ರ್ಯವೇ ವೈಚಿತ್ರ್ಯ. ಕುರುಬರ ಬೀದಿಗೆ ವೈಶ್ಯರು ಹೋಗಬಾರದು. ವೈಶ್ಯರ ಬೀದಿಗೆ ಕುರುಬರು ಹೋಗಬಾರದು. ಬ್ರಾಹ್ಮಣರ ಬೀದಿಗೆ ಇಬ್ಬರೂ ಹೋಗಬಾರದು ! ಇದೆಲ್ಲ ಗೌಡ-ಶಾನುಭೋಗರ ಕಾರುಬಾರಿನ ಫಲವಾಗಿತ್ತು.

ಗೌಡ-ಶಾನುಭೋಗರಿಗೆ ಈ ವಿಧದ ಕಟ್ಟುಪಾಡು ಒಂದು ವಿಧದಲ್ಲಿ ಸಂಪಾದನೆಗೆ ದಾರಿಯಾಗಿತ್ತು ! ವೈಶ್ಯರ ಓರ್ವ ಶ್ರೀಮಂತನ ಮನೆಯಲ್ಲಿ ಲಗ್ನವಾಗಿ ದಿಬ್ಬಣ ಹೊರಟರೆ ಗೌಡ-ಶಾನುಭೋಗದ್ವಯರು ಅವರನ್ನು ಬ್ಬಿಸುತ್ತಿದ್ದರು. 'ಕುರುಬರ ಬೀದಿಯಲ್ಲಿ ಮೆರವಣಿಗೆ ಆಗಲಿ. ಯಾರೇನು ಮಾಡ್ತಾರೋ ನೋಡೋಣ, ನಾವಿದ್ದೇವೆ' ಅಂತ ಅವರಿಂದ ಅಪ್ಪುಹಣ ಕೀಳುವುದು; ಅತ್ತ ಕುರುಬರ ಮುಖಂಡರನ್ನು ಕಂಡು 'ವೈಶ್ಯರ ಮದುವೆ

ದಿಬ್ಬಣ ನಿಮ್ಮ ಕೇರಿಗೆ ಬರುತ್ತಂತೆ, ನಾವಿದ್ದೇವೆ. ಧೈರ್ಯವಾಗಿ ಅಡ್ಡ ಹಾಕಿ ' ಎಂದು ಹೇಳಿ ಅವರ ಬಳಿ ಮತ್ತಷ್ಟು ಹಣ ಹೀರುವುದು ; ದಿಬ್ಬಣ ಹೊರಟು ಕುರುಬರಬೀದಿ ಇನ್ನೂ ದೂರ ಇದೆ ಅನ್ನೋ ಅಷ್ಟು ಹೊತ್ತಿಗೆ ಊರಿನ ರಾಜ–ಮಂತ್ರಿಗಳ ಪತ್ತೆಯೇ ಇರುತ್ತಿರಲಿಲ್ಲ! ಉದ್ರೇಕದಿಂದಿರುತ್ತಿದ್ದ ಎರಡೂ ಬಣಗಳ ಭವಿಷ್ಯದ ಗತಿ ಭಗವಂತನಿಗೇ ಪ್ರೀತಿ ! ಇಂತಹವು ನರಹರಿ ರಾಯರ ಹಿರಿಯರ ಕಾಲದಲ್ಲಿ ವಾರಕ್ಕೊಂದಾದರೂ ಆಗುತ್ತಿದ್ದವು.

ಒಮ್ಮೆ ಊರಿನ ಶ್ರೀಮಂತರೊಬ್ಬರ ಮನೆಯಲ್ಲಿ ವಿವಾಹವಾಯಿತು. ಮೊದಲೇ ಶ್ರೀಮಂತರು. ಅಟ್ಟಹಾಸದಿಂದ ವಿವಾಹಮಾಡಬೇಕೆಂದು ಆಶಿಸಿದ್ದರು. ಒಂದು ಬೀದಿ ಉದ್ದಕ್ಕೂ ಸಂಪೂರ್ಣವಾಗಿ ಸೊಗಸಾದ ಚಪ್ಪರ ಹಾಕಿಸಿದ್ದರು. ಊರ ಶ್ಯಾನುಭೋಗರಿಗೆ ಸ್ವಲ್ಪ ಅಸೂಯೆಯೇ ಆಯಿತು. ಎಷ್ಟು ದೊಡ್ಡ ಚಪ್ಪರ, ಏನು ಏನ್ಕಥೆ ? ಅಂತ.

ಶಾನುಭೋಗರು ಗೌಡರೊಡನೆ ಸಮಾಲೋಚಿಸಿ ಕೆಲವು ಮಂದಿ ಆಶ್ರಿತರನ್ನು ಕೂಡಿಹಾಕಿ ರಾಮದೇವರ ಉತ್ಸವ ಹೊರಡಿಸಿಬಿಟ್ಟರು. ಯಾವ ರಾಮೋತ್ಸವದಲ್ಲೂ ಇಲ್ಲದ ಬಾಣ ಬಿರುಸುಗಳು ರಾಮದೇವರ ಪ್ರೀತ್ಯರ್ಥ ಬಂದವು ! ಚಪ್ಪರದ ಬಳಿಗೆ ರಾಮದೇವರು ಬಂದ. ದೇವರು ಚಪ್ಪರದ ಕೆಳಗೆ ಹೋಗಾಣಾಂದ್ರೆ ಏನು ?

' ಚಪ್ಪರ ಕಿತ್ತು ದೇವರು ಹೊರಡೋಕೆ ದಾರಿ ಮಾಡಿ ' ಎಂದು ಗೌಡ–ಶಾನುಭೋಗರ ಜಂಟೀ ಅಪ್ಪಣೆ ಆಯಿತು. ಕುಂಬಾರನಿಗೆ ವರುಷ–ದೊಣ್ಣೆಗೆ ನಿಮಿಷ ! ಫರ್ಲಾಂಗ್ ಉದ್ದದ ಭಾರೀಚಪ್ಪರ ಕಾಲು ಗಂಟೆಯಲ್ಲಿ ಮಾಯವಾಗಿ, ಎರಡೂ ಪಕ್ಕಗಳಲ್ಲಿ ಕೇವಲ ಬೋಳು ಬೊಂಬುಗಳು ಮಾತ್ರ ಉಳಿದಿದ್ದವು.

ನರಹರಿರಾಯರು ತಮ್ಮ ಪಿತೃವರ್ಯರ ಸಾಹಸ ಕೃತ್ಯಗಳನ್ನು ವರ್ಣಿಸುತ್ತಾ ಇದನ್ನು ಎಷ್ಟೋ ಬಾರಿ ಹೇಳಿ ಮೀಸೆಮೇಲೆ ಕೈಹಾಕಿದ್ದಾರೆ !

ಊರ ಗೌಡ–ಶಾನುಭೋಗರು ಈ ಕಾಲದಲ್ಲೂ ಪಾಳೆಯಗಾರರಿಗಿಂತ ಸ್ವಲ್ಪ ಹೆಚ್ಚು. ಊರಿನ ಯಾವ ಅಂಗಡಿಯಲ್ಲಿ ನೋಡಿದರೂ ಅವರ ಲೆಕ್ಕ ಸಿದ್ಧ. ಒಂದು ರೂಪಾಯಿ ಸಾಮಾನು ಕೊಟ್ಟ ಅಂಗಡಿಯವನಿಗೆ ಎರಡಾಣೆ ಸಂದಾಯವಾದರೆ ಅದೇ ಆವನ ಪುಣ್ಯ. ' ಇಲ್ಲ ' ಅನ್ನೋ ಎದೆಗಾರಿಕೆ

ಯಾರಿಗೆ ತಾನೇ ಉಂಟು? ಎಂತಲೇ ಎಲ್ಲ ಅಂಗಡಿಯವರೂ ಅತ್ಯುತ್ತಮ ಪದಾರ್ಥವೆಂದು ಹೇಳುತ್ತ, ಕೀಳುವಸ್ತುಗಳನ್ನೇ ಅವರಿಗೆ ತೋರಿಸಿ, ಸಾಗ ಹಾಕಲೆತ್ನಿಸುವುದು ನಮ್ಮೂರ ಅಂಗಡಿಗಳ ಬಳಿಯ ನಿತ್ಯನೋಟವಾಗಿದೆ. ಇಂತಹ ಭಂಡಬಾಳು, ಈ ಗೌಡ–ಶಾನುಭೋಗರದು! ಆಯಾ ಅಂಗಡಿಯವನ ಯೋಗ್ಯತಾನುಸಾರ ಒಂದು ಮೋಟು ಬೀಡಿಯಿಂದ ಒಂದುಮೂಟೆ ಸಾಮಾನಿನವರೆವಿಗೂ; ಒಂದು ಕಾಸಿನಿಂದ ಐನೂರು ರೂಪಾಯಿಗಳವರೆವಿಗೂ ಟೋಪಿ ಹಾಕಿದ್ದಾರೆ ಈ ಭೂಪತಿಗಳು. ಈ ಕಾರ್ಯ ವಂಶಪಾರಂಪರ್ಯವಾಗಿ, ಅನೂಚಾನವಾಗಿ ತಪ್ಪದೆ ನಡೆಯುತ್ತಾ ಬಂದಿದೆ.

ಊರಿನಲ್ಲಿ ಎರಡು, ಮೂರು ಪಾರ್ಟಿಮಾಡಿ, ಎಲ್ಲಾ ಕಡೆಯಲ್ಲೂ ಅನುಕೂಲಪಡೆದು, ಜನಹಿತವನ್ನು ಮೂಲೆಗಿಟ್ಟು ರಕ್ತಹೀರುವ ತಿಗಣೆಗಳಾಗಿ ಅನುಕೂಲಸಿಂಧುವನ್ನು ಪಠಿಸುವುದೇ ಇವರ ಹುಟ್ಟುಗುಣವಾಗುತ್ತಿದೆ. ವಂಶಪಾರಂಪರ್ಯವಾಗಿ ಗೌಡ, ಶಾನುಭೋಗಿಕೆಗಳು ನಡೆದು ಬರುವುದೂ ಇದಕ್ಕೊಂದು ಕಾರಣವಿರಬಹುದು. ಒಂದು ಪಂಗಡವನ್ನಿನ್ನೊಂದು ಪಂಗಡದ ವಿರುದ್ಧ ಎತ್ತಿಕಟ್ಟಿ ಕಲಹ ಹುಟ್ಟಿಸಿ ಎಷ್ಟೋ ಮಂದಿಯನ್ನು ಕೋರ್ಟಿಗೆಳೆದ ವೀರಾಧಿವೀರರು ಈ ಮಹಾನುಭಾವರು! ಕೇವಲ ಒಂದುಪಾರ್ಟಿ ಜಗಳದಲ್ಲಿ ಆದ ವೆಚ್ಚವನ್ನು ಸದ್ವಿನಿಯೋಗಪಡಿಸಿದ್ದಿದ್ದಲ್ಲಿ ನಮ್ಮೂರ ಎಲ್ಲರ ಮನೆಯಲ್ಲೂ ಒಂದೊಂದು ಭಾವಿ ಕಟ್ಟಿಸಬಹುದಿತ್ತು! ಇಷ್ಟಾದರೂ ಇಂದೂ ಗೌಡ–ಶಾನುಭೋಗರು ಎಂದಿನಂತೆಯೇ ಆಳ್ವಿಕೆ ನಡೆಸುತ್ತ ಬಂದಿದ್ದಾರೆ. ನರಹರಿರಾಯರ ಅಜ್ಜಂದಿರು ಇಂತಹ ಒಂದು ಕೇಸಿನಲ್ಲಿ ಜಯಿಸುವವರೆವಿಗೆ, ಮೂರುವರ್ಷ ಕಾಲ ಮುಖಕ್ಷೌರವನ್ನೇ ಮಾಡಿಸಿಕೊಳ್ಳಲಿಲ್ಲವಂತೆ! ಅಂತಹ ಪ್ರಚಂಡ ಪ್ರತಿಜ್ಞೆ ಅವರದು. ಅವರ ತೀರ್ಥರೂಪರು ಒಂದು ಕೇಸಿನಲ್ಲಿ ಗೆಲುವಾಗದಿದ್ದುದರಿಂದ ಸಾಯುವತನಕ ಮೀಸೆಯನ್ನು ಮಾತನಾಡಿಸಲೇ ಇಲ್ಲ! ಇಂತಹ ವಂಶಸ್ಥರಾದ ನರಹರಿರಾಯರು ತಾವಾಗಿ ಮನೆ ಬಳಿಹೋಗಿ ಒಂದು ಮರದ ತುಂಡು ಕೇಳಿದರೆ ಅದೂ ಇಲ್ಲವಾಯ್ತು, ಅವರ ಯೋಗ್ಯತೆಗೆ ಎಂದರೆ– ಯಾರಿಗೆ ತಾನೇ ಕೋಪ ಬಾರದಿರುತ್ತೆ? ಅದರಲ್ಲೂ ನರಹರಿರಾಯರು........

ಅವರಿಗೂ ಬಂತು ಕೋಪ. ಅಂತಿಂತಹದ್ದಲ್ಲ; ಕೆಂಡದಂತಹ ಕೋಪ!

ಹೌದು. ಅಂತಹ ಕೋಪಕ್ಕೆ ಸಿಕ್ಕಿ ಎಷ್ಟೋ ಮಂದಿ ಸುಟ್ಟುಹೋಗಿದ್ದಾರೆ. ಅಂದಮೇಲೆ...........

ನರಸಿಂಹಶಾಸ್ತ್ರಿಗಳಿಗೆ ತಮ್ಮ 'ಕೈ' ತೋರಿಸಬೇಕೆಂದು ಶ್ಯಾನುಭೋಗ್ ನರಹರಿರಾಯರು ನಿಶ್ಚಯ ಮಾಡಿಕೊಂಡರು.

* * * *

'ಸ್ವಾಮೀ, ನರಸಿಂಹ ಶಾಸ್ತ್ರಿಗಳೇ....'

'....... ...........'

'ಸ್ವಾಮೀ, ಶಾಸ್ತ್ರಿಗಳೇ'

'ಯಾರದು ? ಬಂದೇ........' ಎನ್ನುತ್ತಲೇ ಶಾಸ್ತ್ರಿಗಳು ಹೊರಕ್ಕೆ ಬಂದರು.

ಹೊರಗಡೆ ಲಿಂಗಣ್ಣ ಬಂದಿದ್ದ. ಲಿಂಗಣ್ಣ ನಮ್ಮೂರಿನಲ್ಲಿ ದೊಡ್ಡ ವ್ಯಕ್ತಿಯೇನಲ್ಲ. ಊರಿನಲ್ಲಿ ವರ್ಷಕ್ಕೊಮ್ಮೆ ಆಗುತ್ತಿದ್ದ ರಥೋತ್ಸವದಲ್ಲಿ ಪ್ರಮುಖ ಪಾತ್ರಧಾರಿ ಲಿಂಗಣ್ಣ.

'ಏನು ಲಿಂಗಣ್ಣ, ಇಷ್ಟುದೂರ ಬಂದೆ? ಈ ಸಾರಿ ರಥೋತ್ಸವ ಆಗುತ್ತೇನಯ್ಯ ?'

'ಅದಕ್ಕೇ ಬಂದೆಸ್ವಾಮಿ ! ರಥದ ಮರದ ಚಕ್ರವೊಂದು ಮುರಿದುಹೋಗಿದೆ. ಅದನ್ನು ಸರಿಪಡಿಸಿದ ಹೊರತು ರಥ ಮುಂದಕ್ಕೆ ಕದಲೋಹಾಗಿಲ್ಲ. ರಥ ಕದಲಿದಹೊರತು ರಥೋತ್ಸವವಿಲ್ಲ....ತಮ್ಮ ತೋಪಿನಲ್ಲಿ ಒಂದು ಮರ ಬೀಳೋಹಾಗಿದೆ. ತಾವು ಒಪ್ಪಿದರೆ ಆ ಮರದಲ್ಲೇ ಒಂದು ಕೊಂಬೆ ಕಡಿವಿ ಈ ವರ್ಷಕ್ಕೆ ಹಾಗೂ ಹೀಗೂ ರಿಪೇರಿ ಮಾಡ್ಕೊಂಡು ರಥೋತ್ಸವ ಆಯ್ತು ಅನ್ನುತ್ತೇವೆ....ಇಲ್ಲವಾದರೆ ಈ ಬಾರಿ ರಥವೇ ಕದಲುವಂತಿಲ್ಲ ಶಾಸ್ತ್ರಿಗಳೇ....'

"ನಮ್ಮ ತೋಪಿರೋದೇ ಧರ್ಮಕಾರ್ಯಗಳಿಗೇಂತ. ಅಗತ್ಯವಾಗಿ ಕತ್ತರಿಸಿ ತೆಗೆದುಕೊಳ್ಳಿ" ಎಂದು ಶಾಸ್ತ್ರಿಗಳು ಹೇಳಿದರು. ಲಿಂಗಣ್ಣ ಕೃತಜ್ಞತೆಯನ್ನು ಸೂಚಿಸಿ ಹೊರಟುಹೋದ.

* * * *

ಅಂದೇ ಲಿಂಗಣ್ಣ ತನ್ನವರೊಂದಿಗೆ ಕಾಶೀನಾಯ್ಕನ ತೋಪಿಗೆ ಹೋಗಿ

ಒಂದು ರೆಂಬೆ ಕೆಡವಿದ ಸಣ್ಣ ಊರು. ಅಂದ್ಮೇಲೆ ಇಂತಹ ಸುದ್ದಿಯೆಲ್ಲ ಗೌಡ ಶ್ಯಾನುಭೋಗರಿಗೆ ತಿಳಿಯದೆ ಉಂಟೇ ? ಶ್ಯಾನುಭೋಗ್ ನರಹರಿರಾಯರಿಗೂ ವಿಷಯ ತಿಳಿಯಿತು. ಶಾಸ್ತ್ರಿಗಳಿಗೆ 'ಕೈ' ತೋರಿಸಬೇಕೆಂದು ಅವರು ದಿನದಿನವೂ ಮನಸ್ಸಿನಲ್ಲೇ ಕತ್ತಿಮಸೆಯುತ್ತಿದ್ದರು. ಅವರಿಗೊಳ್ಳೆಯ ಅವಕಾಶ ದೊರೆತಂತಾಯಿತು. ತಕ್ಷಣ ಗೌಡರನ್ನು ಕಟ್ಟಿಕೊಂಡು ತೋಪಿಗೆ ಹೋದರು. ಪೋಲೀಸು ಸಹಾಯ ಪಡೆದು ಮಹಜರ್ ಮಾಡಿಸಿದರು. 'ತೋಪು ಸರ್ಕಾರದ್ದು. ಇಲ್ಲಿ ಮರ ಕಡಿಯಲು ಯಾರಿಗೂ ಹಕ್ಕಿಲ್ಲ. ಕಡಿದವರಿಗೆ ಶಿಕ್ಷೆಯಾಗಬೇಕು' ಎಂದು ಅಮಲ್ದಾರರಿಗೆ ರಿಪೋರ್ಟು ಹೋಯಿತು ! 'ನನಗೇನೂ ತಿಳಿಯದು. ಶಾಸ್ತ್ರಿಗಳ ಹೇಳಿಕೆಯಮೇಲೆ ನಾನು ಕಡಿದದ್ದುಂಟು' ಎಂದು ಲಿಂಗಣ್ಣ ಹೇಳಿಕೆ ಕೊಟ್ಟ. ಶಾಸ್ತ್ರಿಗಳಿಗೆ ಬಿಸಿ ತಟ್ಟಿತು ಕಾಶೀನಾಯ್ಕನ ತೋಪು ಪುರಾತನಕಾಲದಿಂದಲೂ ಶಾಸ್ತ್ರಿಗಳ ವಂಶದವರಿಗೆ ಸೇರಿತ್ತು. ಶಾಸ್ತ್ರಿಗಳ ಅಜ್ಜನಕಾಲದಲ್ಲಿ ಪಾಳುತೋಪಿಗೆ ಕಂದಾಯ ಏಕೆ ಕಟ್ಟಬೇಕು ಎಂಬ ಧೋರಣೆಯಿಂದ ಕಂದಾಯವನ್ನು ಸರಿಯಾಗಿ ಕಟ್ಟಲಿಲ್ಲ. ಕೊನೆಗೆ ಅವರು ಸರ್ಕಾರದೊಡನೆ ಒಂದು ಪತ್ರಮಾಡಿಕೊಂಡರು. 'ತೋಪಿನ ಜಮೀನೆಲ್ಲ ಸರ್ಕಾರದ್ದೇ ಎಂದು ಪರಿಗಣಿತವಾಗಬೇಕು. ಅದಕ್ಕೆ ಕಂದಾಯವಿಲ್ಲ. ಆದರೆ ತೋಪಿನಲ್ಲಿರತಕ್ಕ ಮರ ಗಿಡ ಇತ್ಯಾದಿಗಳು ಸ್ವಂತದ್ದೆಂದು ಪರಿಗಣಿಸಲ್ಪಡಬೇಕು ಅವನ್ನು ಕೇವಲ ಧರ್ಮಕಾರ್ಯಗಳಿಗೆ ಮಾತ್ರ ಉಪಯೋಗಿಸಬೇಕು' ಎಂಬುದೇ ಆ ಪತ್ರದ ಸಾರಾಂಶ. ಶಾಸ್ತ್ರಿಗಳು ಅಂತೆಯೇ ನಡೆಯುತ್ತಿದ್ದರು. ಶಾನುಭೋಗ್ ನರಹರಿರಾಯರ ಕೈವಾಡದ ಫಲವಾಗಿ ಈ ಕಲಹ ಅಮಲ್ದಾರರನ್ನು ದಾಟಿಕೊಂಡು ಡೆಪ್ಯೂಟಿಕಮೀಷನರ ಬಳಿ ಹೋಯಿತು ಅಲ್ಲಿಂದಲೂ ಹಾರಿ ಸಿವಿಲ್ ಕೋರ್ಟಿಗೆ ಹೋಯಿತು. ನೂರಾರು ರೂಪಾಯಿ ವೆಚ್ಚವಾಯಿತು. ಶಾಸ್ತ್ರಿಗಳೂ ಒದ್ದಾಡಿದರು. ಪಾಪ, ಲಾಭವಿಲ್ಲ, ಹಣವಿಲ್ಲ, ಕಾಸಿಲ್ಲ. ಅದಕ್ಕಾಗಿ ವೃಥಾ ವೆಚ್ಚಮಾಡಬೇಕಾಗಿತ್ತು. ಕೋರ್ಟಿಗೆ ಅಲೆಯಬೇಕಾಗಿತ್ತು. ವೆಚ್ಚಮಾಡಿದರು ; ಅಲೆದರು ; ಬೇರೆ ದಾರಿಯಿರಲಿಲ್ಲ. ಆ ಕೇಸೋ ಬ್ರಹ್ಮಾಂಡವಾಗಿ ಬೆಳೆಯಿತು. ಸರ್ಕಾರದ ಶಿಥಿಲ ಆಡಳಿತಯಂತ್ರದ ಪುರಾತನ ನ್ಯಾಯದಾನ ವಿಧಾನದ ಪ್ರಯುಕ್ತ ಕಲಹ ವಿಚಾರಣೆಯೇ ಎರಡು ವರ್ಷಕಾಲ ಹಿಡಿಯಿತು.

ರಥೋತ್ಸವದದಿನ ಈ ಕಲಹಗಳಿಗಾಗಿ ನಿಂತೀತೇ? ಬಂದೇ ಬಂದಿತು. ಊರ ರಥೋತ್ಸವ ನಿಂತಿತು. ಗ್ರಾಮದ ಹಲವುಮಂದಿ ಭಾವುಕರು ಹೀಗಾಯಿತಲ್ಲಾ ಎಂದು ಮಿಡುಕಿದರು. ಶಾನುಭೋಗರಿಗೂ ಎದೆ ಅಳುಕಿರಬೇಕು. ಅಂತಹ ಸುವರ್ಣಾವಕಾಶ ಬಿಟ್ಟಿದ್ದಲ್ಲಿ ಶಾಸ್ತ್ರಿಗಳಿಗೆ 'ಬಿಸಿಮುಟ್ಟಿಸುವದಾದರೂ ಹೇಗೆ? ರಥೋತ್ಸವ ಆದರೆ ಅವರಿಗೆಷ್ಟು? ಆಗದಿದ್ದರೆ ಎಷ್ಟು? 'ಸರ್ಕಾರಿ ಕರ್ತವ್ಯ, ಮಾಡಬೇಕಾಗಿತ್ತು; ಮಾಡಿದೆ. ನನ್ನದೇನು ತಪ್ಪು' ಎಂದು ಅಂತರಾತ್ಮದ ಕೂಗನ್ನು ಮೆಟ್ಟಿ ಶ್ಯಾನುಭೋಗರು ತಮ್ಮ ಮಿತ್ರವೃಂದದಲ್ಲಿ ವ್ಯಾಖ್ಯಾನ ಮಾಡಿದರು.

* * * *

ಮೂರುವರ್ಷಗಳನಂತರ ಆಧುನಿಕ ನ್ಯಾಯಾಸ್ಥಾನ ತೀರ್ಪಿತ್ತಿತು "ಜಮೀನು ಸರ್ಕಾರದ್ದು, ಅಂದಮೇಲೆ ಅದರಲ್ಲಿರುವ ಎಲ್ಲ ವಸ್ತುಗಳೂ ಸರ್ಕಾರದ್ದೇ ಎಂಬುದು ಸ್ವಯಂ ಸ್ಪಷ್ಟವಾಗಿದೆ. ಊರಿನ ಶ್ಯಾನುಭೋಗರು ಸರ್ಕಾರದ ಸ್ವತ್ತನ್ನು ರಕ್ಷಿಸಲು ಮುಂಜಾಗರೂಕತೆ ವಹಿಸಿ ಕೆಲಸಮಾಡಿದುದು ಸ್ತುತ್ಯಾರ್ಹ!' ಇದೇ ಮಾದರಿ ನ್ಯಾಯಾಲಯದ ತೀರ್ಮಾನದ ಸಾರಾಂಶ. ತೀರ್ಪು ಬರುವವೇಳೆಗೆ ನರಸಿಂಹ ಶಾಸ್ತ್ರಿಗಳು ತಮ್ಮ ಪೂರ್ವಜರು ಹೊಟ್ಟೆಗೆ ತಿನ್ನದೆ, ಬಟ್ಟೆಹೊದೆಯದೆ ಕೂಡಿಟ್ಟಿದ್ದ ಪುಟ್ಟ ಹಣದಗಂಟನ್ನು ಉದಾರತೆ ಯಿಂದ ವಕೀಲವೃಂದಕ್ಕೆ ಹಂಚಿಕೊಟ್ಟಿದ್ದರು. ಬರಿಯ ಸುತ್ತಾಟದಲ್ಲಿಯೇ ಹತ್ತೆಂಟುನೂರು ರೂಪಾಯಿಗಳನ್ನು ವೃಥಾ ಖರ್ಚುಮಾಡಿದ್ದರು. ಮಾಡ ಬೇಕಾಗಿತ್ತು. ಅದೇ ಚಿಂತೆ ಅವರನ್ನು ಚಿತೆಗಿಂತ ಹೆಚ್ಚಾಗಿ ದಹಿಸುತ್ತಿತ್ತು. ತೀರ್ಪು ಬಂದ ದಿನ ಶ್ಯಾನುಭೋಗ್ ನರಹರಿರಾಯರ ಆನಂದಕ್ಕೆ ಪಾರವೇ ಇಲ್ಲ. ಆಹಾರ ಅಭಾವದ ಇಂತಹ ಬರಗಾಲದಲ್ಲೂ ರಾಯರು ಅಂದು ಸಂಜೆ ಒಂದುಮೂಟೆ ಸಕ್ಕರೆ ಹಂಚಿದರು. ಬಡಬಗ್ಗರು ಉಣ್ಣಲು ಹಿಟ್ಟಿಲ್ಲದೆ, ಕುಡಿಯಲು ಗಂಜಿ ಇಲ್ಲದೆ ಬೆಂದುಹೋಗುತ್ತಿದ್ದಾಗ ತಮ್ಮ ಅಮೋಘ ವಿಜಯದ ಸಂತೋಷಾರ್ಥವಾಗಿ ಶಾನುಭೋಗರು ಊರು ತುಂಬ ಸಕ್ಕರೆ ಹಂಚಿದರು! 'ಅದೇ ತೋಪಿನ ಕೇಸು, ನಮ್ಮಂತೆಯೇ ಆಯಿತು' ಎಂದು ಹೇಳಿಹೇಳಿ ಆಡುತ್ತಿದ್ದ ಮಕ್ಕಳಿಗೆಲ್ಲ ಸಕ್ಕರೆ ಕೊಟ್ಟರು. 'ಸಕ್ಕರೆ ಬಹಳ ರುಚಿ ಕಣೋ' ಎನ್ನುತ್ತಾ ಮಕ್ಕಳು ಮತ್ತೊಮ್ಮೆ ಕೈ ಒಡ್ಡುತ್ತಿಸುತ್ತಿದ್ದರು.

ಆ ಸಕ್ಕರೆಯ ಹಿಂದಿನ ಇತಿಹಾಸದ ಕಟುಸತ್ಯ, ಕಹಿಸತ್ಯ—ಆ ಬಾಲಕರಿಗೆ ಹೇಗೆ ತಿಳಿಯಬೇಕು ?

ಶ್ಯಾನುಭೋಗ್ ನರಹರಿರಾಯರ ಸರ್ಕಾರದಲ್ಲಿನ ಶ್ರದ್ಧೆಯನ್ನು ಪ್ರಶಂಸಿಸಿ ಅವರ ಮಿತ್ರವೃಂದ ಒಂದು ಸತ್ಕಾರಕೂಟವೇರ್ಪಡಿಸಿದ್ದಿತು. ಭಾಷಣಗಳ ಸುರಿಮಳೆಯಾಯಿತು. ‘ಸತ್ಯದುರಂಧರ’ ‘ಸರ್ಕಾರದ ಅಪ್ರತಿಮ ಸೇವಕ’ ಎಂಬ ಬಿರುದುಗಳು ರಾಯರಿಗೆ ಸಂದವು. ‘ಎಂದಿದ್ದರೂ ಸತ್ಯಕ್ಕೆ ಜಯ ಸಿದ್ಧ’ ‘ಸತ್ಯಮೇವ ಜಯತೇ ನಾನೃತಂ’ ಎಂದು ಘೋಷಿಸುತ್ತಾ ಶ್ಯಾನುಭೋಗರು ತಮ್ಮ ಭಾಷಣ ಮುಗಿಸಿದರು !

# ರೇಷ್ಮೆ ರಾಜ್ಯದಲ್ಲಿ

ಧನಿಕನೊಬ್ಬ ಮಾಡಬಾರದ ಪಾಪಗಳೆಲ್ಲ ಮಾಡಿದರೂ ಅವನೇ ಒಂದು ಛತ್ರ ಕಟ್ಟಿಸುತ್ತಾನೆ, ಭೂರಿ ಭೋಜನ ಹಾಕಿಸುತ್ತಾನೆ. ಸಮಾಜ ಅವನನ್ನು ಧರ್ಮಾತ್ಮನೆನ್ನುತ್ತದೆ. ಹಣದಲ್ಲಿ ಧರ್ಮ–ಯಶ ಎಲ್ಲವೂ ಅಡಗಿವೆ. ನಂಬಿಕೆ, ಸತ್ಯ ಹಾಗೂ ನ್ಯಾಯಗಳಿಗೆ ಸಮಾಜದ ಪುರಸ್ಕಾರವೇನು? ಕಂಡರಿಯದ ಲೋಕದ ಸುಖ ಆಶಿಸುತ್ತಾ, ಈ ಲೋಕದ ಸುಖ ತೊರೆಯುವುದಾವ ಬುದ್ಧಿವಂತಿಕೆ? . ವಾದಸರಣಿಯೇನೋ ಚೆನ್ನಾಗಿದೆ; ಆದರೆ .?

ರಂಗಪ್ಪ ಹೈಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಅವನ ತಂದೆ ಮೃತರಾದರು. ವಿಧಿಯಿಲ್ಲದೆ ರಂಗಪ್ಪ ಸಂಸಾರ ಭಾರವನ್ನು—ತನ್ನ ಓದನ್ನು ಮೂಲೆಗೊತ್ತಿ—ವಹಿಸಿಕೊಳ್ಳಬೇಕಾಯಿತು. ಅವನ ತಾಯಿ, ಹೊಸ ಪತ್ನಿ ಮತ್ತು ಇಬ್ಬರು ತಂಗಿಯರು ಮನೆಯಲ್ಲಿದ್ದರು. ರಂಗಪ್ಪನ ತಂದೆ ಆಯುರ್ವೇದ ಪಂಡಿತರಾಗಿದ್ದರು. ಸಾಯುವವೇಳೆಗೆ ನಾಕಷ್ಟು ಹಣವನ್ನೂ ಗಳಿಸಿಟ್ಟಿರಲಿಲ್ಲ.

"ನೀರನ್ನು ಕಾಯಿಸಿದರೆ ಹೇಗೆ ನೀರು ಆವಿಯಾಗಿ ಇಂಗಿಹೋಗುವುದೋ ಅಂತೆಯೇ ಮಾನವ ಜೀವನದ ಮಧುರತೆ-ಜೀವರಸ ಗುಮಾಸ್ತೆಯ ಕೆಲಸಕ್ಕೆ ಸೇರಿದೊಡನೆಯೇ ಇಂಗಿಹೋಗುವುದು."—ಇದು ರಂಗಪ್ಪನ ಸಿದ್ಧಾಂತ. ಓದುತ್ತಿದ್ದಾಗಲೇ ರಂಗಪ್ಪ ಈ ಸಿದ್ಧಾಂತವನ್ನು ಸಮರ್ಥಿಸಿದ್ದ,

ಏನಾದರೂ ಗುಮಾಸ್ತನಾಗಲಾರೆನೆಂದು ತಿರ್ಮಾನಿಸಿದ್ದ. ಆದರೇನು ? ತಾನೊಂದೆಣಿಸಿದರೆ ದೈವ ಮತ್ತೊಂದೆಣಿಸುವುದು—ಎಂಬ ಅನುಭವಿಕ ಹಿರಿಯರ ಮಾತು ನೂರು ಪಾಲಿಗೂ ಸತ್ಯವೇ ಸೈ ! ಇನ್ನೂ ಎಸ್.ಎಸ್.ಎಲ್.ಸಿ. ಯಲ್ಲಿದ್ದಾಗಲೇ ಶಾಲೆಗೆ ಶರಣುಹೊಡೆಯಬೇಕಾಯಿತು. 'ಕೂತುಂಬುವವನಿಗೆ ಕುಡಿಕೆ ಹಣ ಸಾಲದು' ಎಂಬಂತೆ ಇದ್ದ ಸ್ವಲ್ಪ ಹಣ ಕರಗುತ್ತಬಂತು. ನೀರನ್ನು ಸೇದಿ ಕುಡಿಯಬೇಕಾದ ಕಾಲ ಬಂತು. ಯಾವುದಾದರೊಂದು ಉದ್ಯೋಗವನ್ನು ಹಿಡಿಯದೆ ವಿಧಿಯಿರಲಿಲ್ಲ. ಎಸ್.ಎಸ್.ಎಲ್.ಸಿ. ಓದ್ಕಿ. ಪಾಸೂಮಾಡದಿರುವ ಮಹಾನುಭಾವನಿಗೆ ಈ ಆಧುನಿಕ ಯುಗದಲ್ಲಿ ಇನ್ನೆಂತಹ ಕೆಲಸ ದೊರಕೀತು ? ದೊರಕುವುದೇ ಒಂದು....ಅದೇ ಗುಮಾಸ್ತನ ಕೆಲಸ ! ಉಳಿದೆಲ್ಲ ಕೆಲಸಗಳಿಗೂ ಬಿ.ಎ., ಎಂ ಎ. ಪದವೀಧರರ ತಂಡ—ನಾಮುಂದು ನೀಮುಂದೆಂದು ನುಗ್ಗಿಬರುತ್ತಿತ್ತು ಟ್ರೈನಿಂಗ್ ಕೋರ್ಸನ್ನು ಮುಗಿಸಿಕೊಂಡಿರಲಿಲ್ಲವಾಗಿ ನಿರ್ಭಾಗ್ಯ ರಂಗಪ್ಪನಿಗೆ ಶಾಲಾ ಮಾಸ್ತರನ ಕೆಲಸವೂ ಸಿಕ್ಕುವಂತಿರಲಿಲ್ಲ. ಆಗತಾನೇ ದೇಶದಲ್ಲೆಲ್ಲಾ ಆಹಾರದ ಸರ್ಕಾರಿ ಮಳಿಗೆಗಳು ಸ್ಥಾಪಿತವಾಗುತ್ತಿದ್ದವು. ರಂಗಪ್ಪನೂ ಕೂಡಲೇ ಒಂದು ಅರ್ಜಿ ಗ.ಜರಾಯಿಸಿದ. ಎಂತಹುದೋ ಒಂದು ಕೆಲಸ ದೊರೆತರೆ ಸಾಕಿತ್ತು....ಕೆಲಸ ಒಳ್ಳೆಯದೇ ಕೆಟ್ಟದ್ದೇ ಎಂದು ಯೋಚಿಸುವಂತಿರಲಿಲ್ಲ. ..ಹೊಟ್ಟೆಗೆ, ಬಟ್ಟೆಗೆ ಬೇಕಾಗಿತ್ತು.

ಅಂತೂ ದೇವರ—ಅಲ್ಲ, ಅಧಿಕಾರಿಗಳ ದಯದಿಂದ ಸರ್ಕಾರಿ ಸೆಂಟ್ರಲ್ ಡಿಪೋದಲ್ಲಿ ಒಂದು ಕೆಲಸ ರಂಗಪ್ಪನಿಗೂ ಸಿಕ್ಕಿತು. ಕುಚೇಲನಿಗೆ ಗುಡಿಸಲಿನಂತಿದ್ದ ತನ್ನಮನೆ ಅರಮನೆಯಂತಾದುದನ್ನು ಕಂಡಾಗ ಆದಷ್ಟು ಸಂತೋಷ, ರಂಗಪ್ಪನಿಗೆ ಕೆಲಸ ದೊರೆತಾಗ ಉಂಟಾಯಿತು. ಊರಿನ ಜನರಿಗೆ ದವಸವನ್ನು ಹಂಚುವುದೇ ಅವನ ಕೆಲಸ. ರಂಗಪ್ಪ ಧರ್ಮಿಷ್ಠ. ಪ್ರತಿದಿನ ಕಛೇರಿಗೆ ಸಮಯಕ್ಕೆ ಸರಿಯಾಗಿ ಹೋಗುತ್ತಿದ್ದ. ನ್ಯಾಯ ಮೀರದೆ ತನ್ನ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದ. ಸರ್ಕಾರಕ್ಕಾಗಲೀ ಜನರಿಗಾಗಲೀ ಮೋಸ ಮಾಡಬೇಕೆಂಬ ಇಚ್ಛೆ ಅವನಿಗಿರಲಿಲ್ಲ. ಅವನ ಸತ್ಯತೆ, ಕರ್ತವ್ಯನಿಷ್ಠೆಗಳು ಮೇಲಧಿಕಾರಿಯ ಪ್ರೀತಿಯನ್ನು ಗಳಿಸಿದವು. ಅವನ ಸಹೋದ್ಯೋಗಿಗಳು ಅಸೂಯೆಪಡುತ್ತಿದ್ದರು. ಮೇಲಧಿಕಾರಿಗಳು ಉಳಿದವರಿಗೆಲ್ಲಾ

" ರಂಗಪ್ಪನನ್ನು ನೋಡಿ ಕಲಿಯಿರಿ. ನೀವು ಕೆಲಸಗಳ್ಳರು, ಸೋಮಾರಿಗಳು. ಆತ ಒಂದು ದಿನದಲ್ಲಿ ಮಾಡುವ ಕೆಲಸವನ್ನು ನೀವು ಒಂದು ವಾರವಾದರೂ ಮುಗಿಸಿರುವುದಿಲ್ಲ. ಅವನಂತೆ ನಿಮಗೆ ಕೆಲಸದ ಮೇಲೆ ಆಸಕ್ತಿಯೇ ಇಲ್ಲ. ಕಛೇರಿಯ ಕೆಲಸವೆಲ್ಲ ಆತನೊಬ್ಬನಿಂದಲೇ ನಡೆಯುತ್ತಿದೆ " ಎನ್ನುತ್ತಿದ್ದರು. ಇದರಿಂದ ಇತರರಿಗೆಲ್ಲ ರಂಗಪ್ಪನಲ್ಲಿ ಅಸೂಯೆ ಬೆಳೆಯಿತು.

ಕಛೇರಿಯಲ್ಲಿ ರಂಗಪ್ಪನೆಂದರೆ ಬೆರಳು ಕಚ್ಚದ, ಅಸೂಯೆಪಡದವನೊಬ್ಬನೂ ಇರಲಿಲ್ಲ. ಯಾರಿಗಾದರೂ ಹೆಚ್ಚಿನ ಸ್ಥಾನಕ್ಕೆ ಪ್ರಮೋಷನ್ ಸಿಕ್ಕುವಂತಾದರೆ ಮೊದಲು ಸಿಕ್ಕುವುದು ರಂಗಪ್ಪನಿಗೇ ಎಂದು ಎಲ್ಲರೂ ತಿಳಿದಿದ್ದರು.

ಕೆಲಸಕ್ಕೆ ಹೊಸದಾಗಿ ಸೇರುತ್ತಲೇ ಇದ್ದರು. ಆಗಲೇ ರಂಗಪ್ಪನ ಪ್ರಯತ್ನದ ಫಲವಾಗಿ ಅವನ ಸಹಪಾಟಿ ಚನ್ನಪ್ಪನಿಗೂ ಅದೇ ಡಿಪೋದಲ್ಲಿ ಕೆಲಸ ಸಿಕ್ಕಿತು.

ಚನ್ನಪ್ಪನೂ ಆಗಕಾನೆ ಶಾಲಾ ಜೀವನಕ್ಕೆ ಶರಣು ಹೊಡೆದು ಬಂದಿದ್ದ. ಕಾಲೇಜಿನ ಮೆಟ್ಟಲನ್ನೂ ಕೆಲವು ದಿನ ತುಳಿದಿದ್ದ. ವಿದ್ಯಾವೀರ-ಶೋಕುಗಾರ-ವಾಚಾಳಿ !

ಕೆಲವೇ ದಿನಗಳಲ್ಲಿ ಚನ್ನಪ್ಪನ ವರ್ಚಸ್ಸು ಬೆಳೆಯುತ್ತಬಂತು. ಎಲ್ಲರೊಡನೆಯೂ ಯಾವಾಗಲೂ ನಕ್ಕು ನಲಿಯುತ್ತ ಇರುತ್ತಿದ್ದ. ಹತ್ತಾರಾಣೆಯ ಸಿಗರೇಟನ್ನು ಪ್ರತಿದಿನವೂ ಸಹೋದ್ಯೋಗಿಗಳಿಗೂ ಹಂಚಿ, ತಾನೂ ಸೇದುತ್ತಿದ್ದ. ಆಗಾಗ ಎಲ್ಲರಿಗೂ ತಿಂಡಿ ಕೊಡಿಸುವನು. ಅವನ ವೆಚ್ಚಗಳನ್ನು ಕಂಡು ಎಲ್ಲರೂ ಇವನು ಅನುಕೂಲಸ್ಥನಾಗಿರಬೇಕೆಂದೂ, ಶೋಕಿಗಾಗಿ ಕೆಲಸ ಹಿಡಿದಿರಬಹುದೆಂದೂ ಭಾವಿಸಿದ್ದರು. ಡಿಪೋದಲ್ಲಿ ಚಿಕ್ಕ ಆಳಿನಿಂದ ಹಿಡಿದು ದೊಡ್ಡ ಸಾಹೇಬರವರೆಗೆ ಅವನ ವರ್ಚಸ್ಸು ಬಿದ್ದಿತು. ರಜಾದಿನಗಳು ಬಂದಾಗ ಚನ್ನಪ್ಪ ತಾನಾಗಿಯೇ ದೊಡ್ಡ ಸಾಹೇಬರ ಮನೆಗೆ ಹೋಗಿ, ಅವರ ಮಕ್ಕಳನ್ನು ಕರೆದುಕೊಂಡು ಗಾಳಿ ಸವಾರಿ ಹೊರಡುತ್ತಿದ್ದ. ಹಿಂದಿರುಗಿ ಬರುವಾಗ ಅವರಿಗೆ ಮಿಠಾಯಿ-ಬಿಸ್ಕತ್ತುಗಳನ್ನು ಕೊಡಿಸುತ್ತಿದ್ದ. ಸಾಹೇಬರೇನಾದರೂ ಬಾಯ್ತೆರೆದರೆ ಜಗಳವಾಡುವವನಂತೆ ನಟಿಸಿ, ಅವರ ಬಾಯ್ಮುಚ್ಚಿಸುತ್ತಿದ್ದ. ಸಾಹೇಬರು ಹೆಚ್ಚು ಮಾತನಾಡಲಾರದೆ ಸುಮ್ಮನಾಗಿಬಿಡುತ್ತಿದ್ದರು.

'ತಮಗೇನು ಬೇಕಾದರೂ ತಿಳಿಸಿ . . ನಾನಿರುವಾಗ ಏತರ ಚಿಂತೆಯೂ ಬೇಡ. ಏತಕ್ಕಾಗಿಯೂ ತೊಂದರೆಪಟ್ಟುಕೊಳ್ಳಬೇಡಿ. ತಾವು ನನಗೆ ಹೇಳದೆ ಇತರರಿಗೆ ಹೇಳಿದರೆ ನನ್ನನ್ನು ಬೇರೆಯವನೆಂದು ಭಾವಿಸಿ ದಂತಾದೀತು' ಎನ್ನುತ್ತಿದ್ದ. ದೊಡ್ಡ ಸಾಹೇಬರೂ ಸಹ ಮೊದಮೊದಲು ಸ್ವಲ್ಪ ಬಿಗುಮಾನದಿಂದಲೇ ಇದ್ದರು ಬರುಬರುತ್ತಾ ಚನ್ನಪ್ಪ ಎಲ್ಲವನ್ನೂ ಸರಿಮಾಡಿಕೊಂಡ. ಅಂತೂ ಚನ್ನಪ್ಪ ಸಾಹೇಬರ ಮನೆಯವರಲ್ಲೊಬ್ಬ ನಂತಾದ. ಈಗೀಗ ಸಾಹೇಬರು 'ಬಾರಯ್ಯ ಮನೆ ಬಳಿ' ಎನ್ನಲಾರಂಭಿ ಸಿದರು........ಚನ್ನಪ್ಪ ಸಾಹೇಬರ ಮನೆಯ 'ಮೇನೇಜರ'ನಾಗಿ ಬಿಟ್ಟ.

ರಂಗಪ್ಪನ ಕೆಲಸ ಎಂದಿನಂತೆಯೇ ಸಾಗುತ್ತಿತ್ತು. ಈಗ ಸಾಹೇಬರ ಮೇಲಾಗಲಿ, ಸಹೋದ್ಯೋಗಿಗಳ ಮೇಲಾಗಲೀ ಅವನ ವರ್ಚಸ್ಸು ಉಳಿದಿ ರಲಿಲ್ಲ. ಇಂದು ಚನ್ನಪ್ಪದೇ ಎಲ್ಲರಲ್ಲೂ ಪ್ರಭಾವ.

ರಂಗಪ್ಪನಿಗೆ ಆತನ ತಾಯಿ ಧರ್ಮಭೀರು...."ಸತ್ಯಧರ್ಮಗಳನ್ನೆಂದೂ ಬಿಡದಿರು ಅವು ಮಾಯವಾದಲ್ಲಿ ಎಲ್ಲವೂ ಹೋದಂತೆ. ಅಸತ್ಯ-ಅಧರ್ಮ ಅನ್ಯಾಯಗಳಿಂದಾಗಬಹುದಾದ ರಾಜಭೋಜನ ನಮಗೆ ಬೇಡ. ಸತ್ಯ-ನ್ಯಾಯಗಳಿಂದ ತಿರಿದುಂಡರೂ ಅದೇ ಪರಮ ಶ್ರೇಯಸ್ಕರವಾದದ್ದು" ಎಂದು ಉಪದೇಶಿಸುತ್ತಿದ್ದಳು.

ಚನ್ನಪ್ಪನಿಗೆ ಆತನ ತಂದೆ ಅತ್ಯಂತ ಲೋಭಿ 'ಸುಳ್ಳನ್ನಾಡಿದರೂ ಸರಿ, ಯಾವಾಗಲೂ ನಿಮ್ಮ ಸಾಹೇಬರನ್ನು ಮೆಚ್ಚಿಸಲೆತ್ನಿಸು. ನಿಮ್ಮ ಸಾಹೇಬರು ನಿನ್ನ ಹಿಡಿತದಲ್ಲಿದ್ದರೆ ಯಾರೇನೂ ಮಾಡರು. ಬೇಕಾದ್ದನ್ನು ಮಾಡು. ಇಂದು ಸತ್ಯಧರ್ಮಗಳಿಲ್ಲ. ನಾನು ಧರ್ಮಾವತಾರಿಯಂತೆ ನಡೆದಿದ್ದರೆ ಈಗಿನ ಸ್ಥಿತಿ ಯಲ್ಲಿರುತ್ತಲೇ ಇರಲಿಲ್ಲ; ಚಿಪ್ಪು ಹಿಡಿಯಬೇಕಾಗಿತ್ತು. ನೌಕರಿಗೂ ಧರ್ಮ-ನ್ಯಾಯಗಳಿಗೂ ಸಂಬಂಧವಿಲ್ಲ. ನಂಬಿಕೆ-ಸತ್ಯಗಳು ಮನೆಯಲ್ಲಿರ ಬೇಕಾದ ಗುಣಗಳು. ನೌಕರಿಯಲ್ಲಿ ಸತ್ಯವನ್ನಾಡಿದವನು ಉನ್ನತಿಹೊಂದಲಾರ. ನೀನೇ ಯೋಚಿಸಿ ನೋಡು....ಲೋಕದಲ್ಲಿರುವ ಹಣಗಾರರರೆಲ್ಲರೂ ಬಡವರ ರಕ್ತವನ್ನು ಹೀರಿ, ಇತರರನ್ನು ಮೋಸಪಡಿಸಿಯೇ ಹಣಗಾರರಾಗಿರುವುದು. ಈಗಿನ ಧರ್ಮ ಇದೇ" ಎಂದು ಉಪದೇಶಮಾಡುತ್ತಿದ್ದ.

ಕಛೇರಿಯಲ್ಲಿ ದಿನೇ ದಿನೇ ರಂಗಪ್ಪನ ವರ್ಚಸ್ಸು ಇಳಿಮುಖವಾಗುತ್ತಿದ್ದಂತೆ ಚನ್ನಪ್ಪನ ಪ್ರಭಾವ ಏರುತ್ತಿತ್ತು.

ಸಾಹೇಬರ ಕೃಪಾದೃಷ್ಟಿ ಚನ್ನಪ್ಪನ ಮೇಲೆ ಬಿದ್ದಿತ್ತು. ಅದೃಷ್ಟದೇವ ಚನ್ನಪ್ಪನನ್ನು ಆಶೀರ್ವದಿಸುವಂತಿತ್ತು....ರಂಗಪ್ಪನ ಮೌಢ್ಯವನ್ನು ಕಂಡು ನಗುವಂತಿತ್ತು....

ಅಂದು ಕಛೇರಿಯ ಬಾಗಿಲು ತೆರೆದಿತ್ತು. ಒಬ್ಬ ವರ್ತಕನು ಬಂದನು. ಚನ್ನಪ್ಪ ಆತನಿಗೆ ಹೇಳಿದ 'ಈ ದಿನ ನಿನ್ನಂಗಡಿ ಬಳಿ ಬರುತ್ತೇನೆ. ಇಪ್ಪತ್ತು ಸೇರು ಗೋಧಿ ಕೊಡಬೇಕು—ತಿಳಿಯಿತೋ?'

'ಹೇಗಾದೀತು ಸ್ವಾಮಿ, ನಿಮ್ಮ ರೇರ್ಷ್ಕಾರ್ಡು ನಮ್ಮ ಅಂಗಡಿಗೆ ಬಿದ್ದಿಲ್ಲವಲ್ಲ?'

'ಪ್ರತಿಯೊಂದು ಮೂಟಗೂ ಎರಡು ಸೇರು ಗೋಧಿ ನಿಮಗೆ ಹೆಚ್ಚಾಗಿ ಬರುವುದಿಲ್ಲವೇ? ನನಗೆ ತಿಳಿಯದೆಂದು ಊಹಿಸಿದೆಯೋ? ಹಾಗೆ ಉಳಿದುದನ್ನು ನೀನು ಮನೆಗೆ ಒಯ್ಯುವೆಯೋ ಇಲ್ಲವೋ, ಹೇಳು?'

'ಆದರೆ ಸರ್ಕಾರದವರು ನಾವು ಅಳೆಯುವಾಗ ಖೋತಾ ಬೀಳುವುದೆಂದು ಅದನ್ನು ಹೆಚ್ಚಾಗಿ ಕೊಡುತ್ತಾರೆ ಸ್ವಾಮೀ, ಅಲ್ಲವೇ?'

'ನನ್ನೊಡನೆಯೇ ವಾದವಿವಾದ? ಹುಂ, ಆಗಲಿ ಹೋಗು' ಎಂದು ಹೇಳಿ ಚನ್ನಪ್ಪ ಮೂಟೆ ಕೊಡುವ ಆಳಿಗೆ ಏನೋ ಸನ್ನೆ ಮಾಡಿದನು. ಸ್ವಲ್ಪ ಹೊತ್ತಿನಲ್ಲೇ ವರ್ತಕನು ಬಂದು 'ನೋಡಿ, ಸ್ವಾಮಿ, ಈತ ಕಲ್ಲು ಮಣ್ಣು ಮಿಶ್ರವಾಗಿರುವ ಗೋಧಿ ಮೂಟೆಗಳನ್ನು ಕೊಡುತ್ತಾನೆ. ಗಿರಾಕಿಗಳು ಇದನ್ನು ಮುಟ್ಟರು' ಎಂದನು.

'ನಾವೇನು ಮಾಡಬೇಕು? ಸರ್ಕಾರೀ ಮಾಲು. ಸಿಕ್ಕಿದುದನ್ನು ಬೇಕಾದರೆ ತೆಗೆದುಕೊಳ್ಳಲೇಬೇಕು'

'ಸ್ವಾಮೀ........'

'ನನಗೇನೂ ಹೇಳಬೇಡ. ಬೇಕಾದರೆ ದೊಡ್ಡ ಸಾಹೇಬರ ಬಳಿ ಹೋಗಿ ಹೇಳಿಕೋ'

ವರ್ತಕನಿಗೆ ಮಿಂಚಿನಂತೆ ಎಲ್ಲವೂ ಹೊಳೆಯಿತು. ಅವನೆಂದ—

'ಸ್ವಾಮಿಗಳಿಗೆ ಕೋಪ ಬಂದಂತಿದೆ. ದೊಡ್ಡ ಸಾಹೇಬರಿಗೆ ತಿಳಿದರೆ?........ ಎಂದು ಹೆದರಿದೆ ಅಷ್ಟೆ.'

'ಹಾಗೇನೂ ಯೋಚಿಸಬೇಡ, ಆ ಗೋಧಿ ಸಾಹೇಬರ ಮನೆಗೇ ಸಾಗುತ್ತೆ!'

'ಸಂಜೆಗೆ ಬಂದು ತೆಗೆದುಕೊಂಡುಹೋಗಿ ಸ್ವಾಮಿ'.

ಸರಿ, ವರ್ತಕನಿಗೆ ಒಳ್ಳೆಯ ಗೋಧಿಮೂಟೆ ಸಿಕ್ಕಿತು.

ಹೀಗೆಯೇ ಅನೇಕ ವರ್ತಕರು ಬಂದರು-ಹೋದರು. ಚನ್ನಪ್ಪ ದೊಡ್ಡ ಸಾಹೇಬರ ಮನೆಗೆ ರಾಶಿರಾಶಿ ಗೋಧಿಯನ್ನು ಕಳುಹಿಸಿದ. ಗಂಗಾ ಪ್ರವಾಹದಂತೆ ಹೋಗುತ್ತಿದ್ದ ಆ ರಾಶಿಯಲ್ಲಿ ತಾನು ಕೈತುಂಬ ತೆಗೆದುಕೊಂಡ.

ಚನ್ನಪ್ಪನ ಪ್ರಭಾವ ಇನ್ನೂ ಹೆಚ್ಚಿತು. ಬಟ್ಟೆಯ ಇನ್ಸ್ಪೆಕ್ಟರಿಗೆ ಆಹಾರ ಧಾನ್ಯವನ್ನು ಒದಗಿಸುತ್ತಿದ್ದವನು ಅವನೇ. ಅದಕ್ಕೆ ಪ್ರತಿಫಲ— ಜನರು ನೂರು ಬಾರಿ ಅಲೆದು, ಪತ್ತು ಮಂದಿಯ ಕಾಲು ಹಿಡಿದರೂ ಸಿಕ್ಕದಿದ್ದ ಬಟ್ಟೆಗಳು ಮನೆಯಲ್ಲಿದ್ದಂತೆಯೇ ಚನ್ನಪ್ಪನಿಗೆ ದೊರೆಯಲಾರಂಭವಾಯಿತು. ದೊಡ್ಡ ಸಾಹೇಬರಿಗೆ ಉಲ್ಲನ್ ಕೋಟಿಂಗ್-ವಾಯಿಲ್-ಮಲ್ಲುಗಳನ್ನು ಸರಬರಾಜುಮಾಡುತ್ತಿದ್ದವನೂ ಅವನೇ. ದೊಡ್ಡವರ ಮೇಲೂ ತನ್ನ ವರ್ಚಸ್ಸನ್ನು ಸ್ಥಾಪಿಸುವ ಹಾಗೂ ಅವರ ಮನವನ್ನೊಲಿಸುವ ವಿದ್ಯೆ ಚನ್ನಪ್ಪನಿಗೆ ಸಂಪೂರ್ಣವಾಗಿ ಕರಗತವಾಗಿದ್ದಿತು. ಜನರು ಅರ್ಧಪಾವು ಗೋಧಿಯಿಲ್ಲದೆ ಸಾಯುತ್ತಿದ್ದ ಕಾಲದಲ್ಲಿ ದೊಡ್ಡ ಸಾಹೇಬರ ಮನೆಯಲ್ಲಿ ರಾಶಿರಾಶಿ ಗೋಧಿ ಬಿದ್ದಿತ್ತು. ಕೇಳಿದಾಗ ಮಾತ್ರ ಸ್ಟಾಕೇ ಇಲ್ಲ!'

ಕಾಳಸಂತೆಯು ಪ್ರಾರಂಭವಾಯಿತು. ಸೇರು, ಒಂದೂವರೆ ಸೇರಿನಂತೆ ಮಾರಿದರು. ಚನ್ನಪ್ಪನಿಗೂ ಸಂತೋಷ—ಸಾಹೇಬರಿಗೂ ಸಂತೋಷ!

ಊರಿನಲ್ಲೆಲ್ಲಾ ತುಪ್ಪ ಸೇರಿಗೆ ಒಂದೂವರೆ ರೂಪಾಯಿನಂತೆ ಮಾರಾಟವಾಗುತ್ತಿದ್ದಾಗ ಚನ್ನಪ್ಪ ಘಮಘಮಿಸುವ ತುಪ್ಪವನ್ನು ಸಾಹೇಬರ ಮನೆಗೆ ತೆಗೆದುಕೊಂಡು ಹೋಗುತ್ತಿದ್ದ.

"ತುಪ್ಪ ತಂದಿದೇನೆ ಸಾರ್"

"ಹೇಗಿದೆ ಈಗ ರೇಟು?"

"ರೂಪಾಯಿಗೆ ಸೇರು!"

"ಅರೆ ! ಒಂದೂವರೆ ರೂಪಾಯಿಗೆ ಸೇರಿರಬೇಕು, ಲೆಕ್ಕಹಾಕಿ ನೋಡಿಕೊ"

"ಇದು ನಮ್ಮ ಮನೆ ತುಪ್ಪ ಸಾರ್. ಒಂದು ರೂಪಾಯಿಗಿಂತ ಹೆಚ್ಚಾಗಿ ಬೀಳುವುದಿಲ್ಲ. ಹಸುವಿನ ತುಪ್ಪ."

"ಓಹೋ, ಮನೆಯಲ್ಲಿ ಹಸುವನ್ನು ಬೇರೆ ಇಟ್ಟಿದ್ದಿಯೋ ?"

"ನನ್ನದೇನು....ಎಲ್ಲ ಸಾಹೇಬರ ದಯ."

ಸಾಹೇಬರು ಗಗನಕ್ಕೇರಿಬಿಡುತ್ತಿದ್ದರು. ತುಪ್ಪವನ್ನು ಸ್ವೀಕರಿಸಿ ಸಂತೋಷವನ್ನು ತೋರ್ಪಡಿಸುತ್ತಿದ್ದರು.

ಚನ್ನಪ್ಪನ ವ್ಯಕ್ತಿತ್ವ ಊರಿನಲ್ಲೆಲ್ಲಾ ಹಬ್ಬಿತು. ಅವನು ಏನು ಬೇಕಾದರೂ ಸಾಧಿಸುವಂತಹವನೆಂದು ಎಲ್ಲರೂ ಬಲ್ಲರು. ದೊಡ್ಡ ಸಾಹೇಬರು ಸಹ ಅವನ ಮಾತಿಗೆ 'ನ'ಕಾರ ನುಡಿಯುತ್ತಿರಲಿಲ್ಲ. ಊರಿನಲ್ಲೆಲ್ಲಾ ಚನ್ನಪ್ಪ ಯಶೋವಂತ, ಮಾನ್ಯ ವ್ಯಕ್ತಿ. ಎಲ್ಲರಿಗೂ ಸಹಾಯಕನಾಗಿದ್ದ. ಎಲ್ಲ ರಿಂದಲೂ ಪ್ರತಿಫಲ ಹೊಂದುತ್ತಿದ್ದ. ಮಧುವಿಲ್ಲದ ಹೂವನ್ನು ಬಿಡುವ ದುಂಬಿಯಂತೆ ಏನೂ ಇಲ್ಲದ ಬಡಜನರನ್ನು ಮಾತ್ರ ಚನ್ನಪ್ಪ ಹತ್ತಿರಕ್ಕೇ ಸೇರಿಸುತ್ತಿರಲಿಲ್ಲ.

## ೨

ರಂಗಪ್ಪನ ಸ್ಥಿತಿ ಸ್ವಲ್ಪವೂ ಬದಲಾಗಿರಲಿಲ್ಲ. ಅವನ ಪಾಲಿಗಿನ್ನೂ ರೂಪಾಯಿಗೆ ಹದಿನೈದೇ ಆಣೆಗಳಾಗಿದ್ದುವು ! ಅವನೆಂದೂ ತನ್ನ ರೇಷನ್ ಕಾರ್ಡಿನಲ್ಲಿದ್ದುದಕ್ಕಿಂತ ಹೆಚ್ಚಿನ ಗೋಧಿಯನ್ನು ತೆಗೆದುಕೊಂಡು ಹೋದವನಲ್ಲ. ತೀರಾ ಸಾಮಾನ್ಯ ಜನರಂತೆ ತಾನೂ ಇರುತ್ತಿದ್ದ. ವಾರದಲ್ಲೆರಡು ದಿನ ಕೇವಲ ಚಿಕ್ಕ ಮಕ್ಕಳಿಗೆ ಮಾತ್ರ ಗೋಧಿಯ ರೊಟ್ಟಿಗಳನ್ನು ಕೊಟ್ಟು ದೊಡ್ಡವರೆಲ್ಲರೂ ಕಡಲೇಕಾಯಿ ತಿಂದು ದಿನ ತಳ್ಳುತ್ತಿದ್ದರು. ಬಂದ ಸಂಬಳ ಒಂದು ನಿಮಿಷವೂ ಕೈಲಿ ಉಳಿಯುತ್ತಿರಲಿಲ್ಲ. ಬರುವುದೇ ತಡ ತಿಂಗಳ ಮೊದಲಿನಿಂದ ಮಾಡಿದ್ದ ಸಾಲಗಳನ್ನು ಹರಿಸುವುದರಲ್ಲೇ ತೀರಿಹೋಗುತ್ತಿತ್ತು. ಮುಂದಿನ ತಿಂಗಳು ಸಂಬಳ ಬರುವುದರೊಳಗಾಗಿ ಪುನಃ ಸಾಲ ಬೆಳೆದಿರುತ್ತಿತ್ತು.

ಒಮ್ಮೊಮ್ಮೆ ತೊಟ್ಟು ಹಾಲಿಗಾಗಿ ಮನೆಯ ಮಕ್ಕಳು ಅಳಬೇಕಾದ ಪ್ರಸಂಗಗಳು ಬರುತ್ತಿದ್ದವು. ತುಪ್ಪವನ್ನಂತೂ ಅವರೆಂದೂ ಮನಸ್ಸಿಗೆ ತೃಪ್ತಿಯಾಗುವಂತೆ ತಿಂದಿರಲೇ ಇಲ್ಲ. ಕೇವಲ ವಾಸನೆ ಕಂಡಿದ್ದರು. ಸ್ವತಃ ರಂಗಪ್ಪನಿಗೇ ಒಂದು ಚನ್ನಾದ ಅಂಗಿಯಾಗಲೀ ಕೋಟಾಗಲಿ ಇರಲಿಲ್ಲ. ಇನ್ನು ಮನೆಯವರ ಪಾಡೇನು ?

ಒಂದು ದಿನ ರಂಗಪ್ಪನ ಸ್ನೇಹಿತ ಸಿದ್ದಪ್ಪನೇ ಕೇಳಿದ " ಚನ್ನಪ್ಪನನ್ನು ಕೆಲಸಕ್ಕೆ ಸೇರಿಸಿದವನು ನೀನೇ ಅಲ್ಲವೇ ? "

" ಹೌದು "

" ನಿನಗಿಂತ ಜೋರಾಗಿದ್ದಾನಲ್ಲಾ ? "

"....................."

" ಹೀಗಿದ್ದೂ ನಿನ್ನ ಸ್ಥಿತಿ ಹೀಗೆ ! ಅವನ ದಿಮಾಕು ನೋಡು.... ಅವನ ಹೆಂಡತಿಗೆ ಪೈ ತುಂಬಾ ಒಡವೆಗಳನ್ನು ಮಾಡಿಸಿದಾನೆ. ಪ್ರತಿ ದಿನ ಐದು ರೂಪಾಯಾದರೂ ಖರ್ಚುಮಾಡುತ್ತಾನೆ. ಕೈಗೆ ವಾಚು ಬಂದಿದೆ. ಈಚೆಗೆ ಒಂದು ಮನೆ ಕೊಂಡಿದಾನೆ. ಒಳ್ಳೊಳ್ಳೆ ಬಟ್ಟೆಗಳನ್ನು ಹಾಕುತ್ತಾನೆ. ಇದಕ್ಕೆಲ್ಲ ಕಾರಣ ? "

" ನನಗೆ ತಿಳಿಯದು, ಚನ್ನಪ್ಪನಿಗೇ ಗೊತ್ತಿರಬೇಕು. ಪ್ರಾಯಶಃ ಹಣವನ್ನು ವೆಚ್ಚಮಾಡುವ ವಿಧಾನವನ್ನು ನಮಗಿಂತ ಚೆನ್ನಾಗಿ ಅವನರಿತಿರಬೇಕು."

" ನನಗೇ ಸುಳ್ಳು ಹೇಳಬೇಡವೋ ".

" ಚನ್ನಪ್ಪ ನಂಬಿಕೆ-ನ್ಯಾಯಗಳನ್ನು ಮಾರಿ ಸುಖವನ್ನು ಕೊಂಡಿದ್ದಾನೆ."

" ಅಂತಹ ನ್ಯಾಯ-ನಂಬಿಕೆ ಏನೋ ? ಅವಕ್ಕಾಗಿ ಇಷ್ಟು ತೊಂದರೆ ಪಡುವುದೇ ? " ಸಿದ್ದಪ್ಪ ತೊಂದರೆಗಳಿಗೆ ಸಿಲುಕಿ, ನರಳಿ ನ್ಯಾಯ ನಂಬಿಕೆಗಳಲ್ಲಿ ವಿಶ್ವಾಸವನ್ನು ಕಳೆದುಕೊಂಡು ಬಿಟ್ಟಿದ್ದನು.

" ನಾನೂ ಹಾಗೆಯೇ ಮಾಡಬೇಕೆಂಬುದು ನಿನ್ನ ಇಷ್ಟವೇ ? ನಿನಗೆ ತಿಳಿಯದು. ಇದು ಬಹಳ ಅಪಾಯಕರವಾದುದು. ಈ ಕೆಲಸ ಮಾಡುವಾಗ ಒಂದು ಕಾಲನ್ನು ಜೈಲೊಳಗಿಟ್ಟಿರುವೆವೆಂಬರಿವು ಇರಬೇಕು. ನಾನೇ ಅಲ್ಲ,

ನಮ್ಮ ತಾಯಿ ಕೂಡ, ನಾನು ತಂದ ಹಣ ಅನ್ಯಾಯದ್ದೆಂದು ತಿಳಿದರೆ ಇಂದೇ ಮನೆಬಿಟ್ಟು ಹೊರಡುತ್ತಾಳೆ. ಭಿಕ್ಷೆಯೆತ್ತಿಯಾದರೂ ಜೀವಿಸಿಯಾಳು, ಆದರೆ ಪುನಃ ನನ್ನ ಮುಖವನ್ನು ನೋಡಳು. ನಿನಗಿನ್ನೂ ಆ ತಾಯಿಯ ಹೃದಯದರಿವಿಲ್ಲ..............."

"ಬಿಡು ರಂಗಪ್ಪ, ನೀನು ಹೀಗಿರುವುದೇ ಒಳಿತು ಏನೂ ತಿಳಿದು ಕೊಳ್ಳಬೇಡ. ದೇವರು ಕಾಪಾಡುತ್ತಾನೆ."

೩

ಒಂದು ದಿನ ರಂಗಪ್ಪ ಲೆಕ್ಕಗಳನ್ನು ಪರಿಶೀಲಿಸುತ್ತಿದ್ದ. ಕಛೇರಿಯಲ್ಲಿ ಚನ್ನಾಗಿದ್ದ ಗೋಧಿಯ ಮೂಟೆಗಳಿದ್ದವು. ಸ್ಟಾಕು ಪುಸ್ತಕದಲ್ಲಿ ಹುಳಕ, ಖೋತಾ, ಕಲ್ಲುಮಣ್ಣು, ಇಲಿತಿಂದದ್ದು ಇತ್ಯಾದಿ ಲೆಕ್ಕಹಾಕಿ ಪೂರ್ತಿ ಖೋತಾ ಮಾಡಿಬಿಟ್ಟಿದ್ದರು. ಅವನು ಚನ್ನಪ್ಪನನ್ನು ಕರೆದು ಕೇಳಿದನು. 'ಇದೇನು, ಚನ್ನಾದ ಸರಕು ಇರುವಾಗಲೂ....ಏನೂ ಇಲ್ಲ, ಚನ್ನಾಗಿರುವ ಸರಕು ಇಲ್ಲ—ಎಂದು ಲೆಕ್ಕದಲ್ಲಿದೆಯಲ್ಲಾ ? '

'ಲೆಕ್ಕ ಸರಿಯಾಗಿದೆ. ಇನ್ನೂ ಆ ಮೂಟೆಗಳನ್ನು ಸಾಗಿಸಿಲ್ಲ ಅಷ್ಟೆ!'

'ನನ್ನ ಕಣ್ಣಿಗೆ ಮಣ್ಣೆರಚುವ ಪ್ರಯತ್ನಬೇಡ. ಸರ್ಕಾರಕ್ಕೂ ಜನಕ್ಕೂ ದ್ರೋಹ ಬಗೆವುದು ಬೇಡ. ಮಾರ್ಕೆಟಿಂಗ್ ಸಾಹೇಬರು ಚೆನ್ನಾಗಿರುವ ಧಾನ್ಯವನ್ನೇ ಕಳುಹಿಸಿದ್ದೆ ಎಂದರೆ ಆಗೇನು ಮಾಡುವಿರಿ ? ಸರ್ಕಾರ ಸುಮ್ಮನಿರದು '

'ರಂಗಪ್ಪ, ಏನು ಮಾಡಬೇಕು ಹೇಳು, ಮಾಡದಿದ್ದರೆ ಹೊಟ್ಟೆ ತುಂಬದು. ಸರ್ಕಾರ ಏನು ಮಾಡಬಲ್ಲದು ? ಹಿಡಿಯುವವರಾರು ? ಎಲ್ಲರೂ ಕಳ್ಳರೇ ! ನಾನು ಅಷ್ಟು ಮೂರ್ಖನಲ್ಲ. ಇತರರಿಗೂ ತಿನ್ನಿಸಿ ನಾನೂ ತಿನ್ನುತ್ತೇನೆ. '

'ಆದರೂ ಕೆಟ್ಟ ಕೆಲಸ ಕೆಟ್ಟದ್ದೇ. ಕಳ್ಳತನ ಕಳ್ಳತನವೇ. ಎಂದಾದರೊಮ್ಮೆ ಅದು ರಟ್ಟಾಗಿಯೇ ಆಗುವುದು. ಕೆಟ್ಟ ಕೆಲಸದ ಫಲ ಕೆಟ್ಟದ್ದೇ ಆಗುವುದು. ಆ ಫಲವನ್ನು ನೀನನುಭವಿಸಬೇಕಾಗುವುದು.'

'ಏನೂ ತಿಳಿದುಕೊಳ್ಳಬೇಡ ರಂಗಪ್ಪ; ನೀನು ಸತ್ಯಯುಗದ ಮಾತುಗಳನ್ನೇ ಆಡುತ್ತಿರುವೆ. ಇದು ಕಲಿಯುಗ. ಆಗ ಕೆಟ್ಟ ಕೆಲಸಕ್ಕೆ ಕೆಟ್ಟ ಫಲ ಬರುತ್ತಿತ್ತು. ಈಗ ಹಾಗಾಗದು. ಸತ್ಯಕ್ಕೆ ಬಾಗಿ ನಡೆವವರಾರೂ ಬದುಕರು. ನೋಡಿದಲ್ಲಿ ಹೊಟ್ಟೆಗಿಲ್ಲದೆ-ಬಟ್ಟೆಗಿಲ್ಲದೆ ಸಾಯುತ್ತಾರೆ. ಅದೇ ಅಸತ್ಯವಂತರು ಅಧರ್ಮಿಗಳು ಉನ್ನತಸ್ಥಿತಿಯಲ್ಲಿರುತ್ತಾರೆ. ಒಬ್ಬ ಸಾಹುಕಾರ ಹತ್ತಾರು ನೂರು ಮಂದಿ ಕೂಲಿಗಾರರ ರಕ್ತವನ್ನು ಹಿಂಡಿ ಸಂಜೆಯಾಗುತ್ತಲೇ ಬ್ರಾಂದಿಯನ್ನು ಕುಡಿಯುತ್ತಾ ಮತ್ತನಾಗುತ್ತಾನೆ. ಅವನೇ ಬ್ರಾಹ್ಮಣರಿಗೆ ಒಂದು ಸಂತರ್ಪಣೆ ಮಾಡಿಸುತ್ತಾನೆ. ಒಂದು ಧರ್ಮಛತ್ರವನ್ನು ಕಟ್ಟಿಸುತ್ತಾನೆ. ಜನತೆ ಅವನನ್ನು ದಾನಶೂರನೆಂದು ಹೊಗಳುತ್ತದೆ. ವಿದ್ವಾಂಸರು ಅವನನ್ನು ಧರ್ಮಾತ್ಮನೆಂದು ಹೊಗಳುತ್ತಾರೆ. ಹಣದಿಂದ ಏನನ್ನು ಬೇಕಾದರೂ ಕೊಳ್ಳಬಹುದು. ಧರ್ಮ-ಯಶ-ಎಲ್ಲವೂ ಹಣ-ಹಣದಲ್ಲಿವೆ.'

'ಆದರೆ ಪಾಪದ ರಾಶಿ ಹೆಚ್ಚುತ್ತ ಹೋಗುತ್ತದೆ. ಒಂದಲ್ಲೊಂದು ದಿನ ಅನುಭವಿಸಬೇಕು.'

'ಅದು ಪುರಾಣದ ಬದನೇಕಾಯಿ! ಇಂದಿನ ಮಾತನ್ನು ಹೇಳು ರಂಗಪ್ಪ. ನಿನ್ನನ್ನೇ ಉದಾಹರಣೆಗೆ ತೆಗೆದುಕೊ ಇಷ್ಟು ದಿನದಿಂದಲೂ ನಂಬಿಕೆ-ಸತ್ಯಗಳಿಂದ ಕೆಲಸ ಮಾಡಿದೆಯಲ್ಲಾ, ನಿನಗೆ ದೊರೆತದ್ದೇನು? ಎಷ್ಟು ಕಷ್ಟಪಡುತ್ತಿರುವೆ. ನನಗೂ ತಿಳಿದಿದೆ. ನಿನ್ನಂತೆ ನಾನೂ ಮೂರ್ಖನಾಗಲಾರೆ. ಸತ್ಯ-ನ್ಯಾಯಗಳನ್ನನುಸರಿಸಿದರೆ ಸ್ವರ್ಗ ಸಿಗುವುದೆಂದು ಹೇಳುವೆಯೋನೋ? ಆ ಲೋಕದ ಸುಖವನ್ನು ಆಶಿಸುತ್ತಾ ಈ ಲೋಕದ ಸುಖವನ್ನು ಬಿಡುವುದಾವ ನ್ಯಾಯ? ಇದು ಸರಿಯಲ್ಲ. ಇಲ್ಲಿ ಇರುವಾಗ ತಿಂದುಂಡು ಸುಖವಾಗಿರೋಣ ನಂತರ ಅಲ್ಲಿ ಏನಾಗುವುದೋ ಯಾರು ಬಲ್ಲರು?'

ಚನ್ನಪ್ಪನ ವಾಗ್ಝರಿ ರಂಗಪ್ಪನನ್ನು ಬೆರಗುಗೊಳಿಸಿತು. ಅತನು ಹೇಳುವುದೇ ನ್ಯಾಯವೆನಿಸಿತು ಅವನಿಗೂ.

ಕೆಲವು ದಿನ ಕಳೆಯಿತು. ಚನ್ನಪ್ಪ ಸೀನಿಯರ್ ಇನ್ಸ್ಪೆಕ್ಟರ್ ಹುದ್ದೆಗೇರಿದನು. ಯಾರಿಗೂ ಆಶ್ಚರ್ಯವಾಗಲಿಲ್ಲ. ಎಲ್ಲರೂ ಹೀಗಾದೀತೆಂದು ಮೊದಲೇ ತಿಳಿದಿದ್ದರು. ಕೇವಲ ರಂಗಪ್ಪ ಮಾತ್ರ ಹೀಗಾದೀತೆಂದೆಣಿಸಿರಲಿಲ್ಲ. ತಾನು ಅನುಭವಶಾಲಿಯೂ, ನ್ಯಾಯನೀತಿಗಳನ್ನು ಪಾಲಿಸಿದವನೂ ಆದು

ವರಿಂದ ತನಗೇ ಆ ಪದವಿ ಲಭಿಸೀತೆಂದು ಊಹಿಸಿದ್ದನು. ಆದರದು ಹುಸಿ ಯಾಯಿತು. ಸ್ವತಃ ಚನ್ನಪ್ಪ ಈ ಉನ್ನತೋದ್ಯೋಗ ತನಗೇ ಲಭಿಸುವುದೆಂದು ಅರಿತಿದ್ದನು. ರಂಗಪ್ಪನ ನ್ಯಾಯಧರ್ಮಗಳಿಗೆ ತಕ್ಕ ಪ್ರತಿಫಲ ದೊರಕಲಿಲ್ಲ. ಹೀಗಾದೀತೆಂದು ರಂಗಪ್ಪನು ಕನಸಿನಲ್ಲಿಯೂ ಎಣಿಸಿರಲಿಲ್ಲ.

ಚನ್ನಪ್ಪ ತನ್ನ ಕೈವಾಡವನ್ನು ಮತ್ತಷ್ಟು ಬಿರುಸಾಗಿ ನಡೆಸಲಾರಂಭಿಸಿದ. ಅವನ ತಲೆ ನಿಲ್ಲದಾಯಿತು. ಒಂದು ದಿನ ಯಾವುದೋ ಪತ್ತಾರು ರೇಷನ್ ಕಾರ್ಡುಗಳಿಗೆ ಅಕ್ಕಿಯನ್ನು ಸುಳ್ಳು ಸುಳ್ಳೇ ಕೊಟ್ಟಂತೆ ಬರೆದು ಅಕ್ಕಿಯನ್ನು ಸಾಗಿಸುತ್ತಿದ್ದಾಗ ಯಾರೋ ಕಾಂಗ್ರೆಸಿಗರೊಬ್ಬರು ಇದನ್ನು ಕಂಡುಹಿಡಿದು ಪೋಲೀಸರಿಗೆ ದೂರುಕೊಟ್ಟರು. ನ್ಯಾಯವಿಚಾರಣೆ ನಡೆಯಿತು. ಚನ್ನಪ್ಪ ಎಲ್ಲರಿಗೂ ಬೇಕಾದವನು........ಏನೋ ಸ್ವಲ್ಪ ಗಲಾಟೆಮಾಡಿದಂತೆ ನಟಿಸಿದರು, ಪೋಲೀಸಿನವರು.. .....ನಂತರ ಎಲ್ಲವೂ ಶಾಂತವಾಯಿತು.

ನಮ್ಮೂರಿನಲ್ಲಿ ಇನ್ನೂ ಡಿಪೋ ಇದೆ. ರಂಗಪ್ಪನೂ ಇದ್ದಾನೆ, ಚನ್ನಪ್ಪನೂ ಇದ್ದಾನೆ, ಅಪ್ರತಿಮ ಅನ್ಯಾಯಗಳ ಸಹಾಯದಿಂದಲೇ ಚನ್ನಪ್ಪ ಇಂದು ಊರಿನ ಗಣ್ಯವ್ಯಕ್ತಿ ಎನಿಸಿಕೊಂಡಿದ್ದಾನೆ. ನ್ಯಾಯ–ನಂಬಿಕೆ–ಸತ್ಯ–ಧರ್ಮಗಳನ್ನನುಸರಿಸಿ ದುಡಿಯುತ್ತಿರುವ ರಂಗಪ್ಪ ಮೊದಲಿನ ಹೀನ ದೆಸೆಯಲ್ಲೇ ಕೊಳೆಯುತ್ತಿದ್ದಾನೆ.

ಅಂತೂ ಸಾಗುತ್ತಲಿದೆ ಲಂಚಪ್ರಪಂಚ—ರೇಷನ್ ರಾಜ್ಯದಲ್ಲಿ !

# ಡೊಂಕುಬಾಲ

ಲಂಚ ಸಾಮ್ರಾಜ್ಯದಲ್ಲಿ ವರ್ತಕ ಸಂಘವೊಂದು 'ಅದನ್ನು' ಕೊಡಲಿಚ್ಛಿಸದೆ; ಬಿಡಲೂ ಶಕ್ತವಾಗದೆ ಹೇಗೆ ಬಾರಿಬಾರಿಯೂ 'ಅದನ್ನು' ಕೊಡುತ್ತಾ ಬರುತ್ತದೆಂಬುವದರ ಲಘುಚಿತ್ರಣವಿದು. ಅದೇ 'ಮಾಮೂಲು!'

ಒಂದು ಆ ವರ್ತಕ ಸಂಘವು, ಸಕಲ ಸದಸ್ಯರ ಸಭೆಯನ್ನು ಸೇರಿಸಿತ್ತು. ಸಭೆಗೆ ಸದಸ್ಯರೆಲ್ಲ ಬಂದಮೇಲೆ ಕೊಠಡಿಯ ಚಿಲಕ ಹಾಕಿ ಚರ್ಚೆಗಾರಂಭಿಸಿದರು.

ಅಂದಿನ ಚರ್ಚೆಯ ವಿಷಯ ಬಹಳ ಮುಖ್ಯವಾದದ್ದಿತ್ತು. ಚರ್ಚೆಯ ವಿಷಯವನ್ನು ಒಬ್ಬರು ಮಂಡಿಸಿದರು ಏನೆಂದರೆ ಟೆಕ್ಸ್ಟೈಲ್ ಇನ್ಸ್ಪೆಕ್ಟರು, ತಮಗೆ ಬರಬೇಕಾದ ಮಾಮೂಲನ್ನು ಕೊಡಬೇಕೆಂದು ಕೇಳಲು ಬಂದಿದಾರೆ. ಅವರಾಗಲೇ ಬಂದು ಎರಡು ದಿನವಾಯ್ತು. ಹೋಗಲು ಆತುರಪಡುತ್ತಿದಾರೆ. ಅವರಿಗೇನೋ ಕೆಲಸವಿದೆಯಂತೆ, ಆದ್ದರಿಂದ ಕೊಡಿ ಎಂದರು. ಮಾಮೂಲಿನಂತೆ ಎಲ್ಲಾ ವರ್ತಕರನ್ನೂ ಕೇಳಲು ಬಹಳಮಂದಿ ಕೊಡಲು ಆಗುವುದಿಲ್ಲ, ಹಾಗೆ ಹೀಗೆ ಎನ್ನುತ್ತಾರೆ. ಆದ್ದರಿಂದ ಈಗ ಕೊಡೋಣವೇ, ಬೇಡವೇ ಎಂಬುದನ್ನು ತೀರ್ಮಾನಿಸಿ, ಅವರಿಗೆ ಹೇಳೋಣವೆಂದು ಮೀಟಿಂಗ್ ಸೇರಿಸಿದೆ ಎಂದರು.

ಮುಕ್ಕಾಲುಪಾಲು ಸದಸ್ಯರು ಬೇಡವೆಂದರು. ಇಬ್ಬರು ಘಟಾನುಘಟಿ ಅಂಗಡಿಗಳವರು, ಕೊಡಬೇಕು ಮಾಮೂಲನ್ನು ಬಿಟ್ಟರೆ ಸರಿಯಲ್ಲ. ಒಂದೇ ಬಾರಿಗೆ ನಿಲ್ಲಿಸಿಬಿಟ್ಟರೆ, ಅವರಿಗೂ ಸಿಟ್ಟುಬರುತ್ತೆ. ಆದ್ದರಿಂದ ಈ ಸಲ ಕೊಡೋಣವೆಂದರು.

ಮತ್ತೊಬ್ಬರು ಈಗಲೇ ಕೊಡಕೂಡದು. ನಿಲ್ಲಿಸಿದರೆ ಈಗಿನಿಂದಲೇ ನಿಲ್ಲಿಸಬೇಕು, ಇಲ್ಲದಿದ್ದರೆ ಆಗೋಲ್ಲ ಎಂದರು.

ಪುನಃ ಘಟಾನುಘಟಿ ಅಂಗಡಿಯವರು, ಹಾಗೆ ಮಾಡದೆ ಇದ್ದರೆ ಅವರು ಕೋಪಗೊಳ್ಳುತ್ತಾರೆ, ಆದ್ದರಿಂದ ಈ ಸಲ ಕೊಟ್ಟು ಮುಂದಿನ ಸಲಕ್ಕೆ ಇಲ್ಲ ವೆಂದು ಹೇಳಿಬಿಡೋಣವೆಂದರು. ಮೊದಲು ಮಾಮೂಲನ್ನು ಕೊಡಲು ಆಗುವುದಿಲ್ಲ ಎಂದ ಸದಸ್ಯರೆಲ್ಲ, ಆಗಲಿ, ನೀವು ಮಾಡಿದ ತೀರ್ಮಾನಕ್ಕೆ ನಾವಿನ್ನೇನು ಹೇಳೋದು ; ಸರಿ ಈ ಸಾರಿ ಕೊಟ್ಟು, ಮುಂದಿನ ಸಾರಿ ಇಲ್ಲ ಎನ್ನೋದು ಎಂದು ತೀರ್ಮಾನಿಸಿದರು.

ಅಂದು ಮೀಟಿಂಗ್ ಪುಸ್ತಕದಲ್ಲಿ, ಕೆಲವು ಅಗತ್ಯ ವಿಷಯಗಳನ್ನು ಚರ್ಚಿಸಲಾಯ್ತು ಎಂದು ಬರೆದು, ಎಲ್ಲರೂ ರುಜುಮಾಡಿದರು.

ಒಂದು ತಿಂಗಳು ಕಳೆಯಿತು. ಪುನಃ ಸಕಲ ಸದಸ್ಯರ ಮೀಟಿಂಗ್ ಸೇರಿತು. ಈ ದಿನವೂ ಅಷ್ಟೆ, ಟೆಕ್ಸ್‌ಟೈಲ್ ಇನ್ಸ್‌ಪೆಕ್ಟರು ಬಂದಿದ್ದ. ಆತ ಊರಿನ ವರ್ತಕರಲ್ಲಿ ಮೇಟಿಯನ್ನು ಹಿಡಿದು ಮಾಮೂಲು ಕೇಳಿದ. ಆತ ಏನೂ ಎದುರು ಉತ್ತರ ಕೊಡದೆ ಸಭೆ ಸೇರಿಸಿದ. ಇನ್ಸ್‌ಪೆಕ್ಟರಿಗೆ ಯಾರೂ ಉತ್ತರ ಕೊಡಲು ಧೈರ್ಯಮಾಡುತ್ತಿರಲಿಲ್ಲ. ಏಕೆಂದರೆ ಅವರು ಇನ್ಸ್‌ಪೆಕ್ಟರನ್ನು ದೇವರೆಂದು ಭಾವಿಸಿದ್ದರು.

ಈ ದಿನ ಅಳಿಯಂದಿರು (ಅಂದರೆ ಇನ್ಸ್‌ಪೆಕ್ಟರು) ಮಾಮೂಲು ಕೇಳಲು ಬಂದಿದಾರೆ, ಎಂದು ಚರ್ಚಿಸತಕ್ಕ ವಿಷಯವನ್ನು ಸಭೆಯ ಮುಂದಿಟ್ಟರು.

ಸಭೆಗೆ ಅಧ್ಯಕ್ಷರೆನಿಸಿಕೊಂಡವರೊಬ್ಬರು, ಎಲ್ಲರ ಅಭಿಪ್ರಾಯವನ್ನೂ ಕೇಳಿದರು. ಪ್ರತಿಯೊಬ್ಬ ಸದಸ್ಯರೂನು, ಎಲ್ಲರೂ ತೀರ್ಮಾನಿಸಿದಂತೆ ನಮ್ಮ ಅಭಿಪ್ರಾಯಾನೂ ಎಂದರು. ಎಲ್ಲರೂ ಹಾಗೇ ಅಂದದ್ದರಿಂದ, ಸಭೆಯು ಕೆಲಕಾಲ ಮೌನವಾಯ್ತು. ಎಲ್ಲರೂ ಹಾಗೇ ಹೇಳಿದರೆ ತೀರ್ಮಾನಿಸುವವರಾರು ?

ಪುನಃ ಅಧ್ಯಕ್ಷರು ನಿಮ್ಮ ಅಭಿಪ್ರಾಯವೇನು ? ಎಂದರು. 'ಸಭೆಯೆಲ್ಲ ತೀರ್ಮಾನಿಸಿದಂತೆ, ನಮ್ಮ ಅಭಿಪ್ರಾಯ' ಎಂದು ಪುನಃ ಉತ್ತರ ಬಂತು. ಪುನಃ ಮೌನವಾವರಿಸಿತು.

ಕೊನೆಗೆ ಇನ್ಸ್‌ಪೆಕ್ಟರ ಪರಮ ಭಕ್ತರು ಮಾಮೂಲನ್ನು ಕೊಟ್ಟು ಬಿಡೋಣ ಎಂದರು. ಸಭೆಯಲ್ಲಿ ಕೋಲಾಹಲ.

ಹಿಂದಿನ ಸಾರ್ತಿಯೇ ಕೊಡಕೂಡದು, ಇನ್ನು ಮುಂದೆ ಎಂತ ತೀರ್ಮಾನಿಸಿತ್ತು. ಇನ್ನು ಕೊಡಬಾರದು ಎಂದು ಕೆಲವರ ಉದ್ಗಾರ ಪ್ರಾರಂಭವಾಯ್ತು.

'ಹಿಂದಿನ ಸಾರ್ತಿ ಹಾಗೆ ಹೇಳಿದ್ದರೂ ಪುನಃ ಬಂದಿದಾರೆ ಇನ್ಸ್ಪೆಕ್ಟರು' ಎಂದು ಒಂದು ಧ್ವನಿ.

'ಬಂದ ಮೇಲೆ ಹಾಗೇ ಕಳ್ಸುವುದು ಚೆನ್ನಾಗಿರುವುದಿಲ್ಲ. ಕೊಡಲೇಬೇಕು. ಇಲ್ಲದಿದ್ದರೆ ಏನಾದರೂ ತಪ್ಪು ಮಾಡಿದರೆ ಕೇಸು ಮಾಡ್ತಾರೆ. ಆದ್ರಿಂದ ಕೊಡಲೇಬೇಕು' ಎಂದೊಬ್ಬರು.

'ಇಲ್ಲ, ಆಗೋಲ್ಲ. ಬರೋದು ಇನ್ನೂರು ರೂಪಾಯಿ ಜವಳಿ, ಅದರಲ್ಲಿ ಬರೋದು ಇಪ್ಪತ್ತು ರೂಪಾಯಿ ಲಾಭ. ಇದರಲ್ಲಿ ನಮ್ಮ ಬಿಲ್ ಪುಸ್ತಕದ ಖರ್ಚೇನು, ಅಂಗಡಿ ಬಾಡ್ಗೆ, ನಮ್ಮ ಸಂಬಳ, ಎಲ್ಲ ಲೆಖ್ಖಹಾಕಿದರೆ, ನಮ್ಮ ನಮ್ಮ ಜೀವನಾನೇ ನಡೆಯೋಲ್ಲ. ಇದ್ರಲ್ಲಿ ಇವರಿಗೆ ಬೇರೆ ಕೊಡ್ತಾ ಹೋದ್ರೆ, ಅಂಗಡಿ ಮುಚ್ಚಬೇಕಾಗುತ್ತೆ. ಈ ಸಾರ್ತಿಯಿಂದ ಕೊಡ್ಲೇಬಾರ್ದು' ಎಂದು ಮತ್ತೊಬ್ಬರ ವಾದ.

'ಅಲ್ಲ, ಈಗ ಬಂದಿದಾರಲ್ಲ ಹಾಗೇ ಕಳಿಸ್ತಿರೇನು? ಈ ಸಾರ್ತಿ ಕೊಟ್ಟು, ಮುಂದಿನ ಸಾರ್ತಿಯಿಂದ ಕೊಡೋಲ್ಲ ಅಂತ ತಿಳಿಸಿಬಿಡೋದು. ಈ ಸಾರ್ತಿ ಕಡಾ ಖಂಡಿತ ಹೇಳಿಬಿಟ್ಟರೆ ಸರಿ.' ಎಂದಿನ್ನೊಬ್ಬರು.

'ಅಲ್ರಿ, ಹೋದ ಸಲಾನೂ ಹಾಗೇ ಅಂದದ್ದು. ಹೋಗ್ಲಿ ಕೊಡೋಕೆ ಮೊದಲಿನ ಹಾಗೆ ಈಗ ಬ್ಲಾಕ್ ಮಾರ್ಕೆಟ್ ಮಾಡ್ತಿಲ್ಲ, ಏನೂ ಇಲ್ಲ. ಯಾತಕ್ಕೆ ಕೊಡಬೇಕು.? ಎಲ್ಲಾ ರೇಷನ್ ಕಾರ್ಡಿನ ಮೇಲೆ, ಅಮಲ್ದಾರ್ರ ಆರ್ಡರ್‌ನಂತೆ ಮಾರೋದು. ಬಂದದ್ದನ್ನೂ ಖರ್ಚಾದ್ದನ್ನೂ ಚಕ್ ಮಾಡ್ತಾರೆ ಬರೋದಿನ್ನೇನು? ಖಂಡಿತ ಕೊಡೋಲ್ಲ'—ಎಂದೊಬ್ಬರು.

'ಈಗ ಕೊಡದಿದ್ರೆ, ಕೊಡಲಿಲ್ಲಾ ಅನ್ನೋ ಕೋಪಕ್ಕೆ ಏನಾದ್ರು ತಪ್ಪು ಹುಡುಕಿ, ಕೇಸ್ ಮಾಡ್ತಾನೆ. ಅನ್ಯಾಯವಾಗಿ ಕೋರ್ಟಿಗೆ ಹೋಗಬೇಕಲ್ಲ, ಅದಕ್ಕೇನ್ಮಾಡ್ತೀರಿ'—ಎಂದು ಮತ್ತೊಬ್ಬರು.

'ಅದ್ಹ್ಯಾಗ್ರಿ ಮಾಡ್ತಾನೆ ಲೆಖ್ಖ ಎಲ್ಲ ಸರಿಯಾಗಿ ಇಟ್ಕೊಂಡಿದ್ರೆ, ಏನ್ರಿ, ಮಾಡ್ತಾನೆ. ಎಲ್ಲಾ ಸರಿಯಾಗಿದ್ರೆ ಏನ್ಮಾಡ್ತಾನೆ?'—ಮಗುದೊಬ್ಬರು.

'ನಿಮ್ಮ ಲೆಖ್ಖ ಸರಿಯಾಗಿ ಯಾವೊತ್ತೂ ಇರೊಲ್ಲ. ಹೇಗಿದ್ರೂ ಏನಾದ್ರೂ ಒಂದು ಬರೆಯೋದ್ರಲ್ಲೋ ಯಾವುದಾದ್ರು, ಹಾಗಲ್ಲ—ಹೀಗೆ ಅಂತ ಕೇಸ್ ಮಾಡೇ ಮಾಡಿದ್ರೆ ?'—ಎಂದೊಬ್ಬರು.

'ಮಾಡಿದ್ರೆ ಮಾಡ್ಲಿ. ಎಲ್ಲಾ ಒಗ್ಗಟ್ಟಾಗಿ ಆತನನ್ನು ಸೋಲಿಸಿಬಿಟ್ರೆ ಕೆಲ್ಸ ಕಳಕೊಂಡು ಮನೆಗೋಗ್ತಾನೆ'—ಒಬ್ಬರು.

'ಯಾರೋ ಮಾಡಿಕೊಂಡದ್ದಕ್ಕೆ ಎಲ್ಲರೂ ಯಾಕ್ರೀ ಕೋರ್ಟಿಗೆ ಬರಬೇಕು. ತಪ್ಪುಗಳನ್ನು ಮಾಡಿಕೊ ಎಂದು ಯಾರು ಹೇಳಿದ್ದು, ಮಾಡಿದೋರು ಬೇಕಾದ್ರೆ ಹೋಗ್ಲಿ, ಬಾಕಿಯವರಿಗೇನು ?'

'ಮತ್ತೆ, ಒಗ್ಗಟ್ಟು ಅನ್ನೋದು ಎಲ್ಲಿಂದ ಬಂತು ? ಸಂಘ ಅನ್ನೋದು ಯಾತಕ್ಕಿರಬೇಕು. ಯಾರಾದರೂ ಒಬ್ಬರ ಮೇಲೆ ಮಾಡಿದರೆ, ಬೇರೆಯವರು ಅಂದರೆ ಸಂಘದವರು ಸೇರಿ ಅದನ್ನ ಇದು ಮಾಡಿದರೆ ಹೇಗೆ ? ಸಂಘ ಸೇರಿ ಒಬ್ಬರಿಗೆ ಸಹಾಯ ಮಾಡಬೇಕು'—ಒಬ್ಬರು.

'ಲೆಖ್ಖಗಳನ್ನ ಸರಿಯಾಗಿಡದೆ ತಪ್ಪು ಮಾಡಿದರೆ ಸಂಘವೇನು ಮಾಡುತ್ತೆ? ನ್ಯಾಯವಾದದ್ದಕ್ಕಾದರೆ ಸಂಘ ಸಹಾಯ ಮಾಡಬಹುದು ಇವರೇ ಮಾಡಿಕೊಂಡಿದ್ದಕ್ಕೆ ಸಂಘ ಜವಾಬ್ದಾರಿಯಲ್ಲ'—ಒಬ್ಬರು.

'ಹಾಗಾದರೆ ಸರಿಯಾಗಿದ್ದೂ ತಪ್ಪು ಬೇಕಾಗಿ ಹುಡುಕಿ, ಸುಳ್ಳು ಹುಟ್ಟಿಸಿ ಮಾಡಿದರೆ ? ಸಾಹುಕಾರರಾದರೇನೋ ಲಂಚ ಕೊಡ್ತಾರೆ. ಬಡವರು' —ಎಂದ ಒಬ್ಬ.

'ಯಾರೂ ಲಂಚ ಕೊಡಕೂಡದೂಂತ '—ಇನ್ನೊಬ್ಬರು.

'ಮತ್ತೆ ಬಡವರ ಮೇಲೆ ಕೇಸ್ ಮಾಡಿದರೆ ಅವರು ಕೋರ್ಟಿಗೆ ದುಡ್ಡು ತೆರಬೇಕು ?'

'ಇದಕ್ಕೇ ಹೇಳಿದ್ದು ಮಾಮೂಲು ಕೊಟ್ಟು ತೊಲಗಿಸಬೇಕು ' ಎಂದು.

'ಲಾಭವೇ ಇಲ್ಲ. | ಅದು ಹೇಗೆ ಆಗುತ್ತೆ—ಖಂಡಿತ ಆಗೋಲ್ಲ.'

'ಹಾಗಾದ್ರೆ ಅವರು ಕೇಸು ಮಾಡ್ತಾರೆ. ಅದಕ್ಕೆ ಎಲ್ಲರೂ ಒಗ್ಗಟ್ಟಾಗಿದ್ದರೆ, ಆಗುತ್ತೆ.'

'ಕೋರ್ಟಿಗೆ ಹೋಗಲು ಭಯವೇನಿಲ್ಲ. ಎಲ್ಲಾದರೂ ಒಂದೆರಡು ಸಾವಿರವೋ, ಮೂರು ಸಾವಿರವೋ ಜುಲ್ಮಾನೆ ಬಿದ್ದೀತೆಂತ ಭಯ. ದಿನವೂ

ಪತ್ರಿಕೇಲಿ ಓದ್ತಾ ಇದೇವೆ ಅಲ್ಲಿ ಜುಲ್ಮಾನೆ, ಇಲ್ಲಿ ಜುಲ್ಮಾನೇಂತ—ಆದ್ದರಿಂದ ಹೆದರಿಕೆ, ಅಷ್ಟೆ.'

'ಇವೆಲ್ಲಾ ತಂಟೇಗಿಂತ, ಇದುವರ್ಗೂ ಇದ್ದ ಹಾಗೇನೆ, ಏನಾದ್ರೂ ಕೊಟ್ಟು ಕಳ್ಸೋದು. ಸ್ವಲ್ಪ ಸ್ವಲ್ಪ ಕಡಿಮೆ ಮಾಡ್ತ, ಕೊನೇಗೆ ನಿಲ್ಲಿಸಿ ಬಿಡೋದು ಅಷ್ಟೆ.'

'ಹಾಗಾದ್ರೆ ಮಾಮೂಲು ಕೊಡೋದೂಂತ ತಾನೆ ತೀರ್ಮಾನ?'

'ಎಲ್ಲರೂ ಒಪ್ಪಿದಮೇಲೆ ನಮ್ಮದಿನ್ನೇನು' ಎಂದು ಕೆಲಕೆಲ ಧ್ವನಿ.

'ಈಗ ಯಾರ್‍ಯಾರು, ಎಷ್ಟೆಷ್ಟು ಕೊಡ್ತೀರಿ?' ಚರ್ಚೆ.

'ಇದುವರೆವಿಗೂ ಇದ್ದ ಹಾಗೇನೆ. ಎಲ್ಲರೂ ಸಮವಾಗಿ ಹಂಚಿ ಕೊಳ್ಳೋದು.'

'ನಮ್ಮದು ಕಡಿಮೆ ಕೋಟೆ, ದೊಡ್ಡ ಕೋಟೆಯವರು ಜಾಸ್ತಿ ಕೊಡಲಿ'—

ಎಂದು ಒಂದು ದನಿ.

'ನಮ್ಮದು ದೊಡ್ಡ ಕೋಟೆ ಆಗಿದ್ರೆ, ನಮ್ಮ ಕೋಟೆ ಭರ್ತೀನೇ ಆಗೋಲ್ಲವಲ್ಲ. ಅಲ್ಲದೆ ನಮಗೆ ಖರ್ಚುಗಳೂನೂ ಜಾಸ್ತಿ ಇದಾವಲ್ಲ. ಆದ್ರಿಂದ ಎಲ್ಲರೂ ಸಮನಾಗಿ ಹಂಚಿಕೋಬೇಕು.'

ಕಿರಲಾಟ, ಒರಲಾಟ, ಒಂದು ಶಬ್ದ-ನೂರಾರು ಗಂಟಲುಗಳು.

ಕೊನೆಗೆ ಎಲ್ಲರೂ ಹಂಚಿಕೊಂಡು, ಮಾಮೂಲು ಕೊಡಬೇಕೆಂದು ತೀರ್ಮಾನವಾಯ್ತು.

ಅಗತ್ಯ ವಿಷಯಗಳನ್ನು ಚರ್ಚಿಸಲಾಯ್ತು. ಚರ್ಚಿಸತಕ್ಕ ವಿಷಯಗಳು ಇಲ್ಲದ್ದರಿಂದ, ಮಹಾರಾಜರ ಶ್ರೇಯಃ ಪ್ರಾರ್ಥನೆಯೊಡನೆ ಸಭೆ ಬರಖಾಸ್ತು ಮಾಡಲಾಯ್ತೆಂದು, ಮೀಟಿಂಗ್ ವರದಿ ಬರೆದು ಸಕಲ ಸದಸ್ಯರು, ರುಜು ಮಾಡಿದರು.

ಇದೇ ಆ ಸಭೆಯ ತೀರ್ಮಾನ.

# ದೇವತಾ ಮನುಷ್ಯ

ಮೂರ್ತಿಯ ಶಾಸ್ತ್ರೋಕ್ತ ವಿವಾಹಿತ, ವಧು ಬೇರೊಬ್ಬನನ್ನು ಪ್ರೇಮಿಸಿದ್ದಳು. ಆ ಪ್ರೇಮ ಫಲವನ್ನೂ ಕೊಟ್ಟಿತ್ತು. ಆದರೆ ಮೂರ್ತಿಗಾವಿಷಯ ತಿಳಿದದ್ದು ವಿವಾಹಾ ನಂತರ. ಆಗ ಮೂರ್ತಿ ಏನು ಮಾಡ ಬೇಕಿತ್ತು ?

ಅದೇ ಪ್ರಥಮ ರಾತ್ರಿ. ಸತಿಪತಿಗಳ ಪ್ರೇಮ ಸಮಾಗಮದ ರಾತ್ರಿ.

ಮೂರ್ತಿ ಮಂಚದ ಮೇಲೆ ಕುಳಿತಿದ್ದ. ಕಮಲ ಮಂಚದ ಬಳಿಯಲ್ಲಿಯೇನಿಂತಿದ್ದಳು. ಮೂರ್ತಿಗೆ ಬಹಳ ಆಶ್ಚರ್ಯವಾಯಿತು............ ಕಾರಣ ?ಕಮಲಳ ಕಣ್ಣಲ್ಲಿ ನೀರು ! ಅಂತಹ ಶುಭ ರಾತ್ರಿಯಲ್ಲಿ ಕಣ್ಣೀರು....!

ತಾಯಿ ತಂದೆಗಳನ್ನು ತ್ಯಜಿಸಿ ಇರಬೇಕಾಗುವುದಲ್ಲಾ ? ಎಂದು ಮುಗ್ಧಳಾದ ಬಾಲೆ ಕಣ್ಣೀರು ಹಾಕಿರಬಹುದೇ ?....ಮೂರ್ತಿಗೆ ಅದೊಂದು ಬಿಡಿಸಲಾಗದ ಸಮಸ್ಯೆಯೇ ಆಗಿತ್ತು. ಅವಳ ಸುಂದರ ಮುಖಾರವಿಂದದಲ್ಲಿ ವಿಷಾದ ಎದ್ದು ತೋರುತ್ತಿತ್ತು. ಮೂರ್ತಿ, ಕಣ್ಣೀರು ಹರಿಸುತ್ತಲಿದ್ದ ಕಮಲಳ ಸೌಂದರ್ಯವನ್ನು ನೆಟ್ಟ ದೃಷ್ಟಿಯಿಂದ ನೋಡಿದನು....ಕಮಲ— ನೂತನ ವಧು, ಕಣ್ಣೀರನ್ನು ಒರೆಸಿಕೊಂಡಳು.

' ಏಕೆ ಕಮಲಾ ಕಣ್ಣೀರು ?' ಕಮಲೆ ಮಾತಿಲ್ಲದೆ ಕಲ್ಲುಕಂಭದಂತೆ ನಿಂತಿದ್ದಳು.

' ನಿನಗೇನು ಬೇಕು ಕಮಲಾ ? ಈ ಶುಭ ವೇಳೆಯಲ್ಲೇಕೆ ಕಣ್ಣೀರು ?' ಮೃದುವಾಗಿ ಕೇಳಿದ ಮೂರ್ತಿ.

‘ ಏನೂ ಇಲ್ಲ....’ ಗದ್ಗದಳಾಗಿ ಉತ್ತರಿಸಿದಳಾ ನವವಧು

‘ ಸುಳ್ಳು !....ನನಗೂ ತಿಳಿಸಲಾರೆಯೇನು ?’

‘ ಹೇಳಿದೆನಲ್ಲಾ....ಏನೂ ಇಲ್ಲ....’

‘ ಇರಲಾರದು....ನಿನ್ನ ಉತ್ತರ ‘ ಏನೂ ಇಲ್ಲ ’ ಎಂಬುದಿರಲಾರದು.... ಧರ್ಮ ಪತ್ನಿಯೆನಿಸಿದವಳು ಯಾವ ಮಾತನ್ನೂ ಪತಿಯೆದುರು ಮುಚ್ಚಿಡ ಬಾರದು. ಹೇಳು .. ನಿನ್ನ ದುಃಖವೇನಿದ್ದರೂ ಹೋಗಲಾಡಿಸಲೆತ್ನಿಸುವೆ....’

‘ ಅಂತಹುದೇನೂ ಇಲ್ಲ. ಅನೇಕ ವರ್ಷಗಳಿಂದ ಹುಟ್ಟಿ-ಬೆಳೆದ ಮನೆಯನ್ನೂ, ಮಮತೆಯ ಮಾತಾಪಿತೃಗಳನ್ನೂ, ಗೆಳತಿಯರನ್ನೂ ಒಮ್ಮೆಲೇ ಬಿಟ್ಟುಬಿಡಬೇಕಾದುದರ ನೆನಪು, ನನಗಾಗಿ-ಕಣ್ಣಿನಲ್ಲಿ ನೀರೂರಿತು, ಅಷ್ಟೆ.’

ಮೂರ್ತಿಗೂ ಅವಳ ಉತ್ತರ ನಿಜವಿರಬಹುದೆನಿಸಿತು. ಎಷ್ಟಾದರೂ ಹೆಂಗರುಳು ಒಮ್ಮೆಲೇ ಎಲ್ಲವನ್ನೂ ಬಿಡುವುದೆಂದರೆ – ವ್ಯಥೆಯೆನಿಸುವು ದಿಲ್ಲವೇ ? ಎಂದು ಅವನೇ ಪ್ರಶ್ನಿಸಿಕೊಂಡ. ‘ಹೌದು’ ಎಂಬ ಉತ್ತರವೂ ಬಂತು.

“ ಕಮಲಾ, ಅಳಬೇಡ. ದುಃಖ ಉಂಟಾದಾಗ ಸೈರಿಸಿಕೊಳ್ಳ ಬೇಕಾದುದು ಮನುಷ್ಯ ಮಾತ್ರನ ಕರ್ತವ್ಯ....ಇನ್ನು ಮಲಗು....” ಮೂರ್ತಿ ಹೇಳಿದ. ಹೇಳಿದುದೇ ಅಲ್ಲ , ಅವಳನ್ನೊಂದು ಹಾಸಿಗೆಯಲ್ಲಿ ಮಲಗಿಸಿಯೇ ತಾನು ಬೇರೊಂದು ಹಾಸಿಗೆಯ ಮೇಲೆ ಉರುಳಿದ. ಕೆಲವೇ ನಿಮಿಷಗಳಲ್ಲಿ ಅವನನ್ನು ನಿದ್ರಾಂಗನೆ ಆವರಿಸಿದ್ದಳು.

ಅಂದಿನ ರಾತ್ರಿ ಕಳೆಯಿತು.

ಎರಡು, ಮೂರನೆಯ ರಾತ್ರಿಗಳೂ ಇದೇ ರೀತಿಯಾಯಿತು. ಅಂದು ನಾಲ್ಕನೆಯ ರಾತ್ರಿ. ಆ ವೇಳೆಗಾಗಲೇ, ಕಮಲೆಯ ಕಣ್ಣೀರಿನ ಕಾರಣ ಕೇವಲ ಮಾತಾಪಿತೃಗಳ ಅಥವಾ ಗೆಳತಿಯರ ವಿಯೋಗವೇ ಇರಲಾರದು– ಎನಿಸಿತ್ತು ಮೂರ್ತಿಗೆ. ಅಂದು ಏನಾದರಾಗಲಿ ಅವಳ ಕಣ್ಣೀರ ಕಾರಣವನ್ನು ತಿಳಿದೇ ತೀರುವೆನೆಂಬ ದೃಢಮನಸ್ಸಿನಿಂದ ಅವನು ಶಯ್ಯಾಗಾರವನ್ನು ಸೇರಿದ್ದ.

ದಿನದಂತೆ ಕಮಲೆ ಬಂದಳು. ಅಧೋವದನೆಯಾಗಿ ದೂರದಲ್ಲಿ ನಿಂತಳು.

'ಕುಳಿತುಕೋ ಕಮಲಾ' ಮೂರ್ತಿ ಹೇಳಿದ, ಕಮಲ ಕುಳಿತಳು. ನಾಲ್ಕಾರು ನಿಮಿಷಗಳು ನೀರವವಾಗಿ ಕಳೆದವು ಯಾರೂ ಮಾತನಾಡಲಿಲ್ಲ. ಕೊನೆಗೆ ಮೂರ್ತಿಯೇ ನೀರವತೆಯನ್ನು ಭೇದಿಸುತ್ತಾ ನುಡಿದ,

"ಕಮಲಾ, ದಿನದಿನವೂ ನಿನ್ನ ಕಣ್ಣುಗಳಲ್ಲಿ ಅಶ್ರುಗಳೇಕೆ ? ನೀನು ಏನನ್ನೋ ಮರೆಮಾಚುತ್ತಿರುವೆ. ಬೇಡ ನನ್ನಾಣೆ ಮರೆಮಾಚಬೇಡ. ಸತಿ, ಪತಿಯೆದುರು ಏನನ್ನೂ ಮರೆಮಾಚಬಾರದು'....ಮೂರ್ತಿ ಮನದಲ್ಲೇ ಮುಗುಳುನಗೆ ನಕ್ಕ-ಕಾರಣ–ಅವನಿಗೇ ಸ್ವತಃ ಆಣೆ ಚೂರಿಗಳಲ್ಲಿ ನಂಬಿಕೆಯಿರಲಿಲ್ಲ !

"ಇಂದು ನಿಜ ಸಂಗತಿಯನ್ನು ನೀನು ತಿಳಿಸಲೇಬೇಕು"

"ಏನು ಹೇಳಲಿ ?" ಅವಳು ಅಧೋವದನೆಯಾದಳು.

"........" ಸ್ತ್ರೀ ಸಹಜವಾದ ನಾಚಿಕೆ, ಅದರಲ್ಲೂ ಅವಳೊಂದು ಗುರುತರವಾದ, ಸಾಮಾನ್ಯ ಮಾನವನಿಂದ ಕ್ಷಮಿಸಲಾಗದ ತಪ್ಪನ್ನೆಸಗಿದ್ದಾಳೆ. ಅವಳ ಬಾಯನ್ನದು ಬಲವಾಗಿ ಬಂಧಿಸಿತ್ತು.

"ಹೇಳು ಕಮಲ-ಭಯವೇಕೆ ?'

"ನಾನು....ನಿಮ....ಗೆ....ತಕ್ಕವಳಲ್ಲ....!'

"ಇಷ್ಟೇತಾನೇ ? ಕಾರಣವೇನು ಹೇಳಬಲ್ಲೆಯಾ ?"

"ಯಾವ ತಪ್ಪಿದ್ದರೂ ಕ್ಷಮಿಸುವಿರಾ ?"

'ನಿಜವಾಗಿ'

'....ನಾನು....ಗ....ರ್ಭಿ....ಣಿ....' ತಡೆತಡೆದು ತೊದಲ್ನುಡಿಯಲ್ಲಿ ಹೇಳಿದಳಾಕೆ. ತಲೆ ತಗ್ಗಿತು.

ಕ್ಷಣಕಾಲ ನಿಶ್ಶಬ್ದತೆಯಿತ್ತು....

'ಹೇಳಿ....ನೀವು ನನ್ನನ್ನು ಕ್ಷಮಿಸುವಿರಾ ?' ಕೇಳಿದಳಾಕೆ.

ಎಂತಹ ಪ್ರಶ್ನೆ ? ಏನೆಂದು ಉತ್ತರಿಸುವುದು ? ಸಂದಿಗ್ಧ ಸಮಯ.... ಕರ್ತವ್ಯ ಮೂಢನಾದ, ಮೂರ್ತಿ ಸ್ವಲ್ಪ ಹೊತ್ತು....ನಾಲ್ಕಾರು ನಿಮಿಷಗಳುರುಳಿದವು. ಅವನ ತಲೆಯಲ್ಲಿ ಅನೇಕ ಯೋಚನೆಗಳು ಹುಟ್ಟಿಹರಿದವು. ಎದುರಿನಲ್ಲಿ ನಿಂತಿದ್ದಳು. ಕಮಲೆ; ಕಣ್ಣೀರ ಕಾಲುವೆ ಹರಸುತ್ತ....

'ಕ್ಷಮಿಸುವೆನು....ಮೊದಲು ನನ್ನ ಪ್ರಶ್ನೆಗಳಿಗೆ ಉತ್ತರ ಕೊಡು....ಈ ವಿಷಯ ನಿನ್ನ ತಂದೆಯವರಿಗೆ ತಿಳಿದಿದ್ದಿತೇ ?....'

'ಇಲ್ಲ....ನಾನು ಆಗಾಗ ಅವನನ್ನು ನೋಡುತ್ತಿದ್ದೆನೆಂಬುದಷ್ಟೇ ಅವರಿಗೆ ಗೊತ್ತು....'

'ಅವನೊಡನೆ ವಿವಾಹ ಮಾಡಿಕೊಳ್ಳುವೆನೆಂದು ನೀನೇಕೆ ಅವರಿಗೆ ತಿಳಿಸಲಿಲ್ಲ ?'

'ತಾಯಿಯೊಡನೆ ಅನೇಕ ಬಾರಿ ಹೇಳಿದ್ದೆ. ತಂದೆಯ ಬಳಿ ಹೇಳಬೇಕೆಂದು ನಾಚುತ್ತಿದ್ದೆ....ತಾಯಿ ನಾನು ಮುಗ್ಧೆಯೆಂದು ನನ್ನ ಮಾತಿಗೆ ಮಹತ್ವ ನೀಡಲಿಲ್ಲ....'

'ಅವನ ಹೆಸರೇನು ?'

'....ಅದನ್ನೂ ತಿಳಿಸಬೇಕೇ ?'

'ಸರಿ....ಹಾಗಾದರೆ ಈಗಲೇ ಬೇಡ....ನೀನು ಈ ನಿನ್ನ ವಿವಾಹದ ಸುದ್ದಿಯನ್ನು ಅವನಿಗೆ ತಿಳಿಸಿದ್ದೆಯಾ ? ಅವನೇನಾದರೂ ನಿಮ್ಮ ತಂದೆಯ ಬಳಿ ಈ ವಿಷಯವಾಗಿ ಪ್ರಸ್ತಾಪಿಸಿದನೇ ?....'

'ನಾನು ಅವನಿಗೆ ಎಲ್ಲವನ್ನೂ ತಿಳಿಸಿದ್ದೆ. ಅವನು ತಂದೆಯವರಿಗೂ ಹೇಳಿದ್ದ....ಆದರೆ ತಂದೆಯವರ ದೃಷ್ಟಿ ನಿಮ್ಮ ಕಡೆಗಿತ್ತು....'

'ಅವನು ನಿನ್ನೊಡನೆ ಏನಾದರೂ ಹೇಳಿದನೆ ?'

'ಈ ದೇಶವನ್ನೇ ಬಿಟ್ಟು ಓಡಿ ಹೋಗೋಣವೆಂದು ಹೇಳಿದ್ದ....'

'ನೀನೇಕೆ ಧೈರ್ಯ ಮಾಡಲಿಲ್ಲ....ನೀನೇನು ಆಲೋಚಿಸಿದ್ದೆ ?'

'ನನಗೆ ಈ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡು ಏನೂ ತೋರಲಿಲ್ಲ.... ಮೂಢಳಾಗಿದ್ದೆ....'

'ಇನ್ನೂ ಒಂದು ಮಾತು ಈಗಲೂ ಅವನು ನಿನ್ನನ್ನು ವಿವಾಹ ಮಾಡಿಕೊಳ್ಳುವನೇ ?....'

'ಹಾಗಾದರೆ ನನ್ನನ್ನು ಕ್ಷಮಿಸುವುದಿಲ್ಲವೇನು ?'

'ನಾನು ಕೇಳಿದಷ್ಟಕ್ಕೆ ಮಾತ್ರ ಉತ್ತರ ಕೊಡು... ನೀನು ಅವನನ್ನು ಹೃತ್ಪೂರ್ವಕವಾಗಿ ಪ್ರೇಮಿಸುತ್ತಿದ್ದೆಯಾ ?' 'ಹೌದು....'

'ಅವನು ವಿದ್ಯಾವಂತನೇ ? ಹೇಗೆ ?'

'B. A. ಪದವೀಧರನಾಗಿದ್ದಾನೆ........ತನ್ನ ಕೃತ್ಯಕ್ಕಾಗಿ ಅವನು ದುಃಖಿಸುತ್ತಿರಬಹುದು....'

ಮೂರ್ತಿ ತನ್ನ ಪ್ರಶ್ನೆಗಳ ಸುರಿಮಳೆಯನ್ನು ನಿಲ್ಲಿಸಿದ. ಮನಸ್ಸನ್ನು ಸಾವಧಾನಗೊಳಿಸಿ, ಹೇಳಿದ, 'ನಿನ್ನನ್ನು ಕ್ಷಮಿಸಿದ್ದೇನೆ. ಸಮಯ ಬಿದ್ದಾಗ ನೀನು ನನ್ನ ಮಾತನ್ನು ಕೇಳಬೇಕು....'

'ನಿಜವಾಗಿಯೂ ಕ್ಷಮಿಸಿದಿರಾ ?. ......ಮಾನವರಲ್ಲ........'ದೇವತಾ ಮನುಷ್ಯ'ರು-ನೀವು....'

ದುಃಖಾಶ್ರುಗಳು ಆನಂದಾಶ್ರುಗಳಾದವು. ಮೂರ್ತಿ ಶಯನಾಗಾರ ದಿಂದ ಹೊರಟು ಹೋದ.

ಅಂದು ಐದನೆಯ ರಾತ್ರಿ.

ಮೂರ್ತಿ ಕುಳಿತಿದ್ದ. ಕಮಲ ಬಂದಳು. 'ಕುಳಿತುಕೋ' ಮೂರ್ತಿ ಹೇಳಿದ. ಮೂರ್ತಿ ಎದ್ದು ಒಂದು ಕಾಗದವನ್ನೂ ಲೇಖನಿಯನ್ನೂ ಅವಳ ಕೈಯಲ್ಲಿಟ್ಟ. ಹೇಳಿದ, 'ಬರೆ'.

ಕಮಲ ಬರೆಯಲು ಸಿದ್ಧಳಾದಳು.

'ಪ್ರಿಯತಮಾ,....' '....ಆ್ಞಂ ! ಯಾರಿಗೆ ?'

'ನೀನು ಸುಮ್ಮನೆ ಬರೆ....' ಮೂರ್ತಿ ಅಧಿಕಾರವಾಣಿಯಲ್ಲಿ ಹೇಳಿದ. ಕಮಲ ನೀರವಳಾಗಿ ಬರೆಯಲಾರಂಭಿಸಿದಳು.

'ನೀನು, ನಿನ್ನ ಸಹಜ ಶಬ್ದಗಳಲ್ಲಿ ಪತ್ರವನ್ನು ಬರೆ.

'ಅವನಿಗೆ' ಬರೆಯಬೇಕು. 'ಇಲ್ಲಿಗೆ ಬಂದಿದ್ದರೂ ನಾನು ನಿನ್ನನ್ನು ಮರೆತಿಲ್ಲ....ನೆನೆನೆನೆದು ಆಗಾಗ ದುಃಖಿತಳಾಗುತ್ತೇನೆ. ನಿನ್ನಲ್ಲಿ ಮಾತನಾಡ ಬೇಕಾದ ಅನೇಕ ವಿಚಾರಗಳಿವೆ....ಆದ್ದರಿಂದ ನೀನು ನನ್ನನ್ನು ೩ನೇ ತೇದಿ, ಪ್ರಭಾತ್ ಟಾಕೀಸಿನ ಮೊದಲ ಪ್ರದರ್ಶನದಲ್ಲಿ ಮೊದಲನೆಯ ದರ್ಜೆಗೆ ಬಂದು ಭೇಟಿಮಾಡು....'

ಕಮಲ ಮೂರ್ತಿಯನ್ನೆ ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದಳು. 'ನೋಡುವಿಯೇಕೆ ? ಬರೆ....ಅವನು ತಪ್ಪದೆ ಬರಬೇಕು....'ಹಾಗೆ ಬರೆ.... ತಿಳಿದೆಯಾ ?

'ಅವನನ್ನು ಭೇಟಿ ಮಾಡಿ ನಾನು ಮಾಡಬೇಕಾದುದಾದರೂ ಏನು ?'

'ಅದನ್ನು ನಂತರ ತಿಳಿಸುವೆ....'

'ಹಾಗಾದರೆ ಹೇಳಿರಿ–ಬರೆಯುು....'

‘ ನೀನೇ ಮನಸ್ಸಿಗೆ ತೋರಿದಂತೆ ಬರೆ....’

ಕಮಲ ಪತ್ರವನ್ನು ಬರೆದಳು. ‘ ಆಯಿತು ’.

‘ ಅವನು ತಪ್ಪದೆ ಬರುವನೇನು ?’ ‘ ಹೌದು....’

‘ ಸರಿ....ಅದರ ಮೇಲೆ ಅವನ ವಿಳಾಸವನ್ನು ಬರೆ....’

ಅದೂ ಆಯಿತು. ಮೂರ್ತಿ ಪತ್ರವನ್ನು ತೆಗೆದುಕೊಂಡು ತನ್ನ ಕೋಟಿನಲ್ಲಿಟ್ಟುಕೊಂಡ. ಶಯನಾಗಾರದಿಂದ ಹೊರಕ್ಕೆ ನಡೆದ....

* * * *

ಅಂದು ೩ನೇ ತೇದಿ, ಸಂಜೆ ೬ ಗಂಟೆಯ ಹೊತ್ತು....ಬೆಂಗಳೂರಿನ ಬೀದಿಗಳಲ್ಲಿ ಜನಗಳು ತುಂಬಿದ್ದರು....ಮೂರ್ತಿ–ಕಮಲ ಇಬ್ಬರೂ ಸಿನಿಮಾಕ್ಕೆ ಹೋದರು. ಪ್ರಥಮ ದರ್ಜೆಗೆ ಹೋಗಿ ಕುಳಿತರು. ಅನೇಕರು ಆಗಲೇ ಬಂದು ಕುಳಿತಿದ್ದರು. ‘ ಅವನಿರುವನೇ ?’ ಮೂರ್ತಿ ಕೇಳಿದ.

ಕಮಲ ಗಮನವಿಟ್ಟು ಸುತ್ತಲೂ ನೋಡಿದಳು....‘ ಹೂಂ ’ ಎಂದಳು.

‘ ಅವನನ್ನಿತ್ತ ಕರೆ... ಪರಿಚಯ ಮಾಡಿಕೊಳ್ಳೋಣ....’

ಸಂದರ ಬಂದ. ಕಮಲೆ ಹೇಳಿದಳು. ‘ ಈತ ನನ್ನ ಬಂಧು–’ ಎಂದು. ಸುಂದರನತ್ತ ತಿರುಗಿ.

‘ ಬಹಳ ಸಂತೋಷ....ಈ ಕಡೆ ಬನ್ನಿ....ಕುಳಿತುಕೊಳ್ಳಿ....’ ಮೂರ್ತಿಯೆಂದ.

ಆಟ ಪ್ರಾರಂಭವಾಗಲು ಇನ್ನೂ ಸ್ವಲ್ಪ ಸಮಯವಿದ್ದಿತು.

‘ ನೀವು ಏನುಮಾಡಿಕೊಂಡಿದ್ದೀರಿ ” ’ ಮೂರ್ತಿ ಕೇಳಿದ.

‘ ಫುಡ್ ಇನ್ಸ್‌ಪೆಕ್ಟರನಾಗಿದ್ದೇನೆ....’

‘ ವಾಸವೆಲ್ಲಿ ? ’

‘ ಸದ್ಯದಲ್ಲಿ ಹೋಟಲೊಂದರಲ್ಲಿದ್ದೇನೆ....?’

‘ ಏಕೆ ?....ನೇರವಾಗಿ ನಮ್ಮಲ್ಲಿಗೆ ಬರಬೇಕಾಗಿತ್ತು....ನಾವೇನೂ ಬೇರೆಯವರಲ್ಲವಲ್ಲ....ನಿಮ್ಮ ಮನೆಯೆಂದೇ ತಿಳಿಯಿರಿ....’

‘ ಇಲ್ಲಿರುವುದೆಲ್ಲಾ ಒಂದೆರಡು ದಿನಗಳೆಂದು—ಹೋಟಲಿನಲ್ಲಿಳಿದೆ....’

‘ ನೀವು ನಮ್ಮೊಡನೆ ಮನೆಗೆ ಬರಲೇಬೇಕು ’

‘ ಈ ಬಾರಿಗೆ ಕ್ಷಮಿಸಿ....’

ಈ ಬಾರಿ ಮೂರ್ತಿ ಕಮಲಳ ಮುಖ ನೋಡಿದ. ಅವಳೂ ದನಿಗೂಡಿಸಿದಳು....'ಅಗತ್ಯ ಬರಬೇಕು' ಎಂದು.

....ಆಟ ಪ್ರಾರಂಭವಾಯಿತು. ಮುಕ್ತಾಯವೂ ಆಯಿತು. ಒಂದು ಟಾಂಗೆಯಲ್ಲಿ ಮೂವರೂ ಸುಂದರನಿದ್ದ ಹೋಟೇಲಿಗೆ ಹೋದರು. ಅಲ್ಲಿದ್ದ ಅವನ ಸಾಮಾನುಗಳನ್ನು ತೆಗೆದುಕೊಂಡು ಮನೆಗೆ ಹಿಂತಿರುಗಿದರು. ಊಟೋಪಚಾರಗಳಾದವು.

ಅಂದಿನ ರಾತ್ರಿ ಕಳೆಯಿತು. ಸುಂದರ ಹೊರಡಬೇಕೆಂದ. ಆದರೆ ಮೂರ್ತಿ ಬಲಾತ್ಕಾರದಿಂದ ಇನ್ನೂ ಒಂದು ದಿನದ ಮಟ್ಟಿಗೆ ನಿಲ್ಲಿಸಿಕೊಂಡ.

ಅಂದು ಸಂಜೆ ಮೂರ್ತಿ ಸುಂದರನೊಡನೆ ಕಬ್ಬನ್‌ಪಾರ್ಕಿನ ಬಳಿ ಹೋದ. ಪ್ರಶಾಂತವೂ, ಪ್ರಕೃತಿ ಸೌಂದರ್ಯಯುಕ್ತವೂ ಆದ ಒಂದು ಕಡೆ ಇಬ್ಬರೂ ಕುಳಿತರು. ಸುಂದರ ಏನನ್ನೋ ಯೋಚಿಸುತ್ತಾ ಕುಳಿತಿದ್ದ.

ನಾಲ್ಕಾರು ಕ್ಷಣಗಳು ಮೌನ ಎತ್ತೆತ್ತಲೂ ನೆಲೆಸಿದ್ದಿತು.

ಮೂರ್ತಿಯೇ ಪ್ರಾರಂಭಿಸಿದ. 'ಚಿಂತಾಕ್ರಾಂತನಾಗಿರುವಂತಿದೆ, ಏಕೆ ಸುಂದರಾ?'

'ಇಲ್ಲವಲ್ಲಾ....'

'ಏನೋ ವಿಷಯವಿರಲೇಬೇಕು....ನಾನು ಕೇಳಬಾರದುದಾಗಿದ್ದಲ್ಲಿ ಹೇಳಬೇಡ....'

'ಅಂತಹ ಮಾತೇನೂ ಇಲ್ಲ....'

'ನಾನು ನಿನ್ನ ಮಿತ್ರ....ಮಿತ್ರನೊಡನೆ ಯಾವ ಮಾತನ್ನೂ ಮರೆಮಾಡಬಾರದು....'

'........' 'ಯಾರನ್ನಾದರೂ ಪ್ರೇಮಿಸಿದೆಯಾ?'

'ನಿ(ವೂ....' ಎಂದವನೇ ಸುಂದರ ಸುಮ್ಮನಾದ. ಆದರೂ ಅವನ ಮುಖದ ಮೇಲೆ ಎದ್ದು ಕಾಣುತ್ತಿದ್ದ ದುಃಖರೇಖೆಗಳು ಮರೆಯಾಗಲಿಲ್ಲ.

'....ಏನನ್ನೂ ಮರೆಮಾಚಬೇಡ....ನನಗೆಲ್ಲವೂ ಗೊತ್ತು....'

'ಇದೇನೆನ್ನುವಿರಿ— ಮೂರ್ತೀ....'

ಮೂರ್ತಿ ಹೇಳತೊಡಗಿದ, 'ಇದನ್ನೇ ಹೇಳುತ್ತಲಿದ್ದೇನೆ....ನಿನಗೆ

ಅವಳಲ್ಲಿ ಅಷ್ಟು ಪ್ರೇಮವಿದ್ದುದೇ ಆದರೆ, ಅವಳನ್ನು ನಿನ್ನವಳನ್ನಾಗಿಸಿ ಕೊಳ್ಳಲು ನೀನೇಕೆ ಯತ್ನಿಸಲಿಲ್ಲ?'

'ಇದೆಲ್ಲಾ ನಿಮಗೆ ಹೇಗೆ ತಿಳಿಯಿತು....?'

'ಕಮಲಳೇ ತಿಳಿಸಿದಳು'

'ಕಮಲ!' ಸುಂದರನ ಮುಖದಲ್ಲಿ ಆಶ್ಚರ್ಯ ಎದ್ದು ಕಾಣುತ್ತಿತ್ತು.

'ಹೌದು....' ಸುಂದರನ ಸ್ಥಿತಿ ರೆಕ್ಕೆಗಳಿಲ್ಲದ ಹಕ್ಕಿಯಂತಾಗಿತ್ತು.

'ಆದರೆ ನನ್ನ ಯತ್ನಗಳೊಂದೂ ಫಲಿಸಲಿಲ್ಲವೆಂಬುದು ನಿಮಗೂ ತಿಳಿದಿರಬಹುದಲ್ಲಾ?'

'ತಿಳಿದಿರುವೆ....ಅಷ್ಟಕ್ಕೇ ನೀನು ಅವಳ ಕೈ ಬಿಡಬಾರದಿತ್ತು....ನಿನ್ನ ಜವಾಬ್ದಾರಿ ಬಹಳ ಹೆಚ್ಚಿನದು. ಅವಳ ಮತ್ತು ಅವಳ ಭಾವೀ ಸುತನ ಭವಿಷ್ಯವನ್ನೆಂದಾದರೂ ಯೋಚಿಸಿರುವೆಯಾ?

ಸುಂದರ ಸುಮ್ಮನಿದ್ದ. 'ಉತ್ತರ ಕೊಡು ಸುಂದರ, ಓರ್ವ ಬಾಲಿಕೆಯನ್ನು ಭ್ರಷ್ಟಳನ್ನಾಗಿಸಿ, ನಂತರ ಬೇರೆಯಾಗುವುದು ಸಭ್ಯತನವೇ?'

ಸುಂದರ ಸಜಲನಯನನಾದ....

'ಈಗ ಕೇಳುವೆ ಸುಂದರಾ. ..ಈಗಲೂ ನೀನು, ನಿನ್ನ ತಪ್ಪಿನ ಪ್ರಾಯಶ್ಚಿತ್ತವನ್ನು ಅನುಭವಿಸುವೆಯಾ? ಅವಳನ್ನು ಸ್ವೀಕರಿಸಲು ಸಿದ್ಧನಿರುವೆಯಾ? ಮನಸಾರೆ ಯೋಚಿಸಿ ಉತ್ತರಕೊಡು'

'ಅವಳ ಪತಿಯ ಹೃದಯ ಇಷ್ಟು ವಿಶಾಲವಾದುದೆಂದು ನಾನರಿತಿರಲಿಲ್ಲ....' ಸುಂದರನೆಂದ.

'ನಿನ್ನಲ್ಲಿ ಅಷ್ಟು ಧೈರ್ಯವಿದೆಯೇ? ಅವಳೀಗ ಶಾಸ್ತ್ರ ರೀತ್ಯಾ ವಿವಾಹಿತಳೆಂಬುದನ್ನು ತಿಳಿದಿರುವೆತಾನೇ....' ಮೂರ್ತಿ ಹೇಳಿದ.

'ಬಂದುದನ್ನೆಲ್ಲಾ ಎದುರಿಸಲು ಸಿದ್ಧ, ಮೂರ್ತೀ....ನಾನು ಜೀವಪರ್ಯಂತ ನಿನ್ನ ಹೆಸರನ್ನು ನೆನೆಯುತ್ತಾ ಇರುತ್ತೇನೆ....'

'ಆಡಿದ ಮಾತನ್ನು ತಪ್ಪುವುದಿಲ್ಲ ತಾನೇ?'

'ಎಂದಿಗೂ ಇಲ್ಲ....'

'ಕಮಲ ಮೊದಲ ದಿನವೇ ಎಲ್ಲವನ್ನೂ ತಿಳಿಸಿಬಿಟ್ಟಿದ್ದಾಳೆ....ಅಂದಿನಿಂದಲೇ ನಾನವಳನ್ನು ಒಡಹುಟ್ಟಿದವಳೆಂದು ಕಾಣುತ್ತಿರುವೆ. ಮುಂದೆಯೂ

ಹಾಗೆಯೇ ಕಾಣುವೆ... ಸಮಾಜದ ಕಾನೂನನ್ನು ಮೊಟ್ಟಮೊದಲಿಗನಾಗಿ ಮುರಿದು, ನಿನ್ನೊಡನೆ ನಾನೇ ಅವಳ ವಿವಾಹವನ್ನು ನೆರವೇರಿಸುವೆ....

'ನೀನು ಮಾನವನಲ್ಲ. ಮೂರ್ತೀ....' ದೇವತಾ ಮನುಷ್ಯ '....ಆದರೆ ಒಂದು ಮಾತು....ಕಮಲೆ ನನ್ನನ್ನು ಕ್ಷಮಿಸಿಯಾಳೇ ? '

'ಆ ಭಾರ ನನ್ನದಾಗಲಿ....' ಮೂರ್ತಿ ಹೇಳಿದ. ಅವನ ಹೃದಯದ ಹೊರೆತಗ್ಗಿತು. ಅತ್ತ ಸುಂದರನ ಮನವೂ ಹಗುರವೆನಿಸಿತ್ತು. ಇಬ್ಬರೂ ಮನೆಯತ್ತ ಹೊರಟರು.

ಕಮಲ ತನ್ನ ಕೊಟಡಿಯಲ್ಲಿ ಒಬ್ಬಳೇ ಕುಳಿತಿದ್ದಳು. ಮೂರ್ತಿ ಕೋಣೆಯೊಳಕ್ಕೆ ಬಂದ. ಕಮಲ ಎದ್ದುನಿಂತಳು.

'ನನ್ನ ಪ್ರಾರ್ಥನೆಯೊಂದಿದೆ ಕಮಲಾ....ನಡೆಸುವೆ ತಾನೆ ?'

'ಪ್ರಾರ್ಥನೆಯೆನ್ನದಿರಿ....ಆಜ್ಞೆಯೆನ್ನಿ....'

'ಅಂತೆಯೇ ನಡೆಯುವಿಯಾ ?'

'ನಿಜಕ್ಕೂ....'

'ನೀನು ಸುಂದರನನ್ನು ವಿವಾಹವಾಗು....'

ಇಂತಹ ವಿಚಿತ್ರವಾದ ಮಾತನ್ನು ಕೇಳಿಯೇನೆಂದು ಅವಳೆಂದೂ ತಿಳಿದಿರಲಿಲ್ಲ. 'ಇದು ಹೇಗೆತಾನೇ ಆದೀತು. ?' ಅಶ್ರುನಯನಳಾದವಳು ಕೇಳಿದಳು.

'ಹೇಗಾದರಾಗಲಿ....ನೀನೊಪ್ಪಿದೆ ತಾನೆ ?....ನೀನು ಸುಂದರನನ್ನು ಕ್ಷಮಿಸಲಾರೆಯೇನು ?... '

'ನನ್ನನ್ನು ಕ್ಷಮಿಸಿದಿರೇನು ?'

ವಿನಯದಿಂದ ಕೇಳಿದಳಾಕೆ.

'ಹೌದು....ಸುಂದರನೂ ಸಮ್ಮತಿಸಿದ್ದಾನೆ....'

ಕಮಲ ಸುಮ್ಮನಿದ್ದಳು.

'ಮೌನವೇ ಅರ್ಧಸಮ್ಮತ'–ಎಂದುಕೊಂಡು ಮೂರ್ತಿ ಹೊರಟು ಹೋದ.

ಮೂರನೆಯ ದಿನ ಮೂರ್ತಿ, ಸುಂದರ–ಕಮಲೆಯರಿಗೆ ಭೇಟಿಯ ಅವಕಾಶವನ್ನೊದಗಿಸಿದ.

ನಂತರ ಸುಂದರ ತನ್ನೂರಿಗೆ ಮರಳಿದ.

ಹೋಗುವಾಗ ಮೂರ್ತಿ ಸುಂದರನಿಗೆ ಹೇಳಿದ, ನಿನ್ನ ತಂದೆಯೊಡನೆ ಎಲ್ಲವನ್ನೂ ತಿಳಿಸಿ, ಮಾತನಾಡು. ಅವರೊಪ್ಪಿಗೆಯನ್ನು ಪಡೆ. ನನ್ನ ಸಹಾಯ ಬೇಕಾಗಿದ್ದಲ್ಲಿ ನನಗೆ ವರ್ತಮಾನ ಕೊಡು. ನಾನು ಕಮಲಳ ತಂದೆಗೆ ತಿಳಿ ಹೇಳುವೆನು ನಂತರ ಶುಭ ಮುಹೂರ್ತವನ್ನು ಗೊತ್ತು ಮಾಡೋಣ....'

' ತಂದೆಯವರು ಒಪ್ಪದಿದ್ದರೂ, ನನ್ನಲ್ಲಿ ಅವಿಶ್ವಾಸ ಬೇಡ....' ಎಂದಿದ್ದ ಸುಂದರ.

ಸುಂದರ ಊರು ಸೇರಿದ. ತಂದೆ ತಾಯಿಗಳಿಗೆ ಈ ವಿಷಯವನ್ನು ತಿಳಿಸಿದ. ಅವನ ತಂದೆ ಹಿಂದಿನ ಸಂಪ್ರದಾಯದವರು. ಒಮ್ಮೆಲೇ ಗುಡುಗಿದರು; ' ಜಾತಿ ಆಚಾರ ಏನೂ ಬೇಡವೇನೋ ? ಅಲ್ಲ; ಶಾಸ್ತ್ರ ರೀತಿ ವಿವಾಹಿತಳಾದ ಕನ್ಯೆಯನ್ನು ನೀನು ವಿವಾಹಿತನಾಗುವುದೆಂದರೇನು ? ಎಂತಹ ಭಯಂಕರ ಅತ್ಯಾಚಾರ ? ನಿನಗಿರಲಿ-ನಮಗೂ ನರಕ ಕಟ್ಟಿಟ್ಟಗಂಟಾದೀತು. ಕುಲೀನರ ಹೊಟ್ಟೆಯಲ್ಲಿ ಹುಟ್ಟಿ....' ಎಂದು ಒಂದೇಸಮನಾಗಿ ಅವರು ಸಹಸ್ರ ನಾಮಗಳನ್ನು ಹೇಳುತ್ತಿದ್ದರು. ಸುಂದರನ ಹೃದಯದ ನೋವು-ಅವನ ತಾಯಿಗೆ-ಹೆಂಗರುಳಿಗೆ ಮಾತ್ರ ತಿಳಿದಿತ್ತು. ಆಕೆ, ಸಂಪ್ರದಾಯ ರೀತ್ಯಾ ಈ ವಿವಾಹವನ್ನೊಪ್ಪದಿದ್ದರೂ ಮಗನ ಮುಖ ನೋಡಿ ಒಪ್ಪಿಗೆ ಇತ್ತಿದ್ದಳು. ಅದೂ ಅರೆಮನದಿಂದ.

ಎರಡು ರಾತ್ರಿಗಳುರುಳಿದವು. ಮೂರನೆಯ ದಿನದ ವೇಳೆಗೆ ಮಗನ ಮುಖವನ್ನು ನೋಡಿ ತಂದೆಯಲ್ಲಿ ' ತಂದೆಯತನ ' ತಲೆಎತ್ತಿತು. ' ಎಷ್ಟೋ ಮಂದಿ ವಿಧವೆಯರನ್ನು ಈಗ ವಿವಾಹವಾಗುತ್ತಿಲ್ಲವೇ ? ನಮ್ಮ ಸಮಾಜದಲ್ಲಿ ಮೊದಲು ಅದೇ ಮಹಾಪರಾಧವಾಗಿರಲಿಲ್ಲವೆ ? ಒಂದೇ ಕೆಲಸವನ್ನು ಒಬ್ಬನೇ ಮಾಡಿದರೆ ಅದು ನ್ಯಾಯವಾಗಿದ್ದರೂ ಅವನು ಸಮಾಜಬಾಹಿರನಾಗುತ್ತಾನೆ. ಅದೇ ಕೆಲಸವನ್ನು ಕೆಟ್ಟದ್ದಾಗಿದ್ದರೂ ಒಮ್ಮೆಲೇ ಹಲವರು ಮಾಡಿದರೆ ಸಮಾಜ ಏನೂ ಅನ್ನದು-ಎಂಬ ಸತ್ಯ ಚಿತ್ರ ಅವರರಿವಿಗೆ ಬರುತ್ತಿತ್ತು.

ಕೊನೆಗೊಮ್ಮೆ ಮನಸ್ಸಿಲ್ಲದ ಮನಸ್ಸಿನಿಂದ 'ಅವರು ನಿನಗಿಷ್ಟ ಬಂದಂತೆ ಮಾಡು. ನಾನೇನೂ ಹೇಳಲಾರೆ ' ಎಂದರು.

ಸುಂದರ ಅದಕ್ಕಾಗಿಯೇ ಕಾದಿದ್ದ. ಅವನಿಗೆ ಬಹಳ ಸಂತೋಷವಾಯಿತು.

ತತ್‌ಕ್ಷಣ ಮೂರ್ತಿಗೆ ತಂತಿಯೊಂದನ್ನು ಕಳುಹಿಯೇ ಬಿಟ್ಟ.

ನಾಲ್ಕು ರಾತ್ರಿ ಉರುಳಿದ್ದವು. ಅಂದೇ ಮೂರ್ತಿಗೆ ತಂತಿ ಬಂದಿತ್ತು. 'ತಂದೆಯವರೊಪ್ಪಿದ್ದಾರೆ–ನೀನು ನಾಳೆಯೇ ಬಾ' ಎಂದು.

ಕಮಲೆಗೆ ವರ್ತಮಾನಕೊಡಬೇಕೆಂಬ ಆತುರದಿಂದ ಮೂರ್ತಿ, ಬೇಗ ಬೇಗ ಕಮಲಳಿದ್ದ ಕೊಟಡಿಯತ್ತ ಹೋದ. ಕಮಲ, ಕೈಯಲ್ಲಿ ಆರತಿಯ ತಟ್ಟೆಯನ್ನು ಹಿಡಿದುಕೊಂಡು ಅವನಿಗಾಗಿಯೇ ಕಾದಂತಿತ್ತು.

'ಏನು ಕಮಲಾ ಇದು?' ಮೂರ್ತಿ ಕೇಳಿದ.

ಕಮಲ ಮಾತನಾಡಲಿಲ್ಲ. ಅವನನ್ನೇ ನಿಲ್ಲಿಸಿ ಆರತಿಯೆತ್ತಿದಳು.

ಪ್ರಸಾದವನ್ನು ಕೈಯಾರ ತಿನ್ನಿಸಿದಳು.

'ನನ್ನನ್ನು ದೇವರನ್ನಾಗಿಸಿದೆಯಲ್ಲಾ ಕಮಲಾ?'

'ನಿಜಕ್ಕೂ ನೀವು ಮನುಷ್ಯರಲ್ಲ............ದೇವತಾ ಮನುಷ್ಯರು....'.

'ದೇವರಿಗೆ ಪೂಜೆಯಾಯ್ತು. ಪ್ರಸಾದವಾಯಿತು....ಇನ್ನು ಯಾವ ವರ ಬೇಕೋ ಕೇಳಿಕೋ?....'

'ನಿಮ್ಮವರ ಆಗಲೇ ದೊರೆತಿದೆ....'

ಎನ್ನುತ್ತಾ ನಾಚಿ, ಕಮಲ ಒಳಕ್ಕೋಡಿದಳು. ಮೂರ್ತಿ ಅತ್ತಲೇ ಸಂತಸದಿಂದ ನೋಡುತ್ತಾ ನಿಂತ. ಅವನ ಕಿವಿಗಳ ಬಳಿ ಭೋರ್ಗರೆಯುತ್ತಿತ್ತು, 'ದೇವತಾಮನುಷ್ಯ' ಎಂಬ ಶಬ್ದ.

# ಸಮಾಜ ದ್ರೋಹಿ

ಹಣದ ಗಂಟು ದೊಡ್ಡದಾಗುತ್ತ
ಹೋದಂತೆಲ್ಲ ಮನುಷ್ಯನ ಪಾಪದ
ಗಂಟೂ ದೊಡ್ಡದಾಗುತ್ತದೆ... .ಆದರೆ
ಅದನ್ನರಿತ ಶ್ರೀಮಂತರೆಷ್ಟು ಮಂದಿ?

ಆ ದಿನ ಪ್ರಾತಃಕಾಲ ಚಳಿಯೋ ಚಳಿ. ಅಷ್ಟಿಷ್ಟೆಂದು ಹೇಳಲಾಗದಷ್ಟು ಚಳಿ. ಮನೆಯಲ್ಲಿದ್ದ ಒಂದೇ ಒಂದು ಕಂಬಳಿಯನ್ನೇ ಸುತ್ತಿಕೊಂಡು ಮನೆಯ ಮುಂಭಾಗದ ಜಗುಲಿಯಮೇಲೆ ಕುಳಿತಿದ್ದೆ. ನನ್ನ ಬಳಿಗೆ ಅಷ್ಟು ಹೊತ್ತಿನಲ್ಲೇ ಒಬ್ಬ ಭಿಕ್ಷದವಳು ಬಂದಳು. ಅವಳ ಮೈಮೇಲಿನ ಹರಕಲು ಸೀರೆ-ಅದೆಷ್ಟುಕಡೆ ಹರಿದು ಹೋಗಿತ್ತೋ... ..! ಇಷ್ಟೇ ಸಾಲದೆಂದು ಅವಳ ಕಂಕುಳಲ್ಲೊಂದು ಬತ್ತಲೆ ಮೈಯ ಮಗು. ಅಬ್ಬಾ....ಆ ಚಳಿಯಲ್ಲಿ....! ನೆನಸಲೂ ನನಗಾಗದು.

ಭಿಕ್ಷುಕಿ ನಾಲ್ಕಾರು ಕ್ಷಣಗಳ ಕಾಲ ನನ್ನನ್ನೇ ನೆಟ್ಟದೃಷ್ಟಿಯಿಂದ ನೋಡಿದಳು....'ಏನಾದರೂ ಹೊದಿಯೋಕೆ ಕೊಡ್ತೀರಾ ಸಾಮೀ....ಪುಣ್ಯ ಬರುತ್ತೆ....ಈ ಮಗು ಮುಖಾನಾದ್ರೂ ನೋಡೀ ಸಾಮೀ....ऽ....ऽ....ऽ........ ನಡು ನಡುವೆ ತಡೆ ತಡೆದು ಕೇಳಿದಳಾಕೆ.

ನಾನು ಅವಳನ್ನೇ ನೋಡಲಾರಂಭಿಸಿದೆ. ಎಂತಹ ಚಳಿ? ಮೈ ಕೊರೆಯುವಂತಹ ಚಳಿ! ಎಷ್ಟೋಮಂದಿ ಇನ್ನೂ ಹಾಸಿಗೆಯಿಂದ ಎದ್ದಿರಲೇ ಇಲ್ಲ....ಎದ್ದಿದ್ದ ನಾನೂ ಕಂಬಳಿಯನ್ನು ಸುತ್ತಿಕೊಂಡು ಕುಳಿತಿದ್ದೆ. ಅಲ್ಲಿಗೂ ಆಹ........ಹ! ಎನ್ನುತ್ತಾ

"ಆ ಮಹಡಿಯಮನೆ ಕಾಣುತ್ತಲ್ಲಾ...........ಅಲ್ಲಿಗೆ ಹೋಗು.

ಅಲ್ಲಿ.. ಸೇಟ್ ಜೀಯವರಿದ್ದಾರೆ...........ಅಂ........ಹಾಗಂದರೇನೂ—ಎಂದ್ಯ?....ಭಾರೀ ಸಾಹುಕಾರರು ಅಂತ. ದಿನಸಿಮಳಿಗೆಗಳೇ ನಾಲ್ಕಿವೆ.... ಅವರವು. ಅವರ ಮನೆಬಳಿಹೋಗು, ತಿನ್ನಲೂ, ಹೊದಿಯಲೂ ಏನಾದರೂ ಕೊಟ್ಟಾರು....' ಎಂದೆ ನಾನು .... ಆ ಮಹಡಿಯ ಮನೆಯನ್ನು ಕೈಯಿಂದ ಸಂಕೇತಮಾಡಿ ತೋರುತ್ತಾ. ಅವಳು ಸುಮ್ಮನೆ ಹೊರಟು ಹೋದಳು........

ಆ ಸಾಹುಕಾರರ ಪರಿಚಯ ನನಗಿತ್ತು. ಸರ್ಕಾರದ ಅಧಿಕಾರಿಗಳಲ್ಲೂ ಆತನಿಗೆ ಒಳ್ಳೆಯ ಪ್ರಭಾವವಿತ್ತು. ಊರಿನಲ್ಲಂತೂ ಹೇಳಬೇಕಾಗಿಯೇ ಇಲ್ಲ.... ಅನಭಿಷಕ್ತಸಮ್ರಾಟ....! ಅವರು ಹೊಸವರುಷದ ಆರಂಭದಲ್ಲಿ ರಾವ್ ಬಹದ್ದೂರ್ ಆಗಿಬಿಡುವೆನೆಂದು ತಿಳಿದಿದ್ದರು. ಆದರೆ ಆಗಲಿಲ್ಲ....ಗ್ರಹಗತಿಗಳು ವಕ್ರವಾಗಿದ್ದವೇನೋ?!

ಮುಂಜಾಗ್ರತೆಯುಳ್ಳ ಸಾಹುಕಾರರು ಮೊದಲಿನಿಂದಲೂ ಅನೇಕ ಅಧಿಕಾರಿಗಳಿಗೆ ಸತ್ಕಾರಕೂಟಗಳನ್ನೇರ್ಪಡಿಸಿದ್ದರು. ಎಂತಲೇ ಮಹದಾಸೆಯಿತ್ತು. ಅವರ ಗೆಳೆಯರೂ ಚನ್ನಾಗಿ ಮುಖಸ್ತುತಿ ಮಾಡಿ ಉಬ್ಬಿಸಿದ್ದರು.... ಆದರೇನು? ಎಲ್ಲಾ ಬೂದಿಯಲ್ಲಿ ಹೋಮ ಮಾಡಿದಂತಾಯಿತು. ಇಷ್ಟಾದರೂ ಅವರಿಗೆ ನಿರಾಶೆಯಾಗಲಿಲ್ಲ....ಮರುವರುಷದ ಆರಂಭದಲ್ಲಿಯಾದರೂ ಬಿರುದನ್ನು ಗಳಿಸಲೇಬೇಕೆಂದು ನಿರ್ಧರಿಸಿ ಮತ್ತಷ್ಟು ಹುರುಪಿನಿಂದ ಕೆಲಸ(?) ಮಾಡುತ್ತಾ 'ಮರಳಿಯತ್ನ' ವನ್ನು ಮಾಡಲೆತ್ನಿಸಿದರವರು. ಯಾರು ಸಿಕ್ಕಿದರೂ, 'ಈ ಬಾರಿ ನನಗೆ ರಾವ್‌ಬಹದ್ದೂರ್, ಕೊಡುವೆವೆಂದು' ಸರ್ಕಾರದವರು ತಿಳಿಸಿದರು. 'ಈಗೇಕೆ? ಹೇಗಿದ್ದರೂ ಸ್ವಾತಂತ್ರ್ಯ ಬರುತ್ತದೆ... ಇಷ್ಟರಲ್ಲಿಯೇ....ಆಗ ಬಿರುದನ್ನು ಗ್ರಹಿಸೋಣವೆಂದು ಸುಮ್ಮನೆ ನಿರಾಕರಿಬಿಟ್ಟೆ....!' ಅವರೊಡನೆ ವ್ಯಾಖ್ಯಾನಮಾಡಿ ತಮ್ಮ ಅಪ್ರತಿಮ ರಾಷ್ಟ್ರೀಯತೆಯನ್ನು ತೋರ್ಪಡಿಸುತ್ತಿದ್ದರು ಸಾಹುಕಾರರು.

ಸಾಹುಕಾರರ ಮನೆಯಲ್ಲಿ ಅಕ್ಕಿ, ರಾಗಿ, ರಾಶಿ ರಾಶಿಯಾಗಿ ಬಿದ್ದಿತ್ತು. ಸಾಧಾರಣ ಜನತೆಗೆ ಒಂದು ಕಾಳು ಅಕ್ಕಿ ಸಿಗದಿದ್ದಾಗ ಅವರಮನೆಯಲ್ಲಿ ರಾಶಿ ರಾಶಿ ಅಕ್ಕಿ....! ಸಾಹುಕಾರರು ದೂರದರ್ಶಿತ್ವದಿಂದ ದಿನಸಿಯನ್ನು ದಾಸ್ತಾನು ಮಾಡುತ್ತಿದ್ದರು. ಅನೇಕ ಅಧಿಕಾರಿಗಳನ್ನು ತಮ್ಮ ಹಣದ ಸನ್ನೋಡಿ

ಶಾಸ್ತ್ರಪ್ರಯೋಗದಿಂದ ' ಸರಿ ' ಮಾಡಿಕೊಂಡಿದ್ದರು. ಎಂತಲೇ ಅವರ ಕೆಲಸ ಗಳೆಲ್ಲಾ ನಿರ್ವಿಘ್ನವಾಗಿ ನಡೆದುಹೋಗುತ್ತಿದ್ದವು........

ಸಾಹುಕಾರರು ಕದ್ದು, ಆಹಾರ ಧಾನ್ಯಗಳೆಲ್ಲವನ್ನೂ ಮಾರುತ್ತಿದ್ದರು. ನಗರದ ಕಪ್ಪುಮಾರ್ಕೆಟ್ಟಿನ ವರ್ತಕರೆಲ್ಲರಲ್ಲಿ, ಸಾಹುಕಾರರದೇ ಪ್ರಥಮ ಪೀಠ; ಅಗ್ರಸ್ಥಾನ........

ಆ ಭಿಕ್ಷುಕಿ ಸಾಹುಕಾರರ ಮನೆಯ ಬಾಗಿಲಿನ ಬಳಿ ಹೋಗಲಿಕ್ಕೂ, ಸಾಹುಕಾರರು ಒಳಗಿನಿಂದ ಹೊರಕ್ಕೆ ಹೊರಡುವುದಕ್ಕೂ ಗಂಟುಬಿದ್ದಿತು. ಅವಳು ಒತ್ತಟ್ಟಿಗೆ ನಿಂತುಕೊಂಡಳು. ಅವಳ ಮುಖದಲ್ಲಿ ಅನೇಕ ಭಾವನೆಗಳು ಕಾಣಬರುತ್ತಿದ್ದವು. ತಾನು ನಿಂತದ್ದನ್ನು ಕಂಡು ಸಾಹುಕಾರರು ಮಾತನಾಡಿಸುವರೆಂದು ಎಣಿಸಿದಳೇನೋ ?....ಸಾವಿರಾರು ರೂಪಾಯಿಗಳ ಮಾಲಿಕರು ದಯೆತೋರಿಯಾರು–ಎಂದುಕೊಂಡಿದ್ದಳೇನೋ ಆಕೆ. ಆದರೆ ಅವಳೆಣಿಕೆಯಂತೆ ಅವಳನ್ನು ಮಾತನಾಡಿಸುವುದಿರಲಿ....ಅವಳನ್ನು ನೋಡದವರಂತೆಯೇ ಹೊರಟುಬಿಟ್ಟರು–ಸಾಹುಕಾರರು.

ನಾನು ಕುಳಿತಕಡೆಯಿಂದಲೇ ಎಲ್ಲವನ್ನೂ ನೋಡುತ್ತಲಿದ್ದೆ. ಭಿಕ್ಷದವಳು ಅವರ ಹಿಂದೆ ಹಿಂದೆಯೇ ಹೊರಟಳು. ಇದ್ದಕ್ಕಿದ್ದಂತೆ ಸಾಹುಕಾರರು ಗುಡುಗಿದರು, ' ಇನ್ನೂ ಬೆಳಕರಿಯಲಿಕ್ಕಿಲ್ಲ....ಬಂದಳು....ಅಮ್ಮಣ್ಣಿ ! ನಮಗೇ ತಿನ್ನಲಿಕ್ಕೆ ಅನ್ನ ಸಿಕ್ಕದಿರುವಾಗ ನಿಮಗೆಲ್ಲಿಂದ ತರುವುದು ? ಗೊತ್ತಿಲ್ಲವೇ ಆಹಾರ ಧಾನ್ಯಗಳ ಅಭಾವ ? ಹೋಗು....ಹೋಗು....!' ಸಾಹುಕಾರರು ಸ್ವಲ್ಪದೂರ ಮುಂದೆಹೋಗಿ ಸಿದ್ಧವಾಗಿ ನಿಂತಿದ್ದ ' ಕಾರ 'ನ್ನೇರಿದರು........

ಅವಳೇನು ಮಾಡಿಯಾಳು ? ಮತ್ತೊಮ್ಮೆ ಪ್ರಾರ್ಥಿಸಲೂ ಸಮಯ ಸಿಕ್ಕಲಿಲ್ಲ. ಸುಮ್ಮನೆ ಅಲ್ಲಿಂದ ಹೊರಟು ಬಂದು ನನ್ನಿದಿರು ನಿಂತಳು. ನನ್ನ ಕರುಳು ಚುರ್ರೆಂದಿತು. ಮಾಡುವುದೇನು ? ಹೊಟ್ಟೆಗಾಗಿ ಹೋರಾಡುವವನು ನಾನು....ನಾನೂ ಒಬ್ಬ ಭಿಕಾರಿ ! ಒಳನಡೆದೆ. ತಾಯಿ ಮಕ್ಕಳಿಗೆಂದು ತಂಗುಳನ್ನಿಟ್ಟಿದ್ದರು. ಅದನ್ನೇ ತಂದು ಅವಳಿಗೆ ಕೊಟ್ಟೆ. ಇನ್ನೇನೂ ನಾನು ಮಾಡುವಂತಿರಲಿಲ್ಲ........

ಅತುಳಧನವಿದ್ದವನು......ಅವನಿಗಿನ್ನೂ ಆಸೆಯಿದೆ......ಹಿಡಿಕಾಳನ್ನೂ ಕೊಡದಾದ ! ಅವನಾಸೆ ಧನ ಹೀನನಿಗಿಂತ ಅತ್ಯಂತ ಹಿರಿದಾದುದು........!!

ಕಳೆದ ಆರುತಿಂಗಳಲ್ಲಿ ಸಾಹುಕಾರರು ಮೂರು ದಿನಸಿ ಮಳಿಗೆಗಳನ್ನಿಟ್ಟಿ ದ್ದರು. ಊರ ಕೆರೆಯ ಬಳಿಯಲ್ಲಿನ ಉತ್ಕೃಷ್ಟವಾದ ಜಮೀನುಗಳನ್ನು ಕೊಂಡಿದ್ದರು. ಎಷ್ಟೋ ಬಗೆಯ ಕಾಳಸಂತೆಯ ವ್ಯವಹಾರಗಳನ್ನು ನಡೆಯಿಸಿ ದ್ದರು. ಸಾವಿರಾರು ರೂಗಳ ಗಂಟು ಅವರ ಬಳಿ ಸೇರುತ್ತಲಿತ್ತು. ದಿನದಿನವೂ ಹಣದಗಂಟು ಶೀಘ್ರವಾಗಿ ಬೆಳೆಯುತ್ತಲಿತ್ತು. ಬಡವರನ್ನು ಹಸಿವಿನಿಂದ ಸೊರಗಿಸಿ ಉಡಲು-ತೊಡಲು-ಹೊದೆಯಲು ಬಟ್ಟೆಯಿಲ್ಲದಂತೆ ಮಾಡಿ ಸಾಹು ಕಾರರು ಬ್ಯಾಂಕಿನಲ್ಲಿ ಹಣದ ಗಂಟನ್ನು ಹೆಚ್ಚಿಸುತ್ತಿದ್ದರು. ಅವರ ಪಾಲಿಗದು 'ಹಣದಗಂಟು'....ಆದರದು ನಿಜಕ್ಕೂ ಹಣದಗಂಟಲ್ಲ....ಕೂಡಿಟ್ಟ "ಪಾಪದ ಗಂಟು"........!

"ಮಗೂ !" ಒಳಗಿನಿಂದ ಕೂಗು ಕೇಳಿಸಿತು. ತಾಯ ಕರೆಯಿಂದ ನನ್ನ ವಿಚಾರ ಧಾರೆ ನಿಂತಿತು. ಒಳ ನಡೆದೆ........

ಮತ್ತೊಂದು ದಿನ ಪುನಃ ಆ ಭಿಕ್ಷದಾಕೆ ಕಾಣಿಸಿದಳು. ಮಗು ಕಂಕು ಳಲ್ಲಿತ್ತು. ಅದೇ ತುಂಡರಿವೆ....ಒಣಕಲು ಹೊಟ್ಟೆ....ಅಸ್ಥಿಪಂಜರ !

ಮಧ್ಯಾಹ್ನದ ಹೊತ್ತು. ಸಾಹುಕಾರರು ಆಗತಾನೇ ಸ್ವಖಭೋಜನ ವನ್ನು ಮುಗಿಸಿಕೊಂಡು ಆರಾಮವಾಗಿ ಕೋಣೆಯಲ್ಲಿ ಕುಳಿತಿದ್ದರು. ನಾನೂ ಅತ್ತ ಹೊರಟೆ. ಕಾರಣ ನನ್ನ ಸಂಗೀತದ ಹುಚ್ಚು. ಸಾಹುಕಾರರು ರೇಡಿಯೋ ಕೀಲನ್ನು ತಿರುಗಿಸಿದರು. ಬಾಗಿಲ ಬಳಿ ನಿಂತಿದ್ದ ಆಳು ಭಿಕ್ಷದವಳನ್ನು ಗದರಿಸಿದ........ನಾನೂ ನಡುವೆ ದನಿಗೂಡಿಸಿದೆ, 'ಸಾಹುಕಾರರೇ, ಹೊರಗೆ ಯಾರೋ ಭಿಕ್ಷದವಳು ಬಂದಿದಾಳೆ....ಏನಾದರೂ ಒಂದಿಷ್ಟು ಹಾಕಲು ಆಳಿಗೆ ಹೇಳಬಾರದೇ ?'

'ಭಲಾ....ಏನಾದರೂ ಒಂದಿಷ್ಟು ಹಾಕಿಕಳಿಸಬೇಕೇ ? ದಿನಸಿ ಅಭಾವ ನಿಮಗೇ ತಿಳಿಯದೇ ?....ಪೇಪರ್ನೋಡ್ಲೆ ? ಈಗೀಗ ದಿನಸಿ ಬೆಲೆ ಎಷ್ಟು ಏರಿದೆ ! ಒಂದೊಂದು ಕಾಳು ಅಕ್ಕಿಗೂ ಬೆಲೆಯಿದೆ....ಈಗ ಈ ಭಿಕಾರಿಗಳಿಗೆಲ್ಲಾ ಹಾಕುವಷ್ಟು ಎಲ್ಲಿಂದ ತರಲಿ-ನಾನು ? ಆಕಾಲ ಹೋಯಿತು. ಆಗ ಪ್ರತಿ ದಿನ ಮನೆಯ ಬಳಿ ಏನಿಲ್ಲವೆಂದರೂ ನಾಲ್ಕು ಮಂದಿ ಭಿಕ್ಷದವರು ಬದುಕುತ್ತ ಲಿದ್ದರು. ನನಗಿನ್ನೂ ನೆನಪಿದೆ....ನಮ್ಮ ತಂದೆ ಒಬ್ಬ ಭಿಕ್ಷುಕನಿಗಾದರೂ ಅನ್ನವಿಕ್ಕದೆ ಉಣ್ಣುತ್ತಿರಲಿಲ್ಲ. ಆದರೆ ಕಾಲ ಕರ್ಮಕ್ಕೆ ಎಲ್ಲರೂ ತಲೆ

ತಗ್ಗಿಸಲೇಬೇಕು.' ರೇಡಿಯೋ ಗೀತದೊಡನೆ ಅವರ ಮಾತೂ ನನಗೆ ಕೇಳಿಸಿತು....

ಸಾಹುಕಾರರು ಮುಂದುವರೆಸಿದರು, 'ಈಗ ನಾನೂ ಹಾಗೇ ಮಾಡೋಣಾಂದ್ರೆ ನಾಲ್ಕು ದಿನಗಳು ಕಳೆದು ಐದನೇ ದಿನ ನಾನೇ ಇನ್ನೊಬ್ಬರ ಬಳಿ ಭಿಕ್ಷ ಬೇಡಲು ಹೋಗುವಂತಾದೀತು !........'

ನನಗೇಕೋ ಕೋಪ ಕೆರಳಿತು. 'ಸಾಹುಕಾರರೇ, ಏನು ಹೇಳುತ್ತಿದ್ದೀರಿ........?'

'ಹಣದ ಮಾತಲ್ಲ....ಬಿಡಿ ! ಹಣ ಏನು ? ಸೂಳೆ ಸಂಪಾದಿಸುತ್ತಾಳೆ.... ಧಾನ್ಯದ ಅಭಾವ ಸ್ವಾಮಿ ...! ನಾನೇ ಸ್ವತಃ ಕಾಳಸಂತೆಯಲ್ಲಿ ಕೊಂಡು ತಂದಿದ್ದೇನೆ....ಅಂತಹುದರಲ್ಲಿ........'

ನಾನು ಪುನಃ ಉಸಿರೆತ್ತಲಿಲ್ಲ.

ರೇಡಿಯೋ ಕಾರ್ಯಕ್ರಮ ಕೊನೆಗೊಂಡಿತು. ಕೋಣೆಯಲ್ಲಿ ಶಾಂತಿ ಪಸರಿಸಿತ್ತು.

ನಾನು ಬಾಯ್ತೆರೆದೆ, 'ತಮ್ಮ ತಂದೆಯವರ ನಿಯಮ ಎಷ್ಟು ಒಳ್ಳೆಯದು ? ಎಂತಲೇ ಅವರು ಇಷ್ಟು ಭಾರಿಯ ಆಸ್ತಿಯನ್ನು ನಿಮಗೆ ಬಿಟ್ಟು ಹೋದರು. ಅನ್ನದಾನಂ ಮಹಾದಾನಂ–ಅನ್ನುತ್ತಾರೆ ಆದರೆ ನೀವು 'ದೇಹಿ' ಎಂದು, ನೀಡಿರೆಂದು, ಕೈಯೊಡ್ಡಿ ಬೇಡುವವಳೊಬ್ಬಳನ್ನು ಅಲಕ್ಷ್ಯ ಮಾಡಿದರೆ... ತಂದೆಯವರ ನಿಯಮಕ್ಕೆ ತೀರಾವಿರುದ್ಧ ಹೋದಂತಲ್ಲವೇ ?' ಸಾಹುಕಾರನಿಗೆ ನನ್ನ ಮಾತು ನೀರಸವೂ ಕಹಿಯೂ ಆಗಿತ್ತು. ಅವರಿಗೆ ತುಸ ಕೋಪಬಂದಿರಲಿಕ್ಕೆಬೇಕು.

'ನಿಮಗಿನ್ನೂ ಸಂಸಾರದನುಭವವಿಲ್ಲ....ಅಂಗಡಿಗಳಿವೆ.... ಆಸ್ತಿಯಿದೆ... ಎಂದಮಾತ್ರಕ್ಕೆ ಎಲ್ಲವನ್ನೂ ಭಿಕ್ಷದವರಿಗೆ ಹಂಚಿಕೊಟ್ಟು ನಾನು ಹೆಂಡತಿ ಮಕ್ಕಳೊಂದಿಗೆ ಕಾಡಿಗೆಹೋಗಬೇಕೇ ? ಆ ಅಂಗಡಿಗಳಿಗೆ ತಗುಲಿರುವ ವೆಚ್ಚದ ವಿಷಯ ನಿಮಗೆ ಗೊತ್ತೆ ? ಎಲ್ಲರೂ ಇನ್ನೊಬ್ಬರಿಂದ ಅನುಕೂಲ–ಲಾಭಗಳನ್ನೇ ಹೊಂದಲಪೇಕ್ಷೆಪಡುತ್ತಾರೆ........?'

'ವೆಚ್ಚವಿಲ್ಲದೆ ಲಾಭ ಬರುವುದುಂಟೆ–ಸಾಹುಕಾರರೇ ? ಆದರೆ ನಿಮ್ಮ

ವಿಷಯದಲ್ಲಿ ವೆಚ್ಚಕ್ಕೂ ಆದಾಯಕ್ಕೂ ಎಲ್ಲಿಂದೆಲ್ಲಿಗೆ? ನಿಮ್ಮಲ್ಲಿ ಲಾಭ ತುಲ ನಾತೀತವಾಗಿದೆ....ಲಕ್ಷ್ಮಿ ಒಲಿದಿದ್ದಾಳೆ....ಎಂದಮೇಲೆ...............'

ಸಾಹುಕಾರರು ನಡುವೆ ಬಾಯಿಹಾಕಿದರು, 'ಇಂದಿನ ಯುವಕರದೆಲ್ಲಾ ಒಂದೇ ಹಾಡು....ರೈತರಿಗೆ, ಬಡವರಿಗೆ, ಕೂಲಿಕಾರರಿಗೆ, ಭಿಕಾರಿಗಳಿಗೆ.... ಸಹಾಯ ಮಾಡಿ ಎಂಬುದು. ಅವರೆಲ್ಲಾ ಭಾಗ್ಯಹೀನರು. ದೇವರಲ್ಲಿ ಕೇಳಿ ಕೊಂಡುಬರಲಿಲ್ಲ....ಇಲ್ಲೂ ಇಲ್ಲ. ಅಷ್ಟೆ! ನನ್ನ ಭಾಗ್ಯ ಬಲವಾಗಿದೆ. ಎಂತಲೇ ಹೀಗಿದ್ದೇನೆ....ಯಾರದೇನು?'

'ಭಾಗ್ಯದ ಮಾತು ಬೇಡ ಸಾಹುಕಾರರೇ. ಒಂದುಕಾಲ ಬಂದೇ ಬರತ್ತೆ....ನಾನು, ನೀವು, ಆ ಭಿಕ್ಷದವಳು-ಎಲ್ಲರೂ ಒಂದೇ ಆಗುವಕಾಲ. ಬೇಗ ಬರಲಿ ಆಕಾಲ ..............!

ಒಳಗಡೆ ನಾವು ವಾಗ್ಯುದ್ಧ ಮಾಡುತ್ತಿರುವಾಗಲೇ ಹೊರಗಡೆ ಸಾಹುಕಾರರ ನೌಕರ ಭಿಕಾರಿಣಿಯನ್ನು ಅಟ್ಟುತ್ತಲಿದ್ದ. ನಾನೂ ಮನೆಯತ್ತಹೊರಟೆ-ಸಾಹುಕಾರರನ್ನು ವಾದದಲ್ಲಿ ಗೆಲ್ಲಲಾರದೆ. ಅದೇನೋ ಆ ಭಿಕ್ಷುಕಿ ನನ್ನಹೆಸರನ್ನು ಕೇಳಿದ್ದಳು. ಕೆಲವುದಿನಗಳು ಕಳೆದವು. ಆಹಾರಾಭಾವ ಇನ್ನೂ ಹೆಚ್ಚಾಗಿಯೇ ಇತ್ತು. ಎಷ್ಟೋಮಂದಿ ಸೊಪ್ಪು-ಸದೆ; ಗೆಡ್ಡೆ ಗೆಣಸುಗಳನ್ನು ತಿನ್ನುತ್ತಿದ್ದರು.... ಎಷ್ಟೋ ಮಂದಿ ಮಾನ ಮಾರಿದರು. ಹಾಳು ಹೊಟ್ಟೆಗಾಗಿ........!

ಸಾಹುಕಾರರು ಹೇಳುತ್ತಿದ್ದರಂತೆ....'ಹಿಂದೊಮ್ಮೆ ಇದಕ್ಕಿಂತ ಭೀಕರವಾದ ಬರಗಾಲ ಬಂದಿತ್ತು. ಆಗ ಚಟಾಕು ಅಕ್ಕಿಗೆ ಒಂದೊಂದು ಬಂಗಾರದ ಗಟ್ಟಿ ಕೊಡುತ್ತಿದ್ದರು-ಎಂದು ನಮ್ಮ ಅಜ್ಜ ಹೇಳುತ್ತಿದ್ದರು....ಆಗ ಅವರು ಬುದ್ಧಿಯಿಲ್ಲದೆ ಮನೆಯ ಧಾನ್ಯವನ್ನು ಜನಕ್ಕೆ ಹಂಚಿಬಿಟ್ಟರಂತೆ! ಈಗ ದೇವರ ದಯೆಯಿಂದ ಅಂತಹ ಬರಗಾಲ ಬಂದರೆ....? ನಾನು ಬಂಗಾರದ ಮನೆಯನ್ನೇ ಕಟ್ಟಿಸಿಯೇನು!' ಎಂತಹ ಹೃದಯ! ಎಷ್ಟು ಆಸೆ!!

ಆಹಾರಾಭಾವ ಹೆಚ್ಚಿದಷ್ಟೂ ಸಾಹುಕಾರರ ವ್ಯಾಪಾರದ ಭರಾಟೆ ಹೆಚ್ಚುತ್ತಲಿತ್ತು, ಆದಾಯ ಹೆಚ್ಚಿತು. ಬ್ಯಾಂಕಿನಲ್ಲಿ ಪಾಪದ ಗಂಟು ಬೆಳೆಯಿತು: ಅಳತೆಮೀರಿ, ಆದರೂ ಅವರಿಗಿನ್ನೂ ತೃಪ್ತಿಯಿಲ್ಲ. ಅಂತಹ ದುರ್ಭಿಕ್ಷ ಬಂದರೆ! ಎಂದುಕೊಳ್ಳುತ್ತಲೇ ಇದ್ದರವರು.

ಒಂದು ದಿನ ನಾನು ಬೀದಿಯ ಕಡೆ ಹೊರಟಿದ್ದೆ, ಜನ ಗುಂಪು ಸೇರಿತ್ತು. ವಿಷಯವೇನೆಂದು ತಿಳಿಯುವ ಕುತೂಹಲವಾಯಿತು. ನಾನೂ ಗುಂಪಿನ ನಡುವೆ ನುಗ್ಗಿದೆ. ಅಲ್ಲೊಂದು ಮೃತದೇಹ ಬಿದ್ದಿತ್ತು.... ಅದೇ ಆ ಭಿಕಾರಿಣಿಯ ದೇಹ. ಮಗುವೂ ಸತ್ತುಬಿದ್ದಿತ್ತು. ಆ ಸ್ಥಿತಿಯಲ್ಲೂ ಆ ಮಗು ಅವಳ ಚರ್ಮಶೇಷ ಸ್ತನಗಳನ್ನು ಭದ್ರವಾಗಿ ಹಿಡಿದು ಅವಳನ್ನಪ್ಪಿಕೊಂಡಿತ್ತು........ ಎಂತಹ ದೃಶ್ಯ... ? ಕೆದರಿದ ಕೇಶ....ಚಲ್ಲಾಡಿಹೋದ ಆರಿವೆಯಿಂದಾಗಿ ಅರೆ ಬತ್ತಲೆಯಾಗಿದ್ದ ಆ-ದೇಹ....ವಿಶ್ವದ ಬಂಡವಳಗಾರರ ತಾಂಡವನೃತ್ಯವನ್ನು ತಿರಸ್ಕರಿಸುವಂತಿತ್ತು....ಅವಳ ದೇಹದಾ ಮುಖಭಾವ.

‘ ಯಾವಾಗಸತ್ತಳು? ’ ಸಮೀಪದಲ್ಲಿದ್ದ ಒಬ್ಬಾತನನ್ನು ಕೇಳಿದೆ.

‘ ಸ್ವಲ್ಪ ಹೊತ್ತಾಯಿತು. ನದಿಯಲ್ಲಿ ಬಿದ್ದಿದ್ದಳು....ಯಾರೋ ಎತ್ತಿ ಹಾಕಿದರು....’ ಎಂದುತ್ತರ ಬಂತು. ನಿಡಿದಾದ ಉಸಿರೊಂದನ್ನು ಬಿಟ್ಟು ಮನೆಯತ್ತ ಹೊರಟೆ. ಸಾಹುಕಾರರ ಮನೆಯ ಮುಂದೆಯೇ ನಾನು ಹೋಗ ಬೇಕಾಗಿತ್ತು. ಸಾಹುಕಾರರು ಹೊರಗಡೆ ನಿಂತಿದ್ದರು. ನಿಮ್ಮನ್ನು ಕಾಡುತ್ತಿದ್ದ ಭಿಕಾರಿಣಿ ಸತ್ತಳು....ಎಂದೆ; ‘ ಕಾಟ ಕಳೆಯಿತು ’ ಎಂದರು ಸಾಹುಕಾರರು. ನಾನು ಉಸಿರೆತ್ತಲಿಲ್ಲ. ನೇರವಾಗಿ ಮನೆ ಸೇರಿದೆ

ಅವಳ ಒಂದು ಕೈಯಲ್ಲಿ ಪತ್ರವೊಂದಿತ್ತು. ವಿಳಾಸ ನನ್ನದು ! ನನಗೇ ಆಶ್ಚರ್ಯವಾಯಿತು. ಆ ಪತ್ರವನ್ನು ನಡುಗುವ ಕೈಗಳಿಂದ ತೆಗೆದುಕೊಂಡೆ. ಮೆಲ್ಲನೆ ಪತ್ರವನ್ನು ತೆರೆದು ಓದಲಾರಂಭಿಸಿದೆ.

ಮಾನ್ಯರೆ,

ನನ್ನ ಜೀವನದ ಅಲ್ಪ ಪರಿಚಯವನ್ನು ತಮ್ಮಂತಹವರಿಗೆ ಅರುಹಲೇ ಬೇಕೆನ್ನಿಸಿದುದರ ಫಲವೇ ಈ ಪತ್ರ. ನಾನೋರ್ವ ಧನಿಕನ ಮಗಳೇ ಆಗಿದ್ದೆ. ನನಗೆ ವಿವಾಹವೂ ಆಗಿತ್ತು. ಆದರೆ ದುರದೃಷ್ಟದಿಂದ ನಾನು ಬಹುಬೇಗ ವಿಧವೆಯಾದೆ. ಯೌವನ ಮದ ಇನ್ನೂ ಇಳಿದಿರಲಿಲ್ಲ. ನಾನು ಅದೊಂದು ದುರ್ದಿನ-ಸಾಹುಕಾರರ-ಹೌದು ನೀವು ಭಿಕ್ಷನೀಡುವರೆಂದು ಕಳುಹಿದಿರಲ್ಲಾ-ಅವರಬಳಿ-ಆ ಸಾಹುಕಾರರ ದೃಷ್ಟಿ, ಗೃಧ್ರದೃಷ್ಟಿ ನನ್ನಮೇಲೆ ಬಿದ್ದಿತು. ಬೇಡ ಬೇಡ ಎಂದು ನನ್ನ ಅಂತರಾತ್ಮ ಹೇಳುತ್ತಿದ್ದರೂ ಹೇಗೋ ಏನೋ ನಾನವನ ಕಾಮುಕ್ರಪೆಗೆ ಬಲಿಯಾಗಿಯೇಹೋದೆ. ಅವನ ಮನಮೋಹಕ

ನುಡಿಗಳಿಗೆ ಬೆರಗಾದೆ. ಆಗಾಗ ' ನೀನು ಪಾಪಿಯಾಗುತ್ತಿರುವೆ ' ಎಂಬ ಕೂಗು ಹೃದಯಾಂತರಾಳದಿಂದ ಕೇಳಬರುತ್ತಿದ್ದರೂ–ಅವನ ಸವಿಮಾತುಗಳ–ಜಾಲಕ್ಕೆ ನಾನು ಸಿಲುಕಿಬಿದ್ದೆ. ನಮ್ಮ ಸಮಾಜದಲ್ಲಿನ ಅನೇಕ ವಿಧವೆಯರ ಬಾಳು ಈರೀತಿ ತೆರೆಯ ಮರೆಯಲ್ಲೇ ಸಾಗಿದೆಯೆಂಬುದನ್ನು ನೀವೂ ತಿಳಿದೇ ಇರುವಿರಿ. ನನ್ನ ರೂಪು ದಿನದಿನಕ್ಕೂ ಇಂಗಹತ್ತಿತು. ಆ ಪಾಪಿ, ರೂಪ ಯೌವನ ಗಳಿಂದ ತುಂಬಿದ ಮತ್ತೊಬ್ಬಳನ್ನು ಹುಡುಕಿಕೊಂಡು ಹೊರಟ. ಹೂವಿನ ಮಧುರ ರಸ ಹೀರಿದ ನಂತರ ಅದರಗೊಡವೆ ದುಂಬಿಗೇಕೆ! ನಿಜವೇ. ಹೊರಡು ವಾಗ ನನ್ನ ಸರ್ವಸ್ವವನ್ನೂ ವಶಪಡಿಸಿಕೊಂಡೇ–ನನ್ನನ್ನು ದೂರಕ್ಕಟ್ಟಿಯೇ ಹೊರಟ. ನಾನು ನಿಸ್ಸಹಾಯಕಳಾಗಿದ್ದೆ. ಆಗ ನಾನು ತುಂಬುಗರ್ಭಿಣಿ. ಹೇಗೋ ಏನೋ ಮಗು ಜನಿಸಿತು. ಅದಾದ ಕೆಲವು ತಿಂಗಳಲ್ಲೇ ನಿಮ್ಮೂರಿಗೆ ಬಂದೆ. ಅಲ್ಲೂ ಅದೇ ಸಾಹುಕಾರ ಸಿಕ್ಕಿದ. ನತದೃಷ್ಟಳು ನಾನು. ನನ್ನನ್ನು ಕಂಡಾಗ, ನಾನಾರೆಂಬುದರ ಅರಿವೇ ಇಲ್ಲದಂತೆ ನಟಿಸಿದ. ಸಮಾಜದಿದುರು ಅವನು ಸನ್ಮಾನ್ಯವ್ಯಕ್ತಿ; ನಾನು ಬೀದಿಯ ಭಿಕಾರಿ. ನನ್ನಾಸ್ತಿಯೆಲ್ಲವನ್ನೂ ಹೀರಿದ್ದ ಅವನು–ನನಗೆ ಹಿಡಿಯನ್ನ ಕೊಡದಾದ. ಇನ್ನೂ ಎಷ್ಟುವಮಂದಿ ಯನ್ನು ಕೆಡಿಸಿದ್ದಾನೆಯೋ–ಆ ಭಗವಂತನೇ ಬಲ್ಲ. ಇಂತಹವರ ಗುಂಪೆಲ್ಲ ನಶಿಸಿ ಎಂದು ಒಳ್ಳೆಯಸಮಾಜ ರೂಪಿತವಾಗುವುದೋ ಕಾಣೆ.

ಹೆಚ್ಚು ಮಾತುಗಳನ್ನು ಈ ಕಳಂಕಿತ ಲೇಖನಿಯಿಂದ ಬರೆಯಲಾರೆ.

ಇಂದೇ ನಾನು–ನನ್ನ ಮಗು–ಇಂತಹ ಯಾವ ವಿಧವಾದ ಸಂಕಟಗಳೂ ಇಲ್ಲದ ಒಂದು ಲೋಕವನ್ನು ಹುಡುಕಿಕೊಂಡು ಹೋಗುವ ನಿರ್ಧಾರ ಮಾಡಿ ದ್ದೇನೆ–

ನೀವು ಪೇಪರಿನವರೆಂದು ನನಗೆ ತಿಳಿದಿತ್ತು. ಎಂತಲೇ ನಿಮ್ಮಿಂದಾದರೂ ಇಂತಹ ಹೇಸಿಕೃತ್ಯಗಳು ಬಯಲಾದಾವೆಂಬ ಒಂದು ಆಸೆಯಿಂದ, ನನ್ನಂತಹ ತರುಣಿಯರು ಮುಂದಾದರೂ ಎಚ್ಚರದಿಂದಿರಲಿ ಎಂಬ–ಆಶೆಯಿಂದ ಈ ಪತ್ರವನ್ನು ತಮಗೆ ಬರೆವ ಸಾಹಸಮಾಡಿರುವೆ—

ಇತಿ

ನೊಂದವಳು.

# ಗೋಮುಖವ್ಯಾಘ್ರ

ಇಂತಹ ಗೋಮುಖವ್ಯಾಘ್ರ
ರೂಪಿಗಳೆಲ್ಲರ ಮೂಲೋತ್ಪಾಟ
ನೆಯಾದಂದೇ ದೇಶ ಸುಖದ ಸವಿ
ಕಂಡೀತು. ಉಂಡೀತು.........

ಇನ್ಸ್‌ಪೆಕ್ಟರ್ ವೆಂಕೋಬರಾಯರು ತಮ್ಮ ಕಛೇರಿಯಲ್ಲಿ ಕುಳಿತು ತಮ್ಮ ವಿಳಾಸಕ್ಕೆ ಬಂದಿದ್ದ ಅಂಚೆಯನ್ನು ನೋಡುತ್ತಿದ್ದರು. ಕಛೇರಿಯ ಲ್ಲಿದ್ದರೂ ಅವರು ಕೈಯಲ್ಲಿ ಸಿಗಾರನ್ನು ಮಾತ್ರ ಬಿಟ್ಟಿರಲಿಲ್ಲ. ಆ ಕಛೇರಿಗೆಲ್ಲಾ ಅವರೇ ಮುಖ್ಯಾಧಿಕಾರಿಗಳು ಅಂದಮೇಲೆ ಅವರನ್ನು ಕೇಳುವವರಾದರೂ ಯಾರು? ವಿದ್ಯಾ ಇಲಾಖೆಯಂಥ ಪವಿತ್ರ ಇಲಾಖೆಗೆ ಸೇರಿದವರು-ಇನ್ಸ್ ಪೆಕ್ಟರರು. ಆ ತಾಲ್ಲೂಕಿನ ಎಲ್ಲ ಬಾಲಕ-ಬಾಲಕಿಯರ ಪ್ರೈಮರಿಶಾಲೆ ಗಳೂ ಅವರ ವಶದಲ್ಲಿದ್ದವು.

ದೇವಲಾಪುರದ ಬಾಲಕಿಯರ ಶಾಲೆಯ ಮುಖ್ಯೋಪಾಧ್ಯಾಯಿನಿಯಿಂದ ಒಂದು ರಿಪೋರ್ಟು ಬಂದಿದ್ದಿತು.

"............ಆಗತಾನೇ ಹೊಸದಾಗಿ ಅಂದರೆ ಒಂದು ತಿಂಗಳ ಕೆಳಗೆ ಕೆಲ ಸಕ್ಕೆ ಬಂದು ಹಾಜರಾಗಿರುವ-ಶಿಕ್ಷಕಿ, ಸುಶೀಲಾ ಅವಿಧೇಯಳಾಗಿದ್ದಾಳೆ. ಸಹಕರಿಸಿ ಕೆಲಸಮಾಡುವುದಿಲ್ಲ ಆವಳಿಗೆ ತಕ್ಕ ಶಿಕ್ಷೆಯಾಗಬೇಕು. ಇ. ಇ"— ಇದೇ ಆ ರಿಪೋರ್ಟಿನ ಸಾರಾಂಶವಾಗಿತ್ತು. ವೆಂಕೋಬರಾಯರು ಆ ರಿಪೋ ರ್ಟನ್ನು ಒಮ್ಮೆ ಓದಿಮುಗಿಸಿದರು. ಮುಂದೆ, ಉಳಿದ ಪತ್ರವ್ಯವಹಾರವನ್ನು ನೋಡುವುದು ಅವರಿಂದಾಗಲಿಲ್ಲ. ಒಂದು ವಾರದ ಮುನ್ನ ದೇವಲಾಪುರಕ್ಕೆ ಭೇಟಿಯಿತ್ತಿದ್ದಾಗ ನಡೆದ ಘಟನೆಗಳೆಲ್ಲ ಒಂದರ ಹಿಂದೊಂದರಂತೆ ಅವರ ಕಣ್ಮುಂದೆ ಬಂದವು.

............ದೇವಲಾಪುರದ ಬಾಲಕಿಯರ ಶಾಲೆಯ ಮುಖ್ಯೋಪಾಧ್ಯಾ ಯಿನಿ-ಹೌದು. ಅವರ ಉಪಪತ್ನಿ....ನಿಜ ಆಕೆಗೂ ಪತಿಯಿದ್ದ. ಇದ್ದರೇ ನಂತೆ? ಅಂದು ಎಷ್ಟು ವಿಧವಾಗಿ ಹೇಳಿದ್ದಳು!

'ಈ ಹೊಸ ಶಿಕ್ಷಕಿ ಸುಶೀಲೆಯ ಕಾಟ ತಡೆಯಲಾಗದು. ಮಾತು ಮಾತಿಗೂ ಹರಿಹಾಯುತ್ತಾಳೆ. ಹಂಗಿಸುತ್ತಾಳೆ. ನಮ್ಮ ಬಗ್ಗೆ ಬಹಿರಂಗವಾಗಿ ಹೇಳಿಕೊಳ್ಳುತ್ತಾಳಂತೆ. ನಾನು ಸರಿಯುವರಲ್ಲಿ ತಲೆಯೆತ್ತಿ ತಿರುಗುವಂತಿಲ್ಲ.... ನನ್ನ ಆಗುಹೋಗುಗಳಬಗ್ಗೆ ನಿಮಗೆ ಚಿಂತೆಯಿಲ್ಲವೆ? ನನಗೆಂದರೆ ನಿಮ ಗೆಂದಂತಲ್ಲವೇ?' ಎಂದೆಷ್ಟು ಬಗೆಯಾಗಿ ಹೇಳಿದ್ದಳು?....ಅಂದಿನರಾತ್ರಿ, ಈ ರ್ವರೂ ಸೇರಿದ್ದಾಗಲೂ ಇದೇ ಹಾಡು. ಮತ್ತೆ ಬೇರ್ಪಡುವಾಗ ಭುಜದಮೇಲೆ ತಲೆಯಿಟ್ಟು, ಗಲ್ಲದಮೇಲೆ ಕೈಯಾಡಿಸುತ್ತಾ 'ಸುಶೀಲೆಗಷ್ಟು ಬಿಸಿತಾಗಿಸಿರಿ' ಎಂದು ಹೇಳುವಾಗ ಅವಳೆಷ್ಟು ಸುಂದರಳಾಗಿಕಂಡುಬಂದಳು? ದೈನ್ಯತೆಯೇ ಮೂರ್ತೀಭವಿಸಿಬಂದಂತಿದ್ದಳು. ?!

...........ಹಾಗೆಂದೇ 'ಇನ್ನೊಂದು ರಿಪೋರ್ಟು ಮಾಡು, ನೋಡೋಣ' ಎಂದಿದ್ದರು ವೆಂಕೋಬರಾಯರು, ಆಶಾಪೂರ್ಣದನಿಯಲ್ಲಿ.

ಅಂತೆಯೇ ಇಂದು ರಿಪೋರ್ಟು ಬಂದಿದೆ.

ರಾಯರು ಅದನ್ನೋದಿ ಮುಗಿಸಿದುದೂ ಆಯಿತು. ಏನಾದರೂ ಮಾಡಬೇಕಿತ್ತು. ಏನುಮಾಡುವುದು? ಅವರೇನೋ ಅವಳಿಗೆ ಮಾತು ಕೊಟ್ಟಿದ್ದರು. ರಿಪೋರ್ಟುಮಾಡು-ಎಂದು ಹೇಳಿಯೂ ಇದ್ದರು. ಆದರೆ ಅವರ ಉದ್ದೇಶವೇ ಬೇರೆ.

ಅವರು ಮೊದಲನೋಟದಿಂದಲೇ ಸುಶೀಲೆಯಲ್ಲಿ ಮೋಹಗೊಂಡಿದ್ದರು. ಇತ್ತೀಚೆಗೆ ಮುಖ್ಯೋಪಾಧ್ಯಾಯಿನಿಯಲ್ಲಿ ಅವರು ಮೊದಲು ಕಂಡ ರೂಪವನ್ನು ಕಾಣದಾಗಿದ್ದರು. ಮಧುವಿಂಗಿದಮೇಲೆ ದುಂಬಿ ಬೇರೊಂದು ಮಧುಭರಿತ ಪುಷ್ಪವನ್ನು ಹುಡುಕಹೋಗುವುದಿಲ್ಲವೇ?

ರಾಯರೀವೇಳೆಗೆ ಎಷ್ಟುಮಂದಿಯ ರುಚಿನೋಡಿದ್ದರೋ?

...........ಅವರು ಯೋಚಿಸುತ್ತಿದ್ದುದೂ ಅದೇ, ಅವಳನ್ನ ಸಮಾಧಾನ ಪಡಿಸುವುದುಹೇಗೆ? ಎಂಬುದನ್ನಲ್ಲ. ಸುಶೀಲೆಯನ್ನ ಬಲೆಗೆ ಕೆಡಹಿಕೊಳ್ಳು ವುದು ಹೇಗೆ? ಎಂದು.

ರಿಪೋರ್ಟು ಬರುವಂತೆಮಾಡಿ-ಅಲ್ಲ-ಅದಾಗಿ ಅದೇ ಬಂದು ಅವರ ಪರೀಕ್ಷಣೆಯನ್ನು ಮೀರಿ, ಜಾಲ ತಾನೇತಾನಾಗಿ ಹರಡಿಕೊಂಡಿತು. ಇದಲ್ಲವೇ ಕರ್ಮ ಧರ್ಮ ಸಂಯೋಗವೆಂಬುದು-ಎಂದುಕೊಂಡರು ರಾಯರು.

ಅವರ ಮನಸ್ಸಿನಲ್ಲಿ ತಾವು ಕೆಲವಾರು ವರ್ಷಗಳಿಂದ 'ರುಚಿ' ನೋಡಿದ್ದ ರಮಣಿಯರೆಲ್ಲರ ನೆನಪೂ ಜಾಗೃತವಾಯಿತು.

"ಇನ್ ಕ್ರಿಮೆಂಟ್ ಸ್ವಲ್ಪ ಹೆಚ್ಚಿಸುವೆನೆಂಬ ಒಣ ಆಶೆಯನ್ನು ಹೆಚ್ಚಿಯೇ ಆ ರುಕ್ಕಮ್ಮನನ್ನು 'ಬಾ' ಎಂದಾಗ ಬರುವಂತೆ ಮಾಡಿಕೊಂಡಿರಲಿಲ್ಲವೇ? ....ಕೇವಲ ತಾತ್ಕಾಲಿಕ ಶಿಕ್ಷಕಿಯನ್ನಾಗಿ ಮಾಡಿದುದರಿಂದ ಆ ಚಂಚಲೆ ಅವರ 'ಉಪ್ಪಿನಕಾಯಿ' ಯಾಗಿರಲಿಲ್ಲವೇ?

"........ ...ಇನ್ಸ್‌ಪೆಕ್ಷನ್ ಸಮಯದಲ್ಲಿ ಸಿಕ್ಕಿದ ಕೆಲವು ತಪ್ಪುಗಳಿಗಾಗಿ ಹಾಗೆ ಮಾಡುವೆ-ಹೀಗೆ ಮಾಡುವೆ ಎಂದು ಹಾರಾಡಿ, ಬೆದರಿಕೆಹಾಕಿ, ಮತ್ತವಳು. ಅವಳೇ, ದೇವಲಾಪುರದ ಮುಖ್ಯೋಪಾಧ್ಯಾಯಿನಿ ರಂಗನಾಯಕಿ-ದಯೆತೋರಬೇಕೆಂದು ಬೇಡಬಂದಾಗ- ಆ ಸುವರ್ಣ ಸಂಧಿಯಲ್ಲಿ ಅವಳು ಕೂಳಿನಾಶೆಯಿಂದ ಒಡಲೊಡ್ಡುವ ಪ್ರಸಂಗ ತಂದು ಅವಳನ್ನು 'ಖಾಯಂ' ಗಿರಾಕಿಯನ್ನಾಗಿ ಮಾಡಿಕೊಂಡಿರಲಿಲ್ಲವೇ?

"ಅಷ್ಟೆಲ್ಲ ಏಕೆ? ಅವಳು. ಆ ರಮೆ, ಎಷ್ಟು ಅಹಂಕಾರದಿಂದಿದ್ದಳು? ಅಂತಹವಳನ್ನು ಮಲೆನಾಡಿಗೆ ವರ್ಗಾಯಿಸುವೆನೆಂಬ ಬೆದರಿಕೆ ಹಾಕಿ ಬಲೆಗೆ ಹಾಕಿಕೊಂಡಿರಲಿಲ್ಲವೇ?

"............ಶಿಕ್ಷಕಿಯ ದರ್ಜೆಯಿಂದ ಮುಖ್ಯ ಶಿಕ್ಷಕಿಯ ದರ್ಜೆಗೇರಿಸುವೆನೆಂಬ ಬಯಲಾಸೆ ತೋರಿಯೇ ವಿಶಾಲಿಯನ್ನು ಸೆಳೆದಿರಲಿಲ್ಲವೇ? ಇಂತಹ ಪ್ರಸಂಗಗಳೇನು ಒಂದೇ ಎರಡೇ? ಇತ್ತೀಚೆಗೆ ಇನ್ಸ್‌ಪೆಕ್ಷನ್ ನೆವದಿಂದ ಯಾವ ಊರಿಗೆ ಹೋದರೂ ಏಕಾಂಗಿಯಾಗಿ ಮಲಗಿದುದೆಂದು? ಒಂದೊಂದು ಕಡೆ ಒಬ್ಬೊಬ್ಬರ ರುಚಿ ಸಿಕ್ಕೇ ಸಿಕ್ಕುತ್ತಿತ್ತಲ್ಲ! ನಾಲ್ಕಾರು ಹಳ್ಳಿಗಳವರಂತೂ ಇದನ್ನು 'ಮಾಮೂಲಿ'ನಂತೆ ಸಾರೋದ್ಧಾರವಾಗಿ ನಾಲ್ಕು ವರ್ಷಗಳಿಂದ ನಡೆಸಿಕೊಂಡು ಬರುತ್ತಿರಲಿಲ್ಲವೇ? ಯಾವ ಶಾಲಾ ಜವಾನತಾನೆ ಅವರ ಕಾಲೊತ್ತದೆ ಉಳಿದಿದ್ದ? ಜವಾನಿಯರು? ಶಿಕ್ಷಕಿಯರೇ ಬಲೆಯಲ್ಲಿ ಬೀಳುತ್ತಿದ್ದಾಗ, ಹೇಳಿ ಕೇಳಿ ಕೀಳುದರ್ಜೆಯ ಜನ ಅದು-ಅವರದೇನು ಹೇಳಬೇಕು?

............ಇಷ್ಟೆಲ್ಲ ಆಗಿದ್ದರೂ, ವಯಸ್ಸು ನಾಲ್ವತ್ತು ದಾಟಿ ಐದುವರ್ಷಗಳಃರುಳಿದ್ದರೂ, ಶ್ವೇತಕೇಶಗಳಿಣಿಕಿನೋಡುತ್ತಿದ್ದರೂ-ರಾಯರ ಕಾಮದಾಹ, ಚಿತ್ತಚಾಪಲ್ಯ ಇಂಗಿರಲಿಲ್ಲ. ಕ್ಲಬ್ಬಿನಲ್ಲಿ ಗೆಳೆಯರೊಂದಿಗೆ ಅವರೆಷ್ಟೋ ಬಾರಿ

ಹೇಳಿದುದುಂಟು, 'ಎರಡು ಮದುವೆಮಾಡಿಕೊಂಡರೇನೇ ಜನ ಕೂಗಾಡು ತ್ತಾರಲ್ಲಾ ; ಆ ಮಹರಾಯ ಕೃಷ್ಣ ಹದಿನಾರುಸಾವಿರ ಗೋಪಿಯರನ್ನು ಕಟ್ಟಿ ಕೊಂಡು ಹೆಣಗಾಡಿದ್ದನ್ನು ಅವರು ಮರೆತುಬಿಡುತ್ತಾರೇನೋ ? ಅವನಂತೆ ನಾವೂ ಚಲ್ಲಾಟವಾಡಬೇಕು ಅಲ್ಲವೇ ?' ಎಂದು ಗಹಗಹಿಸಿ ನಗುತ್ತಲಿದ್ದರು !

ದಿನದಿನಕ್ಕೂ ಹೊಸ ಬೇಟೆಯನ್ನು ಹೊಂಚುವ ಅವರ ಆಶೆಯಿನ್ನೂ ಹಿಂಗಿರಲಿಲ್ಲ. ಮೊನ್ನೆ ದೇವಲಾಪುರಕ್ಕೆ ಹೋಗಿದ್ದಾಗ ಆ ಶಿಕ್ಷಕಿ-ಸುಶೀಲೆ-ಅವರ ಮನವನ್ನಪಹರಿಸಿದ್ದಳು.

'.......... ಎಂತಹ ಮನಮೋಹಕ ರೂಪು-ಅವಳದು? ಅವಳ ಮುಗುಳು ನಗೆ ಎಷ್ಟುಹಿತಕರ ? ಅವಳ ಅಧರಾಮೃತವೆಷ್ಟು ರುಚಿಕರವಿರಬಹುದು ?

'ಅವಳ ಆ ಗಲ್ಲಗಳು, ನೀಳವಾದ ಕೇಶರಾಶಿ, ಬಳ್ಳಿಯಂತಹ ಹೇಹ-ಅದು ಇದು ಎಂದು ವರ್ಣಿಸುವುದೇನು ಬಂತು ?

'ಅವರು ವಿಶಾಲಾಕ್ಷಿ, ರುಕ್ಮಣಿ, ಚಂಚಲೆ, ರಂಗನಾಯಕಿ ಇತ್ಯಾದಿ ಅನೇಕರನ್ನು ಕಂಡಿದ್ದರು ; ಕೂಡಿದ್ದರು; ರುಚಿನೋಡಿದ್ದರು. ಆದರೆ ಯಾರೂ ಇವಳಿಗೆ ಸಾಟಿಯಾಗರು'-ಎನಿಸಿತು ಅವರಿಗೆ.

ಕುಳಿತಲ್ಲಿ ನಿಂತಲ್ಲಿ ಅವರಿಗೆ ಅವಳ ಮೂರ್ತಿಯೇ ಕಾಣಲಾರಂಭಿಸಿತು. ಆದೇಶಾಲೆಯ ಜವಾನಿ ನಂಜಿಗೂ ಅವರು ಸೂಕ್ಷ್ಮವನ್ನು ತಿಳಿಸಿದ್ದರು.

'ಸುಶೀಲೆ ಚನ್ನಾಗಿದ್ದಾಳಲ್ಲವೆ ನಂಜಿ ?' ಎಂದು ಮನದಾಸೆಯ ಹೊರಪರದೆಯನ್ನವಳೆದುರು ಹಾರಿಸಿದ್ದರು. ಒಮ್ಮೆ !

ಅವಳೂ ಅವರ ಪರಿಚಯಸ್ಥಳೇ !

ಅಷ್ಟೇನು ? ರಂಗನಾಯಕಿಯಂತಹ ಹೆಂಗಸನ್ನು ರಾಯರೊಬ್ಬರೇ ವಶಪಡಿಸಿಕೊಳ್ಳುವುದು ಶಕ್ಯವಿತ್ತೇ ? ನಂಜಿಯ ಸಹಾಯವಿತ್ತಂತಲೇ ಅವರು ಲೀಲಾಜಾಲವಾಗಿ ರಂಗನಾಯಕಿಯ ನಾಯಕರಾಗಿದ್ದರು !

ಅಂದು ನಂಜಿ ರಾಯರ ಅಭಿಲಾಷೆಯನ್ನರಿತಳು. 'ಅಮ್ಮಾವ್ರು ಎಲ್ಲರ ಹಾಂಗೆ ಬಲೆಗೆ ಬೀಳೋವ್ರಲ್ಲ....' ಎಂದು ಹೇಳಿಯೂ ಇದ್ದಳು.

ರಾಯರಿಗೇನೋ ಕೋಪಬಂತು. ಆದರೆ ರೇಗಿದರೆ ಕೆಲಸವಾಗು ವುದೆಂತು ?

'ನೋಡ್ನಂಜಿ' ಎಂದಷ್ಟೇ ಹೇಳಿ ಸುಮ್ಮನಾದರು. ಮತ್ತೆ ಪ್ರಾತಃ

ಕಾಲ ದೇವಲಾಪುರದಿಂದ ಕಾಲ್ತೆಗೆದಿದ್ದರು. ಆದರೆ ಅವರ ಮನಸ್ಸು ಮಾತ್ರ ಅಲ್ಲಿಯೇ ಉಳಿದಿತ್ತು. ಸುಶೀಲೆಯ ಹುಚ್ಚೇ ಅವರಿಗೆ ಹಿಡಿದಿತ್ತೆನ್ನ ಬಹುದು...............

ಎಷ್ಟು ಹೊತ್ತು ರಾಯರು ಹಾಗೆಯೇ ಕುಳಿತಿದ್ದರೋ ಏನೋ ?

'ಅಂಚೆಯ ವೇಳೆಯಾಯಿತು. ಈ ದಿನ ಯಾವ ಅಂಚೆ ಕಳುಹಬೇಕು ?' ಎಂದು ಹೆಡ್‌ಗುಮಾಸ್ತೆ ಕೇಳಿದಾಗಲೇ ಅವರು ತಮ್ಮ ಸಮಾಧಿಯಿಂದ ಎದ್ದುದು ............ನಿಮ್ಮ ರಿಪೋರ್ಟು ಸೇರಿದೆ. ಸುಶೀಲೆಯ ವಿಚಾರಣೆ ನಡೆಸುವ ಸಲುವಾಗಿ ಮುಂದಿನ ಭಾನುವಾರ ದೇವಲಾಪುರಕ್ಕೆ ಇನ್ಸ್‌ಪೆಕ್ಟರರು ಬರುವರು ಎಂಬರ್ಥದ ರಿಪೋರ್ಟನ್ನು ಬರೆಸಿ, ಅಂದೇ ಅಂಚೆಯಲ್ಲಿ ಹಾಕುವಂತೆ ಆಣತಿ ಯಿತ್ತರು ರಾಯರು.

'ಬೇರಾವುದೂ ಇಂದುಬೇಕಿಲ್ಲ' ಎಂದು ಹೇಳಿ ಮನೆಯತ್ತ ತೆರಳಿದರು ಇನ್ಸ್‌ಪೆಕ್ಟರ್ ವೆಂಕೋಬರಾಯರು.

ಮಾರನೆಯ ದಿನದಿಂದಲೇ ರಾಯರ ಪ್ರವಾಸ ಆರಂಭವಾಯಿತು. ಅಂದು ರಾಯರು ತಮ್ಮ ಹೆಡ್‌ಕ್ವಾರ್ಟರಿನ ಸಮೀಪದಲ್ಲಿದ್ದ ಒಂದು ಹಳ್ಳಿಯ ಶಾಲೆಗೆ ಭೇಟಿಯಿತ್ತು ಅಲ್ಲಿನ ಕೆಲಸವನ್ನು ಮುಗಿಸಿಕೊಂಡು ಅದೇತಾನೆ ಹಿಂತಿರುಗಿದ್ದರು. ಅಂದು ಕಳೆಯಿತು. ಮಾರನೆಯ ದಿನವೂ ಇನ್ನೊಂದು ಕಡೆಗೆ ಅವರಸವಾಗಿ ಚಿತ್ತೈಸುವುದಿದ್ದು ಏಕೋ ಅವರು ತೆರಳಲಿಲ್ಲ. ಕಛೇರಿ ಯವರಿಗೆಲ್ಲ ಆಶ್ಚರ್ಯ. ಇದೇನು ರಾಯರು ಹೀಗೆ ? ಎಂದು.

ಪಾಪ ! ಅವರಿಗೇನುಗೊತ್ತು ಆ ಹಳ್ಳಿಯಲ್ಲಿನ ಹಿಂದಿನ ದಿನದ ಅನುಭವ ಹಳ್ಳಿಯ ಶಾಲಾಮಾಸ್ತರ ತಕ್ಕಷ್ಟು ರಸಿಕನೇ ಎನಬೇಕು. ಕೈಯಲ್ಲಿ 'ಮೈಸೂರು ಮಲ್ಲಿಗೆ' ಪುಸ್ತಕಹಿಡಿದು 'ಬಾರೆ ನನ್ನ ಶಾರದೆ ಹಿಂದೆ ಮುಂದೆ ನೋಡದೆ, ಎದುರು ಮಾತನಾಡದೆ' ಎಂದು ಹಾಡಿಕೊಳ್ಳುತ್ತಿದ್ದ-ಅವರು ಶಾಲೆಗೆ ಭೇಟಿಯಿತ್ತಾಗ. ಬೋರ್ಡಿನಮೇಲೆ ಹುಡುಗರಿಗಾಗಿ ನಾಲ್ಕಾರು ಲೆಕ್ಕಗಳಿದ್ದವು. ಎಂದಮೇಲೆ ಅವನು ರಸಿಕನಲ್ಲವೆಂದು ಹೇಳುವುದಾದರೂ ಹೇಗೆ ? ಅವನು ರಸಿಕನಾದುದರಿಂದಲೇ ರಾಯರ ಮನದಾಶೆಯನ್ನು ಕಂಡು ಕೊಂಡು ಒಳ್ಳೆಯ ಚಾತುರ್ಯದಿಂದ 'ಅವಳ' ಮನೆಗೆ ಕಳುಹಿಸಿದ್ದ. 'ಅವಳ' ಮನೆಯೂ ಅವರಿಗೆ ಹೊಸದೇನಲ್ಲ. 'ಅವಳು' ಹೇಳಿಕೊಳ್ಳು

ವಂತಹ ಸುಂದರಿಯಾಗಿಲ್ಲದಿದ್ದರೂ ಕಳೆದುಕೊಳ್ಳುವಂತಹ ಕುರೂಪಿಯೇನಲ್ಲ. ಅಂದು ಸುಶೀಲೆಯ ನೆನಪಿನಿಂದಾಗಿ ಅವರಿಗಾಸವಮಾಗಮದಲ್ಲಿ ಆಸಕ್ತಿಯಿರಲಿಲ್ಲ. ಆದರೆ ? ತಾವೇ ಹಾಕಿಕೊಟ್ಟ ಮೇಲ್ಪಂಕ್ತಿ....! ಅದಕ್ಕೆ ಹೊರಗಾಗುವುದೆಂತು ?

ಇಷ್ಟೇ ಆಗಿದ್ದರೆ ಅವರು ಚಿಂತಿಸುವುದಾಗುತ್ತಿರಲಿಲ್ಲ. ಯಾರೋ ಪುಂಡರು -ಪಾಪ, ಅವರು 'ಅವಳ' ಮನೆಸೇರಿದ ಸ್ವಲ್ಪ ಹೊತ್ತಿನಲ್ಲಿ ಬಂದು ಗುಲ್ಲೆಬ್ಬಿಸಬೇಕೇ ? ಯಾರು ಯಾರಮನೆಗೆ ಹೋದರೆ ಅವರದೇನುಹೋಯಿತೋ ?

............ಸಾಕು ಇನ್ನಂತಹ ಇಕ್ಕಟ್ಟಿಗೆ ಸಿಕ್ಕದಿದ್ದರೆ ಸಾಕು ! ಬದುಕಿದೆಯಾ ಬಡಜೀವವೇ ಎಂದು ಅವರ ಕೈಯಿಂದ ಪಾರಾಗಿ ಬರಬೇಕಾದರೆ, ಕೈಯಲ್ಲಿದ್ದ ರಿಸ್ಟ್‌ವಾಚು, ಉಂಗುರಗಳನ್ನು ಕಳಚಿಕೊಟ್ಟುದುದು ಹಾಗಿರಲಿ- ಎಷ್ಟು ಸಾಹಸ ಮಾಡಬೇಕಾಯಿತು ? ಅಂಗಲಾಚಿಕೊಳ್ಳಬೇಕಾಯಿತು ? ಪಾಪಿಗಳು, ಯಮಕಿಂಕರರಂತೆ ಎಲ್ಲಿ ಕಾದಿದ್ದರೋ ?!

ಸದ್ಯ ಆದದ್ದಂತೂ ಆಗಿಹೋಯಿತು. ಅವರು ಊರಿನಲ್ಲೆಲ್ಲಾ ಗುಲ್ಲೆಬ್ಬಿಸಿ ರಾದ್ಧಾಂತ ಮಾಡದಿದ್ದರೆ ಸಾಕು ! ಮತ್ತೆ ಆ ಊರಿಗೆ ಹೋಗುವುದಾದರೂ ಹೇಗೆ ?

............ಈ ತಾಲ್ಲೋಕಿನ ಪರಿಸ್ಥಿತಿಯೇ ಕೆಡಹತ್ತಿದೆ. ಇನ್ನೊಂದು ಕಡೆಗೆ ವರ್ಗಮಾಡಿಸಿಕೊಂಡು ಹೋಗದಿದ್ದರೆ ಒಳ್ಳಿತಾಗಲಾರದು-ಎಂದುಕೊಳ್ಳುವ ಮಟ್ಟಕ್ಕೂ ಇಳಿದಿತ್ತು ಅವರ ಮನಸ್ಸು....' ನಾಳೆ ಭಾನುವಾರ-ದೇವಲಾಪುರಕ್ಕೂ ದಯಮಾಡಿಸುವುದಿಲ್ಲವೇಸಾರ್ ?' ಎಂದು ಮತ್ತೆ ಹೆಡ್ ಗುಮಾಸ್ತೆ ಮಾರಾಚೆನಿಂತು ಕೇಳಿದಾಗ ಎಚ್ಚೆತ್ತರು ರಾಯರು.

ನೆನ್ನಿನ ಪರಾಭವ, ಆದ ಮಂಗಳಾರತಿ-ಮೋಕ್ಷ-ಎಲ್ಲವೂ ಅವರ ಸ್ಮೃತಿಫಲಕದಿಂದ ಮರೆಯಾದವು. ಸುಶೀಲೆಯ ರೂಪು-ಅದೊಂದೇ ಅವರೆದುರು ನಾಟ್ಯವಾಡತೊಡಗಿತು.

'ಇಲ್ಲ....ನಾಳೆ ಹೋಗುವೆ' ಎಂದುಸುರಿದರು ರಾಯರು.

ಆ ನಾಳೆಯು ಬಂದಿತು. ಇನ್ಸ್‌ಪೆಕ್ಟರ್ ವೆಂಕೋಬರಾಯರ ಸವಾರಿ ದೇವಲಾಪುರಕ್ಕೆ ಚಿತ್ತೈಸಿತು. ಬಾಲಕ-ಬಾಲಕಿಯರ ಶಾಲೆಗಳ ಶಿಕ್ಷಕವರ್ಗ ಬಿರುಸಿನಿಂದ ಓಡಾಡಿ ಏರ್ಪಡಿಸಿದ್ದ ಔತಣದೂಟವನ್ನು ರಾಯರು ಕತ್ತರಿಸಿದರು. ಆ ಸೊಗಸಾದ ಊಟದ ರುಚಿಯೂ ಅವರಿಗೆ ಹಿಡಿಯಲಿಲ್ಲ.

ಎಲ್ಲಿಹಿಡಿದೀತು ಪಾಪ! ವಿಚಾರಣೆ ಮಾಡಲೆಂದು ಬಂದ ವೆಂಕೋಬರಾಯರು ಅಂದು ಊಟವಾಗುತ್ತಲೇ ಎಲೆ ಅಡಿಕೆ ಜಗಿದು ತುಸ ವಿಶ್ರಾಂತಿಗೆಂದು ಒರಗಿದ್ದರು. ಹಾಳುಸಿದ್ದೆ ೬ ಗಂಟೆವರೆವಿಗೂ ಬರಬೇಕೇ? ಸಾಹೇಬರನ್ನು ಎಬ್ಬಿಸುವ ಧೈರ್ಯ ಯಾರಿಗಿದೆ?

ಅಂತೂ ಏಳು ಗಂಟೆಯವೇಳೆಗೆ ವಿಚಾರಣೆ ನಡೆಸಲು ರಾಯರು ಸಿದ್ಧರಾದರು. 'ಆ ಸುಶೀಲೆಯನ್ನು ಬರಹೇಳು' ಎಂದರು ವೆಂಕೋಬರಾಯರು ನಂಜಿಯತ್ತ ತಿರುಗಿ ಅಧಿಕಾರವಾಣಿಯಲ್ಲಿ.

ಇನ್ಸ್‌ಪೆಕ್ಟರರ ಬಿಡಾರದಲ್ಲಿ ಬೇರಾರೂ ಇರಲಿಲ್ಲ. ಇತ್ತ ನಂಜಿಯಿಂದ ಇನ್ಸ್‌ಪೆಕ್ಟರರಕರೆ–ಸುಶೀಲೆಗೆ ಹೋಯಿತು.

'ಆವೇಳೆ ಹೋಗುವುದೇಕೆ?' ಎಂಬ ವಿಚಾರ ಅವಳಲ್ಲಿ ಬಂದಿತಾದರೂ ಒಮ್ಮೆಲೇ ತಾನೇ ಏಕೆ ಹಿಂಜರಿಯಬೇಕು, ಎಂದು ಯೋಚಿಸಿ, ಸಂಗಡ ತನ್ನ ತಮ್ಮನೊಬ್ಬನನ್ನು ಕರೆದುಕೊಂಡು ಇನ್ಸ್‌ಪೆಕ್ಟರರ ಬಿಡಾರದ ಕಡೆ ಹೊರಟಳು.

ನಂಜಿಯೊಡನೆ ಅವಳೂ ಒಳಸೇರಿದಳು. ಅವಳ ತಮ್ಮ ಹೊರಗಡೆಯೇ ನಿಂತ. ರಾಯರು ಕಾತುರತೆಯಿಂದ ಕಾದಿದ್ದರು

ನಂಜಿ ಏಕೋ ರಾಯರಕಡೆ ನೋಡಿ ಹುಬ್ಬುಹಾರಿಸಿದಳು. ಸನ್ನೆಮಾಡಿದಳು. ಹೊರಗಡೆ ಅವಳ ತಮ್ಮನಿರುವನೆಂದು ಸೂಚಿಸಲೆತ್ನಿಸಿದಳು. ಕಾಮಾಂಧರಾಗಿದ್ದ ಅವರಿಗೆಲ್ಲಿ ತಿಳಿದೀತು?

'ನೀನು ಹೋಗ್ನಂಜೀ' ಎಂದರು.

ವಿಧಿಯಿಲ್ಲ. ನಂಜಿ ಹೊರಕ್ಕೆ ಬಂದಳು.

ಸ್ವಲ್ಪಹೊತ್ತುಮೌನ.

ನಂತರ ಇನ್ಸ್‌ಪೆಕ್ಟರರೇ ಹೇಳಿದರು

'ನಿನ್ನಮೇಲೆ ರಿಪೋರ್ಟು ಬಂದಿದೆ!'

ಸುಶೀಲೆ ಸ್ವಾಭಿಮಾನಿ, ಮಾನಿನಿ. 'ನಿನ್ನ' ಶಬ್ದಕೇಳುತ್ತಲೇ ಔಡುಕಚ್ಚಿದಳು. ಎಷ್ಟಾದರೂ ಮೇಲಿನವರು. ತುಸ ಶಾಂತಿಯನ್ನು ತಂದುಕೊಂಡೇ ಉತ್ತರಿಸಿದಳು.

'ನಾನದಕ್ಕೆ ನನ್ನ ವಿವರಣೆಯನ್ನೂ ಕಳುಹಿದ್ದೇನೆ. ಕೆಲಸದ ವೇಳೆ

ಯಲ್ಲಿ ನಾನೆಂದೂ ಅವಿಧೇಯಳಾಗಿಲ್ಲ. ಕೆಲಸದ ವೇಳೆಯಲ್ಲದಿದ್ದಾಗ ಯಾರ ಮಾತಿಗೂ ನಾನು ಬೆಲೆಕೊಡಲಾರೆ' ದಿಟ್ಟತನದಿಂದ ಹೇಳಿದಳು ಅವಳು.

ಒಂದು ಸತ್ಯಕ್ಕಾಗಿ ಈ ಬಾಳು ಎಂದರಿತು ಬಾಳುತ್ತಿದ್ದವಳು. ಯಾರ ಹಂಗೇನವಳಿಗೆ?

ರಾಯರು ತಮ್ಮ ಕೈ ಕೆಳಗಿನ ಯಾರೂ ಇಷ್ಟು ದಿಟ್ಟತನದಿಂದ ಮಾತ ನಾಡಿದುದನ್ನು ತಮ್ಮ ಹತ್ತು ಹದಿನೈದು ವರ್ಷಗಳ ಅನುಭವದಲ್ಲಿ ಕಂಡಿರಲಿಲ್ಲ. ಅವರಿಗೂ ಕೋಪ ಬರುತ್ತಿತ್ತೇನೋ? ಸುಶೀಲೆಯ ಹುಚ್ಚಿನಲ್ಲಿದ್ದ ಅವರು ಶಾಂತರಾಗಿಯೇ ಇದ್ದರು.

'ಸುಮ್ಮನೆ ಈ ಹುಚ್ಚು ಕಲಹವನ್ನು ಬೆಳೆಸುವುದಾದರೂ ಏಕೆ? ಒಮ್ಮೆ ಮುಗಿಸಿದರಾಯಿತು' ಎಂದರು ರಾಯರು.

'ತಾವೇ ಅಧಿಕಾರಿಗಳು. ವಿಚಾರಣೆಗೆಂತಲೇ ಬಂದಿರುವಿರಿ. ಮುಗಿಸಿ ಬಿಡಿ!' ಎಂದಳವಳು.

ರಾಯರು ಒಂದುಮೆಟ್ಟಿಲು ಮೇಲಕ್ಕೇರಿದರು. ತನ್ನ ಅಧಿಕಾರದರಿವು ಇವಳಿಗಿದೆಯಲ್ಲ? ಎಂದು ನಂಬಿದರು. ನಿಜಕ್ಕೂ ಹಾಗೆ ನಂಬಿಯೇ ಕೆಟ್ಟರು!

'ಸುಮ್ಮನೆ ಕ್ಷಮಾಪಣೆ ಕೇಳಿಬಿಡು!'

'ಬೇಕಾದುದನ್ನು ಮಾಡಿ. ನನ್ನ ತಪ್ಪು ಇಲ್ಲ. ನಾನು ಕ್ಷಮೆ ಕೇಳು ವವಳೂ ಅಲ್ಲ'

ಅವಳಿಗೆ ಕೋಪ ಬಂದಿತ್ತು.

ರಾಯರ ಕಾಮುಕುಂಡ ಈ ವೇಳೆಗೆ ಪ್ರಜ್ವಲಿತವಾಗಿತ್ತು. ಅವರು ಸ್ವಲ್ಪ ಮುಂದುವರೆದರು.

'ಕುಳಿತುಕೋ. ನಾವೇನು ಹುಲಿಗಳೇ? ಹಾಗೆ ಬೆದರು ಕಣ್ಣಿಂದ ನೋಡಲಿಕ್ಕೆ?' ಅವರ ಕೈ ಇನ್ನೇನು ಅವಳ ಕೈ ಸೋಕುವುದರಲ್ಲಿತ್ತು. ಬೆಚ್ಚಿ ಹಿಂದಕ್ಕೆ ಸರಿದಳು ಸುಶೀಲೆ.

'ಮಹಾ ಜಂಭಗಾತಿ ನೀನು. ಎಷ್ಟು ಜನರನ್ನು ನೋಡಿಲ್ಲ ನಾನು? ಹೀಗೆ ಬಾ' ರಾಯರು ಮತ್ತಷ್ಟು ಮುಂದುವರೆದರು.

ಸುಶೀಲೆ ನಿಜವಾಗಿ ಹೌಹಾರಿದಳು.

‘ ಇದೇನ್ಸು ಮಾಡಹೊರಟಿರುವಿರಿ ?’

‘ ಮಾಡಿಯ್ಯೇ ತೋರಿಸುವೆ ಬಾ ’

ವೆಂಕೋಬರಾಯರು ಬೆಂಕಿಯ ಬಳಿ ಹೋಗುವ ಪತಂಗದ ಹುಳುವಿನಂತೆ ಇನ್ನಷ್ಟು ಮುಂದುವರೆದರು.

............ಕೋಪ ಉಕ್ಕಿತ್ತು. ಅವನೂ ಯುವಕನೇ. ರಕ್ತ ಕುದಿಯ ಹತ್ತಿತ್ತು. ಇನ್ಸ್‌ಪೆಕ್ಟರನಾದರೇನು ? ಹಣಗಾರನಾದರೇನು ? ಯಾರಾದರೇನು ? ಮರ್ಯಾದೆಗೆ ಪ್ರತಿಮರ್ಯಾದೆ. ‘ ಶಠಂ ಪ್ರತಿಶಾಠ್ಯಂ ’ ತಾನೇ. ಕೆಲಸಗಾರರಿಗೆ ಮಾನಮರ್ಯಾದೆಯಿಲ್ಲವೇ ?

ಒಮ್ಮೆಲೇ ಒಳಕ್ಕೆ ನುಗ್ಗಿದ.

ನಂಜಿ ‘ ಸಾಮೀ ’ ಎಂದಳು. ಆದರೆ ಅವಳ ಕೂಗನ್ನು ಕೇಳುವವರಾರು ?

. ......ಒಂದರ ಕ್ಷಣದಲ್ಲಿ ರಾಯರು ನೆನಸದಿದ್ದುದೆಲ್ಲಾ ಆಗಿಹೋಗಿದ್ದಿತು.

ಅವರು ಕೆಳಗೆ ಬಿದ್ದಿದ್ದರು. ಆ ಬಿಸಿರಕ್ತದ ತರುಣನಿಗೆ ಅವರು ಸಾಟಿಯಾದಾರೇ ? ಅದರಲ್ಲೂ ಸಂಭೋಗದಲ್ಲಿ ಮುಳುಗಿ ನಿರ್ಜೀವಿಗಳಾಗಿದ್ದ ಅವರು ?

ಫಟೀರ್, ಫಟೀರ್–ಶಬ್ದ ಹೆಚ್ಚಿತು.

‘ ಸೂ....ಮಗನೇ ? ಯಾವೋನು ಕೊಟ್ಟ ನಿನಗೆ ಕೆಲಸ....? ಇಂತಹ ಮನೆ ಮುರುಕರು ಸೇರಹತ್ತಿದರೊಂತಲೇ ಪವಿತ್ರವಾದ ಶಾಲೆಯ ಆವರಣಗಳು ಸೂಳೆಯರ ಅಡ್ಡೆಗಳಾಗಹತ್ತಿವೆ....ಇನ್ಸ್‌ಪೆಕ್ಟರ ? ಯಾರು ನೋಡುತ್ತಾರೆ– ನಿನ್ನ ಇನ್ಸ್‌ಪೆಕ್ಟರಗಿರಿಯನ್ನ ? ಎಷ್ಟು ಮನೆ ಮುರಿದಿದೀ ? ನಿನಗೆ ಮೋಕ್ಷ ತೋರಿಸಿಯೇ ಹೋಗ್ತೇನೆ....

ಫಟೀರ್–ಶಬ್ದದೊಡನೆ ಮಾತುಗಳೂ ಕೇಳಿ ಬರಹತ್ತಿದವು. ರಾಯರು ಕಿರಿಚಿಕೊಳ್ಳಲೂ ಇಲ್ಲ. ನಂಜಿಯಂತೂ ಮೂಕಳಂತೆ ಮೂಲೆಯೊಂದರಲ್ಲಿ ನಿಂತಿದ್ದಳು.

ಏನಾದರೂ ಹೆಂಗರುಳು. ಸುಶೀಲೆಗೆ ರಾಯರ ಅವಸ್ಥೆಯನ್ನು ನೋಡಲಾಗಲಿಲ್ಲವೆನಿಸುತ್ತದೆ. ತಮ್ಮನನ್ನು ಬಲಾತ್ಕಾರದಿಂದ ಎಳೆದುಕೊಂಡು ಹೊರಟಿದ್ದಳು.

' ಜೋಕೆ. ಅಯೋಗ್ಯ.... ಮಗನೇ.... ಮೂರುಕಾಸಿಗೆ ಇಳಿಸಿಬಿಟ್ಟೇನು ?' ಎಂದು ಕೂಗುತ್ತಲೇ ಅಕ್ಕನೊಂದಿಗೆ ಹಿಂತಿರುಗಿದ ಅವನು.

ರಾಯರು ಕಕ್ಕಾಬಿಕ್ಕಿಯಾಗಿದ್ದರು. ದಿಕ್ಕುತೋಚದಾಗಿತ್ತು. ಅವರು ಮಾಡಹೋದದ್ದೇನು ? ಅದು ಆದದ್ದೇನು ?........

ಅದೇ ತಾನೇ ಬಸ್ಸು ಬಂದಿತ್ತು.

' ನನ್ನ ಸಾಮಾನುಗಳನ್ನು ನಾಳೆ ಕಳುಹಬೇಕೆಂದು ರಂಗನಾಯಕಿಗೆ ಹೇಳು ' ಎಂದಿಷ್ಟು ಹೇಳಿ ಅವರು ದೇವಲಾಪುರದಿಂದ ಕಾಲ್ಕಿತ್ತರು. !

ಬಸ್ಸು ವೇಗವಾಗಿ ಮುಂದೆ ಸಾಗಿತ್ತು. ಆದರೆ ರಾಯರ ಮನಸ್ಸಿಗೆ ಶಾಂತಿಯಿರಲಿಲ್ಲ. ಅಂದು ರಾತ್ರಿ ಹೇಗಿರಬೇಕಿತ್ತು ? ಎಂತಹ ಗಾಳಿ ಗೋಪುರ ಕಟ್ಟಿದ್ದರವರು ? ಆದರೆ ಆದದ್ದೇನು ?

ಗಾಬರಿಯಲ್ಲಿ ಬಿದ್ದ ಏಟುಗಳ ಪರಿಣಾಮ ತಿಳಿಯಲಿಲ್ಲ. ಇನ್ನೂ ನೋವು. ಪಕ್ಕೆಲುಬುಗಳು ಮುರಿದಿದ್ದವೋ ? ಅವನ ಕೈಯೇನು ಕಬ್ಬಿಣವೋ ? ಹಾಳು ಶನಿಯಂತೆ ಬಂದ. ನಂಜಿಯಾದರೂ ಎಚ್ಚರಿಸಬಾರದಿತ್ತೆ ?

ಎಂತಹ ಪರಾಭವ ? ಈ ವಾರ ಗ್ರಹಗತಿಗಳೇ ನೆಟ್ಟಗಿಲ್ಲದಿರಬಹುದು. ಮೊನ್ನೆ ಆ ಹಳ್ಳಿಯ ಪ್ರಸಂಗ. ಮತ್ತೆ ಇಂದು ಈ ಪ್ರಸಂಗ.

' ಹಾಳುಗ್ರಹಗಳು ' ಎಂದು ಗೊಣಗಿದರು ವೆಂಕೋಬರಾಯರು !

ಇನ್ಸ್‌ಪೆಕ್ಟರ್ ವೆಂಕೋಬರಾಯರು ದೇವಲಾಪುರಕ್ಕೆ ಹೋಗಿ ಬಂದ ಮೇಲೆ ಒಂದುವಾರದವರೆವಿಗೂ ರಜ ತೆಗೆದುಕೊಂಡರು. ಹೌದು. ಸುಶೀಲೆಯ ಮೇಲೆ ಬಂದಿದ್ದ ರಿಕಾರ್ಡನ್ನು ಪತ್ತೆಯಿಲ್ಲದಂತೆ ಮಾಡಿಯೇ ರಜೆ ತೆಗೆದು ಕೊಂಡಿದ್ದರು. ಆವಾರ ಕಳೆವುದರಲ್ಲಿ ಇನ್ಸ್‌ಪೆಕ್ಟರರಿಗೆ ವರ್ಗವಾದ ಸುದ್ದಿ ಬಂದಿತು. ಸುದ್ದಿ ಪ್ರಕಾಶಕ್ಕೆ ಬರುವಷ್ಟರಲ್ಲೇ ಇನ್ಸ್‌ಪೆಕ್ಟರರು ಪರಿವಾರ ಸಮೇತ ತಳಕಿತ್ತಿದ್ದರು. ಅವರನ್ನು ಸತ್ಕಾರಕೂಟಗಳಿಗೆ ಆಹ್ವಾನಿಸಬೇಕೆಂದು ಆಶೆಪಟ್ಟಿದ್ದ ಅನೇಕರಿಗೆ ಅವರು ಇದ್ದಕ್ಕಿದ್ದಂತೆ ಮಾಯವಾದುದರಿಂದ ಬಹಳ ನಿರಾಶೆಯಾಯಿತಂತೆ. ಹಾಗೆಯೇ ಆಶ್ಚರ್ಯವೂ ಆಯಿತಂತೆ ಸುಶೀಲೆ ಮಾತ್ರ ಎಲ್ಲವನ್ನೂ ಕೇಳಿ ನಸುನಕ್ಕಳು. ಗೋಮುಖವ್ಯಾಘ್ರನ ಗುಟ್ಟು ಅವಳಿಗೆ ಗೊತ್ತಿತ್ತು.

# ಎಚ್ಚರಿಕೆ!

ಮನುಷ್ಯ ಕ್ರಮಕ್ರಮವಾಗಿ ಹೇಗೆ ಅನೀತಿ ಪಂಕದಲ್ಲಿಳಿಯುತ್ತಾನೆಂಬುದನ್ನು ಎತ್ತಿ ತೋರಿಸುವ ಒಂದು ಮನೋಜ್ಞ ಚಿತ್ರ ಇಲ್ಲಿದೆ.

ಪಾಷಾ ಇನ್‌ಸ್ಪೆಕ್ಟರೆಂದರೆ ಎಲ್ಲರಿಗೂ ಗೊತ್ತು. ಅವನು ಬರುತ್ತಿದ್ದಂತೆಯೇ ಅನೇಕರು ಕಂಬಿ ಕೀಳುತ್ತಿದ್ದರು. ಆದರೆ ಪಾಷಾ ಇವರಿಗಿಂತ ಸ್ವಲ್ಪ ಬುದ್ಧಿವಂತ. ಅದಕ್ಕೆಂದೇ ಅವನನ್ನು ಟೆಕ್ಸ್‌ಟೈಲ್ ಇನ್‌ಸ್ಪೆಕ್ಟರಾಗಿ ಸರ್ಕಾರದವರು ತೆಗೆದುಕೊಂಡಿರಬೇಕು. ಅವನು ಬಂದಾಗ ಕೈಗೆ ಸಿಗದೆ ತಪ್ಪಿಸಿಕೊಂಡು ಓಡಾಡುತ್ತಿದ್ದವರನ್ನು, ಮರೆಯದೆ ಅನಿರೀಕ್ಷಿತವಾಗಿ ಬಂದು ಅವರನ್ನೇ ಹಿಡಿಯುತ್ತಿದ್ದ ಯಾರು ತಪ್ಪಿಸಿಕೊಂಡಿದ್ದಾರೆಂಬುದನ್ನು, ಆ ತಾಲ್ಲೂಕಿನಲ್ಲಿರುವ ಜವಳಿ ವರ್ತಕರ ಪಟ್ಟಿಯಲ್ಲಿ, ಆಯಾ ಊರಿಗೆ ಹೋದಾಗ ನೋಡಿಕೊಂಡು ಕಂಡುಹಿಡಿಯುತ್ತಿದ್ದ. ಒಂದು ಬಾರಿ ತಪ್ಪಿಸಿಕೊಂಡು ಓಡಾಡಿದವರಿಗೆ ಮುಂದಿನ ಬಾರಿ ಏನಾದರೊಂದು ತೊಂದರೆ ಕಟ್ಟಿಟ್ಟಬುತ್ತಿ. ಕಂಟ್ರೋಲ್ ಬೆಲೆಗೆ ಹೆಚ್ಚಾಗಿ ಬಟ್ಟೆಯನ್ನು ಮಾರಿದ್ದೀರಿ, ಲೆಖ್ಖದಲ್ಲಿರಬೇಕಾದ್ದಕ್ಕಿಂತ ಬಟ್ಟೆ ಕಮ್ಮಿ ಇದೆ, ಬಟ್ಟೆಯ ದರ ತಿಳಿಸಿರುವ ಸೈನ್ ಬೋರ್ಡಿಲ್ಲ, ಪಟ್ಟಿಗಳಲ್ಲಿ ಗಿರಾಕಿಗಳ ರುಜು ಪಡೆಯುತ್ತಿಲ್ಲ, ನಿಯಮಿತ ಪರಿಮಾಣಕ್ಕಿಂತ ಹೆಚ್ಚಿಗೆ ಬಟ್ಟೆಯನ್ನು ಒಂದು ಕಾರ್ಡಿಗೆ ಕೊಟ್ಟಿದೀರಿ, ಲೆಖ್ಖ ಸರಿಯಾಗಿ ಇಟ್ಟಿಲ್ಲ, ಆಯಾ ದಿನದ ಲೆಖ್ಖ ಬರೆದಿಲ್ಲ, ಬಟ್ಟೆ ಹಂಚುವಿಕೆಯಲ್ಲಿ ಪಕ್ಷಪಾತಮಾಡಿದೀರಿ, ಅಳತೆಯಲ್ಲಿ ಕಡಿಮೆಯಿದೆ, ಕಂಟ್ರೋಲ್ ನಿಬಂಧನೆಗಳನ್ನು ಮರೆತಿದೀರಿ, ಅಂಗಡಿಯಲ್ಲಿ ಲೈಸನ್ಸ್ ಹಾಕಿಲ್ಲ, ಬಟ್ಟೆಯನ್ನು ಎಲ್ಲರಿಗೂ ಕಾಣುವಂತೆ ಇಟ್ಟಿಲ್ಲ ಎಂದು ಏನಾದರೊಂದು ಕಾರಣ ಹುಡುಕಿ ಅವರ

ಮೇಲೊಂದು ಕೇಸು ಸಿದ್ಧ. ಇದಾವುದೂ ಇಲ್ಲದೆ ಸಮರ್ಪಕವಾಗಿದ್ದರೂ, ಲೆಕ್ಕದಲ್ಲಿ ತೆಗೆದುಕೊಳ್ಳಬೇಕಾದುದಕ್ಕಿಂತ ಹೆಚ್ಚಿಗೆ ಎರಡುಕಾಸು ಹಾಕಿದೀರಿ ಎಂದಾದರೂ ತಪ್ಪು ಹುಡುಕುತ್ತಿದ್ದ ಇನ್‌ಸ್ಪೆಕ್ಟರು. ಅಂತೂ ಹಸ್ತಸಾಮುದ್ರಿಕರು ಹೇಳುವಂತೆ ಕೈಗಳಲ್ಲಿರುವ ಗೆರೆಗಳಲ್ಲಿ, ಈ ಇನ್‌ಸ್ಪೆಕ್ಟರ ಕೈಲಿ ತಪ್ಪು ಹುಡುಕುವ ಗೆರೆಯನ್ನೇನಾದರೂ ಬ್ರಹ್ಮ ಸೃಜಿಸಿದ್ದನೋ ಏನೋ! ಅಂತೂ ಎಲ್ಲ ವರ್ತಕರೂ ಈತನಿಗೆ ಹೆದರುತ್ತಿದ್ದರು. ಅಲ್ಲದೆ ಮಾಷಾ ಹಿಂದೆ ಸಬ್ ಇನ್‌ಸ್ಪೆಕ್ಟರಾಗಿದ್ದುದರಿಂದ ಸ್ವಲ್ಪ ಗಮ್ಮತ್ತಿನಿಂದಲೇ ಇದ್ದ. ಸಬ್‌ಇನ್‌ಸ್ಪೆಕ್ಟರೆಂದರೆ ಸ್ವಲ್ಪ ಸಂಬಳ ಕಡಿಮೆ ಕಾಲು ಚಾಚಬೇಕೆಂಬುದು ಆಶೆ; ಆದರೆ ಹಾಸಿಗೆ ಚಿಕ್ಕದು. ಆದ್ದರಿಂದ ಸ್ವಲ್ಪ ಕೈಚಾಚಬೇಕಾಗಿತ್ತು. ಎಂತಲೇ ಮಾಮೂಲಿನ ಬಲೆ ಬೀಸಿದ್ದ. ಸಿಕ್ಕಿದ್ದರಲ್ಲೆ ತೃಪ್ತನಾಗಿದ್ದ. ಅವನು ಇನ್‌ಸ್ಪೆಕ್ಟರಾಗಿರುವವರೆಗೂ ಹೆಚ್ಚಿನ ಸಂಪಾದನೆಯಾಗುವ ಸಂಭವವೇ ದೊರೆಯಲಿಲ್ಲ. ಇದ್ದಕ್ಕಿದ್ದ ಹಾಗೆ ಆತನನ್ನು ಟೆಕ್ಸ್‌ಟೈಲ್ ಇನ್‌ಸ್ಪೆಕ್ಟರಾಗಿ ತೆಗೆದುಕೊಂಡರು.

ಆಗ ಇನ್‌ಸ್ಪೆಕ್ಟರಿಗೆ ಅದೃಷ್ಟ ದೇವತೆ ಒಲಿದಳು. ಇನ್‌ಸ್ಪೆಕ್ಟರು ಮಾತ್ರ ಹೊಸ ಅಧಿಕಾರ ವಹಿಸಿದಾಗ ತಮ್ಮ ಸುಖಜೀವನಕ್ಕೆ ಕಲ್ಲು ಬಿತ್ತು ಎಂದೇ ತಿಳಿದಿದ್ದರು. ಬಂದ ಅಧಿಕಾರದಲ್ಲಿ ಮೊದಲಿಗಿಂತ ಹತ್ತು ರೂಪಾಯಿ ಸಂಬಳ ಹೆಚ್ಚಿತ್ತು. ಆದ್ದರಿಂದ ಸ್ವಲ್ಪ ತೃಪ್ತಿಯಿತ್ತು. ಸರ್ಕಾರವನ್ನು ಶಪಿಸುತ್ತಲೇ ಅಧಿಕಾರ ವಹಿಸಿಕೊಂಡರು ಒಂದು ತಿಂಗಳೊಳಗೇ ಆತನಿಗೆ ಹೊಸದೊಂದು ಅನುಭವ ಆಯಿತು. ತನಗೆ ಸಿಕ್ಕಿದ ಸಂಬಳದಲ್ಲೇ ತೃಪ್ತಿಯಿಂದಿರೋಣ, ಕೈಚಾಚಿ ಕೆಟ್ಟಹೆಸರು ಪಡೆಯುವುದು ಬೇಡ ಎಂದು ನಿರ್ಧರಮಾಡಿಕೊಂಡಿದ್ದ. ಅದಂತೆ ತನಗೆ ನಿರ್ವಹಿಸಿದ್ದ ಅಧಿಕಾರವನ್ನು ಲೋಪವಿಲ್ಲದೆ ನಡೆಸಿ ಕೆಲಸ ಮಾಡತೊಡಗಿದ. ವರ್ತಕರಲ್ಲಿನ ಪ್ರತಿ ತಪ್ಪುಗಳನ್ನೂ ಕಂಡುಹಿಡಿದು, ಕೆಲವಾರು ಪ್ರಮುಖ ವರ್ತಕರ ಮೇಲೆ ಕ್ರಮಜರುಗಿಸಿ, ಕೇಸ್ ದಾಖಲೆ ಮಾಡಿಕೊಂಡ. ವರ್ತಕರಿಗೆ ತಮಗೆ ಮುಂದೇನಾಗುತ್ತದೋ ಎಂಬ ಭಯ. ತಪ್ಪುಮಾಡಿದವರನ್ನು ಸರ್ಕಾರ ಕಠಿನವಾಗಿ ಶಿಕ್ಷಿಸುತ್ತಿತ್ತು. ೨೦೦ ರಿಂದ ೫೦೦೦ ರೂಪಾಯಿಗಳವರೆಗೆ ಜುಲ್ಮಾನೆ; ಮೂರು ತಿಂಗಳಿಂದ ಮೂರು ವರ್ಷದವರೆಗೆ ಕಠಿನ ಸಜಾ! ವರ್ತಕರು ಹೆದರಿದ್ದರು. ಅಲ್ಲದೆ ತಮ್ಮ ವ್ಯಕ್ತಿತ್ವ ಅರ್ಥಾತ್ ಸಿರಿತನದ ಘನತೆಗೆ ಅವಮಾನವಾಗುತ್ತದೆಂದು ಒಣ

ಪ್ರತಿಷ್ಠೆ ಬೇರೆ. ಸಾಲದೆಂದು ತಮ್ಮ ಕಾಳಸಂತೆಗೇ ಕಲ್ಲು ಬೀಳುವುದೇನೋ ಎಂಬ ಭಾವನೆಯೂ ಇಲ್ಲದಿರಲಿಲ್ಲ.

ಪಾಷಾ ಒಂದುದಾರಿಹಿಡಿದರೆ, ವರ್ತಕರು ತಮ್ಮದೇ ಆದ ಬೇರೆದಾರಿ ಹಿಡಿದರು. ಇನ್ಸ್‌ಪೆಕ್ಟರನ್ನು ಬಲೆಗೆ ಬೀಳಿಸಲೆತ್ನಿಸಿದರು. ಕೋರ್ಟಿನಲ್ಲಿ ಕೇಸ್ ದಾಖಲಾಗಿದ್ದವರು, ಇನ್ಸ್‌ಪೆಕ್ಟರನ್ನು ಮೊದಲು ಬಹಳ ವಿಧವಾಗಿ ಬೇಡಿ ಕ್ಷಮಿಸಬೇಕೆಂದರು. ಮುಂದೆ ಈರೀತಿ ಮಾಡುವುದಿಲ್ಲವೆಂದು ಗೋಗರೆದರು. ಆಸಾಮಿ ಜುಂ ಎನ್ನಲಿಲ್ಲ! ತಟ್ಟೆಯಲ್ಲಿ ಹಣ್ಣು ಹಂಪಲು, ಹೂ, ಎಲ್ಲ ಇಟ್ಟುಕೊಂಡು ಇನ್ಸ್‌ಪೆಕ್ಟರನ್ನ ಮನೆಯಲ್ಲಿ ಕಂಡು ಕೈಜೋಡಿಸಿದರು. ಆಸಾಮಿ ಕದಲಲೇ ಇಲ್ಲ.! ತಟ್ಟೆಯಲ್ಲಿ ನೀಲಿ ನೋಟುಗಳು ಬಂದವು. ಮೊದ ಮೊದಲು ಆಗುವುದೇ ಇಲ್ಲವೆಂದು, ಕೊನೆಗೆ ಅದನ್ನೇ ಉಪಾಯಾಂತರದಲ್ಲಿ ತೆಗೆದುಕೊಂಡದ್ದಾಯಿತು. ಮನಸ್ಸು ಬೇಡವೆನ್ನುತ್ತಿತ್ತು. ಮರುಕ್ಷಣವೇ ಮೂಢಾ, ಸಿಕ್ಕಾಗ ಸಿಗಿಯದಿದ್ದರೆ, ಇಲ್ಲದಾಗ ಚಪ್ಪರಿಸಬೇಕಾಗುತ್ತೆ! ಸುಮ್ಮನೇ ಜೇಬಿಗಿಳಿಸು ಎಂದು ಪ್ರೇರೇಪಿಸುತ್ತಿತ್ತು. ಕೊನೆಗೆ ಪ್ರೇರೇ ಪಣೆಗೇ ಬಲಿಬಿದ್ದು "ಏನು ಜನವಪ್ಪ, ಈ ರೀತಿ ಒಂದೇಸಮನೆ ಕಾಡುತ್ತೀರಿ. ನನಗೆ ಬೇಜಾರಾಗಿಹೋಯ್ತು. ಹೋಗಲಿ ಪಾಪ ಈಸಾರಿಗೆ" ಎನ್ನುವಂತಾದ!

ಆಸೆ ದುರಾಸೆಯಾಯ್ತು. ಹಣವನ್ನು ಕೂಡಿಡುವ ಮನಸ್ಸು ಹೆಚ್ಚಾಯ್ತು. ಅದಕ್ಕಾಗಿ ತನ್ನ ಅಧಿಕಾರಕ್ಕೆ ಒಳಪಟ್ಟ ಎಲ್ಲ ಹಳ್ಳಿಗಳನ್ನೂ ಸುತ್ತಿ, ಕೇಸುಗಳನ್ನು ದಾಖಲೆ ಮಾಡಲಾರಂಭಿಸಿದ. ದಿನವೂ ಇವನ ಮನೆಯ ಬಳಿ ಜನ ಬರಲಾರಂಭಿಸಿದರು. ನೋಟುಗಳೂ ತೆಕ್ಕೆಗಟ್ಟಲೆ ಬರಲಾರಂಭಿಸಿದವು. ಸಂಬಳ ನೂರುರೂಪಾಯಿಯಾದರೆ ಮೇಲಿನ ಆದಾಯ ತಿಂಗಳಿಗೆ ಸಾವಿರಕ್ಕೆ ಮೇಲ್ಪಟ್ಟು. ಅಂತ್ಯವಿಲ್ಲದ ಆಶೆಯನ್ನು ಪೂರೈಸಲು ಮತ್ತೊಂದು ದಾರಿ ಹುಡುಕಿದ. ಸ್ಟೇಷನರಿ ಅಂಗಡಿಗಳಲ್ಲಿ ತನಗೆ ಬೇಕಾಗುವ ಎಲ್ಲ ಸಾಮಾನುಗಳನ್ನು ತೆಗೆದುಕೊಂಡು, ಹಣ ಕೊಡದೆ ಬರಲಾರಂಭಿಸಿದ. ಅವರ ಅಂಗಡಿಗಳಲ್ಲೂ ಬಹಳ ವಸ್ತುಗಳು ನಿಯಂತ್ರಿತ ಬೆಲೆಯವುಗಳೇ. ಇದರ ಮೇಲೂ ಅಧಿಕಾರವಿತ್ತು ಪಾಷಾಗೆ. ಆದ್ದರಿಂದ ಆ ಅಂಗಡಿಗಳವರು ಹೆದರಿ ಏನೂ ಮಾತನಾಡುತ್ತಿರಲಿಲ್ಲ. ಜವಳಿ ಅಂಗಡಿಗಳಲ್ಲಿ ತನಗೆ ಬೇಕಾದ ಸೂಟಿಂಗ್, ಷರಟಿಂಗ್, ಪಂಚೆ, ಶೀರೆ ಎಲ್ಲ ತೆಗೆದುಕೊಳ್ಳು

ತ್ತಿದ್ದ. ಅಂಗಡಿಯವರೂ ಮಾತನಾಡಲಿಲ್ಲ. ಅವರಿಗೂ ಅದೇ ಬೇಕಾಗಿ ತ್ತೇನೋ.

ಪಾಷಾನ ಪ್ರಗತಿ ಮತ್ತೂ ಒಂದು ಹೆಜ್ಜೆ ಮುಂದಾಯಿತು. ಪ್ರತಿ ಅಂಗಡಿಯಲ್ಲೂ ಇದೇ ರೀತಿ ತೆಗೆದುಕೊಂಡು ಬಂದು ಅದನ್ನು ಮಾರಿ ಹಣ ಪಡೆಯಲೂ ಆರಂಭವಾಯಿತು. ಚಿನ್ನದ ಭಾರ ತಡೆಯದೆ ಹೆಂಡತಿ ಜಗ್ಗಿ ನಡೆಯುವಂತಾಯಿತು. ರ್‍ಯಾಲಿ ಸೈಕಲ್, ಬಿ. ಎಸ್. ಎ. ಮೋಟಾರ್ ಬೈಸಿಕಲ್, ಬರ್ಸೋಲಾ ಸೂಟ್, ರೊಬಾಂಡ್ ಕನ್ನಡಕ, ವೆಸ್ಟೆಂಡ್ ಗಡಿಯಾರ, ಫ್ಲೆಕ್ಸ್ ಷೂ, ಮುಂತಾದವೆಲ್ಲ ಓಡಿಬಂದವು. ಪ್ಲೆಯರ್ಸ್ ಸಿಗಾರು ಮಾರುವವನಂತೂ ಬದುಕಿಹೋದ. ರೇಡಿಯೋ ಏಜೆಂಟನಿಗೂ ಗಿಟ್ಟದಿರಲಿಲ್ಲ !

ಕೊನೆಗೆ ವರ್ತಕ ಸಮೂಹ ಒಂದಾಗಿ ' ಮಾಸಾಶನ ' ಗೊತ್ತುಮಾಡಿತು ಇನ್ಸ್ಪೆಕ್ಟರ ತನಿಖೆ ಕ್ರಮಗಳು ಆಗಾಗ ತಪ್ಪದೆ ನಡೆದವು. ಸರ್ಕಾರಕ್ಕೆ ವರದಿಗಳು ಹೋದವು. ಸಂಬಳ ಬಟವಾಡೆ ಸಲೀಸಾಯಿತು. ಹೆಸರಿಗಿರಲಿ ಎಂದೇನೋ ಆಗೊಮ್ಮೆ ಈಗೊಮ್ಮೆ ಯಾರಾದರೊಬ್ಬ ವರ್ತಕರಿಗೆ 'ಎಚ್ಚರಿಕೆ' ಕೊಡಲ್ಪಡುತ್ತಿತ್ತು.

' ನಿರ್ಭಯವಾಗಿ ಮಾರಿ. ನಾನಿರುವೆ ' ಎಂದು ಪಾಷಾ ಅಭಯಹಸ್ತ ಕೊಟ್ಟಿದ್ದ. ಗುರುತರತಪ್ಪಿಗೂ ' ಎಚ್ಚರಿಕೆ 'ಗಿಂತ ಹೆಚ್ಚಿನ ಶಿಕ್ಷೆ ಇರಲೇ ಇಲ್ಲವೇನೋ ಪಾಷಾನ ಸರ್ಕಾರದಲ್ಲಿ.

ಅಂತೂ ಎಚ್ಚರಿಕೆ !

— ತಾ. ರಾ. ನಾ.

## ಪ್ರದರ್ಶನಕ್ಕೆ ಸಿದ್ಧವಿರುವ ಕನ್ನಡ ಚಿತ್ರಗಳು

ಮಹಾತ್ಮಾರವರ

# ಕೃಷ್ಣಲೀಲಾ

★ ಕೆಂಪರಾಜ್ ★ ಬಳ್ಳಾರಿ ಲಲಿತಾ ★ ರತ್ನಮಾಲಾ
★ ರಾಘವೇಂದ್ರರಾವ್ ★ ಮರಿರಾವ್ ಮುಂತಾದವರು.

# ರಾಮದಾಸ್

★ ವಿಮಲಾನಂದ ದಾಸ್ ★ ಸುಶೀಲಾ
★ ಕೆಂಪರಾಜ್ ★ ಪ್ರತಿಮಾ ಮುಂತಾದವರು.

# ನಾಗಕನ್ನಿಕಾ

★ ಜಯಶ್ರೀ ★ ರಾಘವೇಂದ್ರರಾವ್ ★ ಬಳ್ಳಾರಿ ರತ್ನಮಾಲಾ ★ ವೀರಭದ್ರಪ್ಪ ★ ಮಹಾಬಲರಾವ್ ಮುಂತಾದವರು.

ಚಿತ್ರವಾಣಿ ಪ್ರೊಡಕ್ಷನ್ಸ್‌ರವರ

# ಶಿವಪಾರ್ವತಿ

★

## ಬರಲಿರುವ ನಮ್ಮ ಮುಂದಿನ ಚಿತ್ರ

# ★ ಜಗನ್ಮೋಹಿನಿ ★

*For Particulars Contact:*

**SHANTA PICTURES**

GANDHI NAGAR :: BANGALORE 2.

ಶುಚಿ ಮತ್ತು ರುಚಿಯಾದ
ಉಪಾಹಾರ

★

ಉತ್ಕೃಷ್ಟವಾದ
ಕಾಫಿ, ಟೀ

—: ಇವು ನಮ್ಮ ವೈಶಿಷ್ಟ್ಯ :—

ಶ್ರೀ ಅನ್ನಪೂರ್ಣ ಲಾಡ್ಜ್

ಪ್ರೊಪ್ರೈಟರ್:
ಡಿ. ನಾರಣಯ್ಯರ್
ತ್ಯಾಮಗೊಂಡ್ಲು

## ಮುಂದಿನ ಪ್ರಕಟನೆಗಳು

★ ಮೈಸೂರ್ ಚಲೋ
★ ಸ್ನೇಹ ಪತ್ರಗಳು
★ ಕ್ಷೇತ್ರ ಯಾತ್ರೆ
★ ಹರೋಹರ
★ ನಾನು ಕಂಡ ಪತ್ರಿಕಾ ಪ್ರಪಂಚ
★ ವೀರರಾಣಿ ಝಾನ್ಸಿ ಲಕ್ಷ್ಮೀಬಾಯಿ

ಸುದರ್ಶನ ಪ್ರಕಟನಾಲಯ

ಬೆಂಗಳೂರು ೨

ಜಮ್ಖಾಲ ಮಡಗು, ಸೇಲಂ,
ಕಂಚಿ, ಕುಂಭಕೋಣಂ,
ತಾಡಪತ್ರಿ ಮುಂತಾದ ದಕ್ಷಿಣ
ಭಾರತದ ಎಲ್ಲಾ ಬಗೆಯ
ಉತ್ತಮದರ್ಜೆಯ ಜವುಳಿ
**ಇಲ್ಲಿದೆ !**

★

ಏನು ಬೇಕು ?
ಎಂಥದ್ದು ಬೇಕು ? ?
ಕೋಟಿಂಗೇ, ಷರಟಿಂಗೇ,
ಮಗುಟವೇ, ಸಿಲ್ಕೋ,
ಸೀರೆಯೋ ? ಬೇಕಾದುದೆಲ್ಲ
**ಇಲ್ಲಿದೆ ! !**

★

**ಮೋಸದ ಮಾತೇ ಇಲ್ಲ !**
**ದಿವಾನನಿಂದ ಜವಾನನವರೆಗೆ**
**ಹುಡುಗನಿಂದ ಮುದುಕನವರೆಗೆ**
**ಒಂದೇ ಬೆಲೆ**

★

# ಶ್ರೀ
# ವಾಸವಾಂಬಾ ಹಾಲ್
**ಮಾಗಡಿ**
**ಬೆಂಗಳೂರು ಜಿಲ್ಲೆ**

## ಯಂತ್ರಗಳಿಂದ ತಯಾರಾದ ಬಟ್ಟೆಗಳಿಗಿಂತಲೂ




ನೋಡಲು ಅಂದವಾಗಿ
ಬಾಳಿಕೆಯಲ್ಲಿ
ಮಿಗಿಲಾಗಿ
ಬೆಲೆಯಲ್ಲಿ
ಕಡಿಮೆಯಾಗಿ
ಕೈಮಗ್ಗಗಳಲ್ಲಿಯೇ
ತಯಾರಾಗಿ
ಪ್ರಖ್ಯಾತವಾಗಿರುವ

## ಚೆಟ್ಟಿ
## ಫೇಬ್ರಿಕ್ಸ್

ಗಳನ್ನೇ ಉಪಯೋಗಿಸಿ

★ **ಕೋಟಿಂಗುಗಳು**
★ **ಷರಟಿಂಗುಗಳು**
★ **ಸೂಟಿಂಗುಗಳು**

ಎಲ್ಲಾ ವಿಧವಾದ ಮನಮೋಹಕ ಬಣ್ಣಗಳಲ್ಲಿ ದೊರೆಯುತ್ತವೆ

**'ಜಂಟಲ್ ಮನ್'** ಟ್ರೇಡ್‌ಮಾರ್ಕ್ನನ್ನು ಗಮನಿಸಲು ಮರೆಯದಿರಿ

ವ್ಯಾಪಾರ ವಿವರಗಳಿಗೆ ಬರೆಯಿರಿ:

**ಕೃಷ್ಣ ಏಜನ್ಸೀಸ್,** ಬೊಂಬಾಯಿ 19.
**ಕೃಷ್ಣ ಏಜನ್ಸೀಸ್,** 328, ಚಿಕ್ಕಪೇಟೆ, ಬೆಂಗಳೂರು 2.

ಸ್ಟಾಕಿಸ್ಟರು:

**೧. ವಿ. ಎಸ್. ಸಜ್ಜನರಾವ್,**
**ಪ್ರೊಬ್ಬತಿ ಕೃಷ್ಣಯ್ಯಶೆಟ್ಟಿ ಅಂಡ್ ಕೋ.**
**೨. ಕೆ. ವಿ. ನರಸಿಂಹಯ್ಯಶೆಟ್ಟಿ ಅಂಡ್ ಸನ್ಸ್.**

**ಮಗುವೆಂದರೆ ಯಾರಿಗೆತಾನೇ ಬೇಡ?**

**ಈ ಗುರುತನ್ನು ನೋಡಿ!**

*Davidoss & Co.*
BANGALORE
CITY

"BABY"

ಬೇಬಿ ಫೇಬ್ರಿಕ್ಸ್‌ನ | बेबी பேபி | بے بی బేబి | ಶ್ರೇಷ್ಠತೆಯ ಹೆಗ್ಗುರುತು



TRADE MARK No 25732 REGISTERED

★ ಮನಮೋಹಕ ಕೆಲಸಗಾರಿಕೆ

★ ಗ್ಯಾರಂಟಿ ಬಣ್ಣ

★ ಉತ್ಕೃಷ್ಟತೆ

★ ಬಾಳಿಕೆ

**ಇವುಗಳಿಗೆ ಬೇಬಿ ಫೇಬ್ರಿಕ್ಸ್ ಪ್ರಸಿದ್ಧಿ ಪಡೆದಿದೆ.**

ಮನವೊಪ್ಪುವ ಬಗೆಬಗೆಯ ರಂಗುಗಳಲ್ಲೂ, ಬೇರೆಬೇರೆ ಪನ್ನಗಳಲ್ಲಿಯೂ ದೊರೆಯುವ ಖ್ಯಾತಿಪಡೆದ ಫ್ಲೈನ್ ಮತ್ತು ಚಕ್ಕ ಬೇಬಿ ಷರಟಿಂಗುಗಳು, ಕೋಟಿಂಗುಗಳು ಮತ್ತು ಬೆಡ್‌ಟಿಕಿಂಗ್ ಇವುಗಳನ್ನೇ ಉಪಯೋಗಿಸಿರಿ.

ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.

**ಡೇವಿದಾಸ್ ಅಂಡ್ ಕಂಪನಿ**

**ಚಿಕ್ಕಪೇಟೆ : : ಬೆಂಗಳೂರು ನಗರ**

ಎಲ್ಲಿಗೆ ಗೌಡರೇ ಪ್ರಯಾಣ ?
ಬೆಂಗಳೂರಿಗೆ ಹೊರಟದ್ದೀನಿ ಸ್ವಾಮಿ.
ಅದೇನ್ರಿ ? ಬೆಂಗಳೂರು ನೋಡೋಕೆ ಹೋಗ್ತಿರಾ ?
ಮನೆಗೊಂದೊಸಿ ಬಟ್ಟೆ ತರಬೇಕಾಗಿತ್ರಿ.
ಅದಕ್ಕೇಕೆ ಬೆಂಗಳೂರಿಗೆ ಹೋಗಬೇಕು ಗೌಡರೇ.
ನಿಮ್ಮೂರ ಹತ್ರ ಹುಳಿಯಾರಲ್ಲೇ ಬೇಕಾದ ತರಹೆ,
ಬೇಕಾದಷ್ಟು ಜವುಳಿ ಸಿಕ್ಕುತ್ತಲ್ಲ.

**ಕುತ್ತಾಲ, ಸೇಲಂ, ಜಮ್ಖಲಮುಡಗು, ಧರ್ಮಾವರ, ಆದವಾನಿ ಕಡೆಗಳ ಸೀರೆಗಳೂ, ಜರತಾರಿ ಪಂಚೆ, ಶಲ್ಯ, ಪೇಟ, ರೇಷ್ಮೆವಸ್ತ್ರ ಅಲ್ದೇ ನಿತ್ಯೋಪಯೋಗಕ್ಕೆ ಕಡಿಮೆ ಬೆಲೆಯ ಎಲ್ಲಾ ತರಹೆ ಜವುಳಿಯೂ ಸಿಕ್ಕುತ್ತೆ.**

**ಮಳೆಗಾಲಕ್ಕೆ ಕಡಿಮೆ ಬೆಲೆ ಕೊಡೆಗಳಿವೆ !**

**ಚಳಿಗಾಲಕ್ಕೆ ಅಗ್ನಿಮಾರ್ಕ್ ಶಾಲು, ಒಳ್ಳೆಯ ರಗ್ಗು ಸ್ವೆಟರ್, ಮಫ್ಲರ್, ಉಲ್ಲನ್ ಕೋಟಿಂಗುಗಳೂ ಇವೆ !!**

ದರ್ಜಿಗಳ ತಾಪತ್ರಯ ಇಲ್ದೇ ಸಿದ್ಧಪಡಿಸಿರುವ ಉಡುಪುಗಳೂ ಇವೆ.

**ಸುಂಕ ಇಲ್ಲ. ಬೆಲೆ ಕಡಿಮೆ. ಖಾತ್ರಿ ಸ್ಥಳ.**

ಬೆಂಗಳೂರಿಗೆ ಹೋದರೆ ಖರ್ಚು ಹೆಚ್ಚು ; ವೃಥಾ ತೊಂದರೆ.
ಹುಳಿಯಾರಲ್ಲಿ ಎಲ್ಲೀಂದ್ರ ?

# ಟಿ. ಆರ್. ಶ್ರೀನಿವಾಸಶೆಟ್ಟಿ ಮತ್ತು ಸಹೋದರರು

**ವ್ಯಾಪಾರಿಗಳು : : ಹುಳಿಯಾರು**

# ಈ ಕತಾಸಂಕಲನದ ಬಗ್ಗೆ ವಿಮರ್ಶಕರೇನೆನ್ನುವರು?

ಸರಸವೂ ಮಾರ್ಮಿಕವೂ ಆದ ಎಂಟು ಕತೆಗಳ ಸಂಗ್ರಹವಿದು. ಲೇಖಕರುಗಳು ವಿಡಂಬನೆಯ ರೀತಿಯಲ್ಲಿ ಸಮಾಜದಲ್ಲಿನ 'ಗೋಮುಖವ್ಯಾಘ್ರ' ವ್ಯಕ್ತಿಗಳನ್ನೂ ಅವರ ಜೀವನವನ್ನೂ ಚಿತ್ರಿಸಿ ಸಮಾಜದಿಂದ ಅಂತಹವರನ್ನು ದೂರಮಾಡಲು, ಮತ್ತು ಸಾಧ್ಯವಿದ್ದಲ್ಲಿ ಈ ಮೂಲಕ ತಿದ್ದಲು ಪ್ರಯತ್ನಿಸಿದ್ದಾರೆ... ..ನಮ್ಮ ಸಮಾಜದಲ್ಲಿ ಅನೇಕ ಘಾತಕ ವ್ಯಕ್ತಿಗಳು ವಂಚನೆಯ ಮಾರ್ಗದಿಂದ ತಮ್ಮ ಶಕ್ತಿ ಬೆಳಸಿಕೊಳ್ಳುತ್ತಿದ್ದಾರೆ. ಅಂತಹವರನ್ನು ಕಂಡುಹಿಡಿಯಲು ಈ ಕಥಾ ಸಂಕಲನ ಕೈದೀವಿಗೆಯಾಗಿದೆ. ಕನ್ನಡದ ತರುಣ ಬರಹಗಾರರಿಂದ ಇಂತಹ ಪ್ರಭಾವಶಾಲಿ ಮತ್ತು ಧ್ಯೇಯವಾದಿ ಬರಹಗಳು ವಿಪುಲವಾಗಿ ಬರಲೆಂದು ಆಶಿಸುತ್ತೇವೆ.

— **ತಾಯಿನಾಡು–ಬೆಂಗಳೂರು**

ಇಲ್ಲಿನ ವ್ಯಕ್ತಿಗಳೆಲ್ಲ ನಿಜ ಪ್ರಪಂಚದವರು; ಚಿತ್ರಣ ಕೂಡ ಸಹಜ ಘಟನೆಗಳು ಅನುದಿನವೂ ಕಣ್ಣೆದುರು ನೋಡುವಂತಹವು.......ಬರಹಗಾರರ ಸತ್ಯದೃಷ್ಟಿ, ಶೈಲಿಯುಗತಿ ಓದುಗರ ಮನಸ್ಸನ್ನು ಸೆಳೆಯುತ್ತವೆ...ಶ್ರೇಷ್ಠ ಕತೆಗಳ ನಿರೀಕ್ಷಣೆಯನ್ನುಂಟುಮಾಡುತ್ತವೆ.

— **ಪ್ರಜಾವಾಣಿ–ಬೆಂಗಳೂರು**

ಕಥಾವಸ್ತು ಕಲ್ಪನಾ ಪ್ರಪಂಚದ್ದಾಗಿರದೆ ನಿತ್ಯಜೀವನದಲ್ಲಿ ಕಂಡ ಬರುವ ವ್ಯಕ್ತಿಗಳ ಸಮಾಜಘಾತಕ ನಡವಳಿಕೆಗಳನ್ನು ಚಿತ್ರಿಸುವಂಥದ್ದಾಗಿದೆ......ಅಲ್ಲಲ್ಲಿ ಹಾಸ್ಯದ ಹೊದಿಕೆಯನ್ನು ಹೊದಿಸಿ ಕಥೆಯನ್ನು ಪ್ರಭಾವಯುತವಾಗಿ ಹೆಣದಿದ್ದಾರೆ.

— **ವಿಶ್ವವಾಣಿ–ಮೈಸೂರು**

"...ಎಲ್ಲ ಕತೆಗಳೂ ಹೊಸ ವಸ್ತುಗಳಿಂದ, ಹೊಸ ವಿಷಯಗಳಿಂದ ಕೂಡಿವೆ. ..ಹೆಚ್ಚು ಕಡಿಮೆ ನಮ್ಮ ಸಮಾಜದ ಒಂದೊಂದು ಕುಂದುಕೊರತೆಗಳನ್ನು ನಿವೇದಿಸುತ್ತವೆ...ಅವರ ಕತೆಗಳು ಕಥಾ ಪ್ರಪಂಚದಲ್ಲಿ ಹೊಸಹಾದಿಯನ್ನು ಹಾಕಿಕೊಡಬಹುದಾಗಿವೆ.

— **ಕರ್ಮವೀರ–ಹುಬ್ಬಳ್ಳಿ**

ಈ ಕಥೆಗಳ ರಚನೆಯಲ್ಲಿ ಕತೆಗಾರರ ಧ್ಯೇಯ ಪ್ರಶಂಸನೀಯವಾಗಿದೆ. .. ಕಥೆಗಳೆಲ್ಲ ಸಮಾಜದಲ್ಲಿ ಇಂದು ಕಂಡುಬರುತ್ತಿರುವ ಲೋಪದೋಷಗಳನ್ನು ಎತ್ತಿ ಪ್ರತಿಬಿಂಬಿಸುವ ಕೈಗನ್ನಡಿಯಂತಿವೆ. ಇಂತಹ ತರುಣ ಲೇಖಕರು ಹೀಗೆ ಉನ್ನತ ಧ್ಯೇಯದಿಂದ ಕತೆ, ಕವಿತೆಗಳನ್ನು ರಚಿಸಿ ಧಾರ್ಮಿಕ, ನೈತಿಕ ಅಧೋಗತಿಗಿಳಿಯುತ್ತಿರುವ ಸಮಾಜಕ್ಕೆ ಮಾರ್ಗದರ್ಶಕರಾಗಲಿ.

— **ಸುಬೋಧ–ಬೆಂಗಳೂರು**

**ಸುದರ್ಶನ ಪ್ರಕಟನಾಲಯ-ಬೆಂಗಳೂರು ೨**